ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ
ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಸಂಶೋಧಕಿ

ಮಾರ್ಗದರ್ಶಕರು
ರಮೇಶ ನಾಯಕ
ಸಂಪನ್ಮೂಲ ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭-೨೦೦೮

ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕಿ
ಶಶಿಕಲಾ ಆರ್. ಇಂಜನಿ

ಮಾರ್ಗದರ್ಶಕರು
ರಮೇಶ ನಾಯಕ
ಹಿರಿಯಶ್ರೇಣಿ ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮

ದೃಢೀಕರಣ ಪತ್ರ

"ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ" ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶಶಿಕಲಾ. ಆರ್. ಇಂಜನಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 30-10-08

ಮಾರ್ಗದರ್ಶಕರು
ರಮೇಶ ನಾಯಕ
ಹಿರಿಯಶ್ರೇಣಿ ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪ್ರಮಾಣ ಪತ್ರ

"ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ" ಎಂಬ ಸಂಪ್ರಬಂಧವನ್ನು **ರಮೇಶ ನಾಯಕ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 30-10-8

ಶಶಿಕಲಾ. ಆರ್. ಇಂಜನಿ

ಸಂಶೋಧಕಿ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ

ಅಧ್ಯಾಯ : ಒಂದು

ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ

ಪ್ರಸ್ತಾವನೆ

ಹನ್ನೊಂದನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರು ನಮ್ಮ ನಾಡಿನ ಸಾರ್ವಭೌಮವಾಗಿ ಆಳ್ವಿಕೆ ಮಾಡಿದರು. ರಾಷ್ಟ್ರಕೂಟರನ್ನು ಹತ್ತಿಕ್ಕಿ ಸುಮಾರು ಎರಡುನೂರು ವರ್ಷಗಳ ಕಾಲ ರಾಜ್ಯಭಾರ ಮಾಡಿದ ಕಲ್ಯಾಣ ಚಾಲುಕ್ಯರು ಸಾಂಸ್ಕೃತಿಕವಾಗಿ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅವರ ಕಾಲದಲ್ಲಿ ಸಾಮ್ರಾಜ್ಯದ ಉದ್ದಗಲಕ್ಕೂ ನಿರ್ಮಾಣವಾಗಿರುವ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದ್ದರು. ವಿಶೇಷವಾಗಿ ತುಂಗಭದ್ರಾ ನದಿ ಪರಿಸರದಲ್ಲಿ ಮಹತ್ವದ ಕಲಾ ಸಂಸ್ಕೃತಿಯು ಬೆಳೆದು ಬಂದಿತು. ಆ ಕಾಲದ ಒಂದನೇ ಜಯಸಿಂಹ, ಎರಡನೆಯ ಸೋಮೇಶ್ವರ, ಐದನೆಯ ವಿಕ್ರಮಾದಿತ್ಯ ಅಲ್ಲದೇ ಕನ್ನಡ ಶಾಸನಗಳ ಪೋಷಕರಲ್ಲಿ ಅಗ್ರಗಣ್ಯವೆನಿಸಿರುವ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ನಮ್ಮ ನಾಡಿನ ಕಲೆಯ ಸಂಸ್ಕೃತಿಯು ಭವ್ಯವಾಗಿ ನಿರ್ಮಾಣಗೊಂಡಿತು.[೧] ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದ ಅರಸರಷ್ಟೇ ಅಲ್ಲದೇ ಅವರ ರಾಣಿಯರುಗಳು ಸಹ ಅಚ್ಚಳಿಯದ ಸಾಂಸ್ಕೃತಿಕ ಕಾರ್ಯಗಳನ್ನು ಮಾಡಿರುವ ಉಲ್ಲೇಖಗಳಿವೆ. ಆ ಕಾಲದಲ್ಲಿ ಸಾಮಾಜಿಕವಾಗಿ ಹೆಚ್ಚಿನ ಸ್ಥಾನಮಾನಗಳನ್ನು ಹೊಂದಿದ್ದ ರಾಜಪರಿವಾರದ ಸ್ತ್ರೀ ಸಮುದಾಯ ಐತಿಹಾಸಿಕವಾಗಿ ಕೈಗೊಂಡ ಸಾಂಸ್ಕೃತಿಕ ಕಾರ್ಯಗಳು ಶ್ಲಾಘನೀಯವಾದವು. ಅಧಿಕಾರಸ್ಥ ಮಹಿಳಾ ಸಮುದಾಯ ತಾವು ಹೊಂದಿದ್ದ ಸ್ಥಾನ-ಮಾನಗಳನ್ನು ವಿಶೇಷವಾಗಿ ದಾನದತ್ತಿ ದೇವಾಲಯ, ಕೆರೆ ಹಾಗೂ ಕಟ್ಟೆ ನಿರ್ಮಾಣಗಳಂತಹ ಸಾಮಾಜಿಕ ಕಾರ್ಯಗಳನ್ನು ಮಾಡಿರುವುದು ಚರಿತ್ರೆಯಲ್ಲಿ ದಾಖಲಾಗಿರುವುದನ್ನು ಕಾಣುತ್ತೇವೆ. ಆದರೆ ಕೆಳವರ್ಗದ ಸಾಮಾನ್ಯ ಸ್ತ್ರೀ ಸಮುದಾಯ ಯಾವುದೇ ನಿರ್ದಿಷ್ಟ ಅಧಿಕಾರ ಹಾಗೂ ಹಕ್ಕುಗಳನ್ನು ಹೊಂದಿರದೆ ನಿರಂತರ ಶೋಷಣೆಗೆ ಒಳಗಾಗುತ್ತಿತ್ತು. ಅಂಥ ಸ್ತ್ರೀಯರ ಬಗೆಗೆ ಇತಿಹಾಸದಲ್ಲಿ ಯಾವುದೇ ವಿವರಗಳು ದಾಖಲಾಗಿರದ್ದು ವ್ಯಂಗವೇ ಆಗಿದೆ.

ಪ್ರಾಚೀನ ವ್ಯವಸ್ಥೆ ಬಗೆಗೆ ನಿರ್ಮಿತವಾಗಿರುವ ದಾಖಲೆಗಳಲ್ಲಿ ಮಹಿಳೆಯರ ಸ್ಥಾನ-ಮಾನಗಳ ಕುರಿತು ಉತ್ಪ್ರೇಕ್ಷಿತವಾಗಿ ಬರೆದಿರುವ ಹಲವು ಉದಾಹರಣೆಗಳಿವೆ. ಆದರೆ ಅವುಗಳಾವವು ವಾಸ್ತವವಾಗಿ ರೂಢಿಯಲ್ಲಿರದೇ ಸ್ತ್ರೀ ಸಮುದಾಯವನ್ನು ತನಗೆ ಅನುಕೂಲವಾಗುವಂತೆ ಬಳಸಿಕೊಳ್ಳುವ ನಿರ್ಧಾರದ ಅಂತಿಮವಾದ ಶಕ್ತಿಕೇಂದ್ರ ಪುರುಷ ಸಮಾಜವೆಂದರೆ ತಪ್ಪಾಗಲಾರದು. ಮಹಿಳೆಯ

ವ್ಯಕ್ತಿತ್ವವನ್ನು ಭವ್ಯವಾಗಿ ನಿರ್ಮಿಸುವ ಮೂಲಕ ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಪ್ರಯತ್ನವನ್ನು ಪುರುಷ ಸಮಾಜ ಸದಾಕಾಲ ಮಾಡುತ್ತಾ ಬಂದಿದೆ. ಹೀಗಾಗಿ ಸ್ತ್ರೀಯರನ್ನು ತಾಳ್ಮೆ, ತ್ಯಾಗ ಮತ್ತು ಬಲಿದಾನಗಳ ಪ್ರತೀಕವೆಂಬಂತೆ ಬಿಂಬಿಸಲಾಯಿತೇ, ಹೊರತು ಶೋಷಣೆಯ ಇನ್ನೊಂದು ಕರಾಳ ಮುಖವನ್ನು ಚಿತ್ರಿಸಲೇ ಇಲ್ಲ. ಪ್ರಾಚೀನ ಕಾಲದಿಂದಲೂ ವಸ್ತುನಿಷ್ಠವಾದ ಸ್ತ್ರೀ ಚರಿತ್ರೆ ಅಥವಾ ಅವರ ನಿಜವಾದ ಬದುಕು ಅಧ್ಯಯನಗಳಲ್ಲಿ ತಕ್ಕಮಟ್ಟಿಗೆ ಪ್ರತಿಪಾದನೆ ಆಗಲೇ ಇಲ್ಲ. ಇದು ಎಲ್ಲ ಕಾಲಕ್ಕೂ ನಡೆದಿರುವ ಹಾಗೂ ನಡೆಯುತ್ತಿರುವ ವಿಷಯವಾಗಿದೆ. ಅಲ್ಲದೇ ಇಂಥ ಕೊರತೆಗಳನ್ನು ಇತ್ತೀಚಿನ ದಿನಗಳಲ್ಲಿ ನೀಗಿಸುವ ಪ್ರಯತ್ನಗಳು ಸಹ ಅಧ್ಯಯನಗಳ ಮೂಲಕ ಕೈಗೊಳ್ಳುತ್ತಿರುವುದು ಸ್ತುತ್ಯರ್ಹವಾದುದು.

ಪ್ರಾಚೀನ ಇತಿಹಾಸದಲ್ಲಿ ದಾಖಲಾಗಿರುವ ಅಕ್ಕಾದೇವಿಯು ಕಲ್ಯಾಣದ ಚಾಲುಕ್ಯ ಮನೆತನಕ್ಕೆ ಸೇರಿದವಳು. ಬಂಕಾಪುರದ ಕದಂಬ ಅರಸನ ಜೊತೆಗೆ ವೈವಾಹಿಕ ಸಂಬಂಧವೇರ್ಪಟ್ಟರೂ ಕಾರಣಾಂತರಗಳಿಂದ ಕೆಲವು ಘಟನೆಗಳು ಅವಳನ್ನು ಬೇರ್ಪಟ್ಟಿರಬಹುದು. ಆದರೆ ಇಂಥ ಯಾವ ಘಟನೆಗಳು ಅವಳನ್ನು ವಿಚಲಿತಗೊಳಿಸಲಿಲ್ಲ. ರಾಜಕೀಯ ಎಲ್ಲ ತಂತ್ರಗಳನ್ನು ಬಲ್ಲವಳಾಗಿದ್ದ ಅಕ್ಕಾದೇವಿಯೂ ತನ್ನ ಜೀವಿತಾವಧಿಯವರೆಗೂ ಸ್ವತಂತ್ರಳಾಗಿಯೇ ರಾಜ್ಯಭಾರ ಮಾಡಿದಳು.[೩]

ಕಿಸುಕಾಡು–೭೦ರ ಆಡಳಿತ ವಿಭಾಗದ ಅಧಿಕಾರಣಿಯಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದಳು. ಈ ಆಡಳಿತ ವಿಭಾಗಕ್ಕೆ ವಿಕ್ರಮಪುರ (ಅರಸೀಬೀದಿ) ರಾಜಧಾನಿ ಪಟ್ಟಣವಾಗಿತ್ತು. ಕಿಸುಕಾಡು–೭೦ರ ಆಡಳಿತ ವಿಭಾಗದ ನಾಯಕಳಾಗಿದ್ದಲ್ಲದೇ ಇದರ ಸುತ್ತಲಿನ ಆಡಳಿತ ವಿಭಾಗಗಳಾದ ಮಾಸವಾಡಿ–೧೪೦, ತೊರೆಗೆರೆ–೬೦, ಬಾಗಡಗೆ–೭೦ ಇನ್ನೂ ಹಲವಾರು ಆಡಳಿತ ವಿಭಾಗಗಳ ಸೀಮೆಯವರೆಗೂ ತನ್ನ ಹಿಡಿತವನ್ನು ಸಾಧಿಸಿದ್ದಳು. ಇದಕ್ಕೆ ಪೂರಕವಾಗಿ ಅನೇಕ ದಾಖಲೆಗಳು ಕಂಡುಬಂದಿವೆ.೪ ಇಂದಿನ ಬಾಗಲಕೋಟೆ ಜಿಲ್ಲೆ ಹಾಗೂ ಗದಗ ಜಿಲ್ಲೆಯ ರೋಣ, ಮುಂಡರಗಿ ಹಾಗೂ ಗದಗ ತಾಲ್ಲೂಕು ಪ್ರದೇಶಗಳಲ್ಲಿ ಮೇಲೆ ಸೂಚಿಸಿದ ಆಡಳಿತ ವಿಭಾಗಗಳು ಹಂಚಿಕೆಯಾಗಿದ್ದವು. ಬಹು ವಿಸ್ತಾರದ ಈ ಪ್ರದೇಶಗಳ ಆಡಳಿತವನ್ನು ತನ್ನ ಚಾಣಾಕ್ಷ ನೀತಿಗಳಿಂದ ನಿರ್ವಹಿಸಿದಳು. ರಾಜಧಾನಿ ಒಳಗೊಂಡಂತೆ ಆಡಳಿತ ವಿಭಾಗದ ಬೇರೆ ಬೇರೆ ಸ್ಥಳಗಳಲ್ಲಿ ಹಲವು ಭೌತಿಕ ನಿರ್ಮಾಣಗಳನ್ನು ಮಾಡಿದಳು. ಸುಮಾರು ಐವತ್ತು ವರ್ಷಗಳ ಕಾಲ ಸ್ವತಂತ್ರವಾಗಿ ರಾಜ್ಯಭಾರ ಮಾಡಿದ ಅಕ್ಕಾದೇವಿಯು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ನಮ್ಮ ನಾಡಿಗೆ ನೀಡಿದ್ದಾಳೆ. ಪ್ರಾಚೀನ ಕಾಲದ ಜಡತ್ವಗೊಂಡಿದ್ದ ಸಮಾಜದಲ್ಲಿ ತನ್ನ ಸ್ವಸಾಮರ್ಥ್ಯದ ಕಾರ್ಯನಿರ್ವಹಣೆಯಿಂದ ಇತಿಹಾಸದಲ್ಲಿ ದಾಖಲಾಗಿದ್ದಾಳೆ. ಇವಳ ಕುರಿತಂತೆ ಚಾರಿತ್ರಿಕ ನೆಲೆಗಟ್ಟಿನಲ್ಲಿನ ವಿವರವಾದ

ಅಧ್ಯಯನಗಳು ಅತ್ಯಂತ ಕಡಿಮೆ. ಈ ನಿಟ್ಟಿನಲ್ಲಿ ಅಧ್ಯಯನದ ಅವಶ್ಯಕತೆ ಮನಗಂಡು 'ಅಕ್ಕಾದೇವಿ', 'ಚಾರಿತ್ರಿಕ ಅಧ್ಯಯನ' ಎಂಬ ವಿಷಯವನ್ನು ಅಧ್ಯಯನದಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗುವುದು.

ಅಧ್ಯಯನದ ಉದ್ದೇಶ:

ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ರಾಜರ ಜೊತೆಗೆ ರಾಣಿಯರು ಸಹ ದಾಖಲಾಗಿದ್ದಾರೆ. ಕೆಲವು ಸಂದರ್ಭಗಳಲ್ಲಿ ನಿಜವಾದ ಸಾರ್ವಭೌಮ ಅಧಿಕಾರ ರಾಣಿಯರ ಕೋಣೆಗಳಲ್ಲಿ ನಿರ್ಣಯವಾಗುತ್ತಿದ್ದವು. ಅದನ್ನು ಅವರು ಸಮಯ ಸಾಧಿಸಿ ಚಲಾಯಿಸುತ್ತಿದ್ದುದುಂಟು. ಆದರೂ ಹೆಚ್ಚಿನ ಸಂದರ್ಭಗಳಲ್ಲಿ ರಾಜನ ಆಧೀನವಾಗಿ ತನ್ನನ್ನು ಅರ್ಪಿಸಿಕೊಂಡಿದ್ದಾಳೆ. ರಾಣಿಯಾಗಿ, ಮಡದಿಯಾಗಿ, ಸೇವಕಿಯಾಗಿ ಸ್ತ್ರೀಯು ಬಿಂಬಿತಳಾಗಿದ್ದಾಳೆ. ರಾಜನಿಗೆ ಸಂಬಂಧಿಸಿದ ಸ್ತ್ರೀ ಪರಿವಾರದ ಕೆಲವು ಸ್ತ್ರೀಯರನ್ನು ಅರಸಿ, ಚಕ್ರವರ್ತಿನಿ, ಪಟ್ಟದ ಅರಸಿ, ರಾಜನ ಪತ್ನಿ ಹಾಗೂ ಮಹಾರಾಣಿ ಎಂಬ ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅಂಥವರಲ್ಲಿ ಉಲ್ಲೇಖಿಸಬಹುದಾದ ಹೆಸರುಗಳೆಂದರೆ ಬಾದಾಮಿ ಚಾಲುಕ್ಯ ಅರಸ ಎರಡನೆಯ ಪುಲಕೇಶಿಯ ಮಗ ಚಂದ್ರಾದಿತ್ಯನ ಮಡದಿ ವಿಜಯಭಟ್ಟಾರಿಕೆ ಇವಳು ಸಂಸ್ಕೃತ ವಾಙ್ಮಯಲ್ಲಿ ಪಂಡಿತೆಯಾಗಿದ್ದಳು. ಸಂಸ್ಕೃತದಲ್ಲಿಯೇ ವಿಜಯಭಟ್ಟಾರಿಕೆಯು 'ಕೌಮುದಿ ಮಹೋತ್ಸವ' ಎಂಬ ನಾಟಕ ಗ್ರಂಥವನ್ನು ರಚಿಸಿದ್ದಾಳೆ. ಇದು ಅಂದಿನ ಕಾಲದ ಸುಪ್ರಸಿದ್ಧ ನಾಟಕವಾಗಿತ್ತು.[೫] ರಾಷ್ಟ್ರಕೂಟ ಅರಸ ದಂತಿದುರ್ಗದ ತಾಯಿ ನಾಲ್ಕು ಲಕ್ಷ ಗ್ರಾಮಗಳುಳ್ಳ ರಾಜ್ಯದಲ್ಲಿನ ಪ್ರತಿಯೊಂದು ಗ್ರಾಮದಲ್ಲಿ ಭೂದಾನ ಮಾಡಿದ್ದಾಳೆಂದು ತಿಳಿದುಬರುತ್ತದೆ.[೬]

ಒಂದನೆಯ ಸೋಮೇಶ್ವರನ ಮಗಳು ಹಾಗೂ ಮಹಾಮಂಡಳೇಶ್ವರ ಸಿಂಹಣದೇವರಸನ ಮಡದಿ ಸುಗ್ಗಲದೇವಿ ಇವಳು ರಾಜಕೀಯದಲ್ಲಿ ಆಸಕ್ತಳಾಗಿರುವ ಬಗೆಗೆ ಮಾಹಿತಿ ದೊರಕುತ್ತದೆ. ಅಕ್ಕಾದೇವಿಯ ನಂತರ ಈ ರಾಣಿಗೆ ಕಿಸುಕಾಡು-೭೦ರ ಆಡಳಿತ ವಿಭಾಗದ ಅಧಿಕಾರ ದೊರಕಿತ್ತು. ಕ್ರಿ.ಶ. ೧೦೭೬ರ ಶಾಸನ ಅವಳ ಧಾರ್ಮಿಕ ದಾನದತ್ತಿಗಳನ್ನು ಕೈಗೊಂಡಿರುವ ಬಗೆಗೆ ವಿವರಿಸುತ್ತದೆ.[೭] ಇಂಥ ಕೆಲವೇ ಕೆಲವು ಮಹಿಳೆಯರ ಬಗ್ಗೆ ಚರಿತ್ರೆಯಲ್ಲಿ ದಾಖಲಾಗಿದ್ದರೂ ಅವರನ್ನು ಕೇವಲ ದಾನ-ದತ್ತಿ, ಸಾಹಿತ್ಯ, ಕಲೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಆದರೆ ಸ್ವತಂತ್ರ ರಾಜ್ಯಭಾರ, ಯುದ್ಧ, ರಾಜ್ಯ ವಿಸ್ತರಣಾ ನೀತಿಯ ಪ್ರಮುಖ ಸಂಗತಿಗಳ ಬಗೆಗೆ ಅವಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡದೆ ಇರುವುದು ತಿಳಿದುಬರುತ್ತದೆ. ಅದೇ ರೀತಿ ರಾಣಿಯರ ಬಗೆಗೆ ವಿವರಿಸುವ ಆಕರಗಳಾದ ಶಾಸನ, ಶಿಲ್ಪ, ಮಾಸ್ತಿಕಲ್ಲು, ವೀರಗಲ್ಲು ಹಾಗೂ ದೇವಾಲಯಗಳಿಂದ ತಿಳಿಯಬಹುದಾದ ವಿವರಗಳೆಂದರೆ ಆಯಾ ಕಾಲದಲ್ಲಿ

ರಾಣಿಯರು ಮಾಡಿದ ದಾನ-ದತ್ತಿ ಕಾರ್ಯಗಳ ಬಗೆಗೆ ಮಾತ್ರ ಉಲ್ಲೇಖಿಸಲಾಗಿದೆ. ಅಲ್ಲದೇ ವ್ಯಕ್ತವಾಗಿರುವ ರಾಣಿಯರ ಬಗೆಗೆ ಅವರು ತಮ್ಮದೇ ಆದ ಜೀವನಶೈಲಿ ಸಂಪ್ರದಾಯಗಳನ್ನು ರೂಢಿಸಿಕೊಂಡಿರುವ ಬಗೆಗೆ ಹೆಚ್ಚಿನ ಉತ್ಪ್ರೇಕ್ಷಗಳು ತುಂಬಿಕೊಂಡಿವೆ. ಇವುಗಳಿಗೆಲ್ಲಾ ಅಪವಾದವೆಂಬಂತೆ ಕಲ್ಯಾಣದ ಚಾಲುಕ್ಯ ಅರಸಿ ಅಕ್ಕಾದೇವಿಯು ಸ್ವತಂತ್ರ ರಾಜ್ಯಭಾರ ನಿರ್ವಹಿಸಿದಳು. ತನಗೆ ವಿರುದ್ಧವಾಗಿ ನಿಂತವರನ್ನು ರಣರಂಗದಲ್ಲಿ ಎದುರಿಸಿ ಅಟ್ಟಿದಳು. ಒಬ್ಬ ಪುರುಷ ರಾಜ ಮಾಡುವ ಕಾರ್ಯಗಳನ್ನೆಲ್ಲ ತನ್ನ ಚಾಣಾಕ್ಷ ನೀತಿಯಿಂದ ನಿರ್ವಹಿಸಿದಳು. ಕಲ್ಯಾಣದ ಚಾಲುಕ್ಯ ಅಕ್ಕಾದೇವಿ ಸ್ವತಂತ್ರ ರಾಜ್ಯಭಾರ ಮಾಡಿದ ಅದ್ವಿತೀಯ ಮಹಿಳೆ. ಇವಳು ತನ್ನ ಆಡಳಿತ ಅವಧಿಯಲ್ಲಿ ರಾಜಕೀಯ ಸಾಮಾಜಿಕ, ಧಾರ್ಮಿಕ ಹಾಗೂ ವಿದ್ಯಾ ಸಂಸ್ಥೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಅವುಗಳ ಬೆಳವಣಿಗೆಗೆ ಅವಶ್ಯಕವಾದ ದಾನ-ದತ್ತಿ ಕೊಡಮಾಡಿ ಬೆನ್ನೆಲುಬಾಗಿ ನಿಂತಳು. ಇಂಥ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ ಅಕ್ಕಾದೇವಿ ಬಗೆಗೆ ಪ್ರಾಚೀನ ಚರಿತ್ರೆಯಲ್ಲಿ ಹಲವು ಮಾಹಿತಿಗಳು ದಾಖಲಾಗಿದೆ.

ಚಾಲುಕ್ಯ ಅರಸ ದಶವರ್ಮ ಮತ್ತು ರಾಣಿ ಭಾಗಲಾದೇವಿಯವರ ಮಗಳಾಗಿದ್ದ ಅಕ್ಕಾದೇವಿಯು ಸಹಜವಾಗಿ ರಾಜಕೀಯ ಆಗುಹೋಗುಗಳ ಬಗೆಗೆ ಹೆಚ್ಚಿನ ಆಸಕ್ತಿ ಮತ್ತು ತಿಳುವಳಿಕೆ ಹೊಂದಿದ್ದಳು. ರಾಜಮನೆತನದಲ್ಲಿ ಬೆಳೆದ ಅಕ್ಕಾದೇವಿಯು ಪ್ರೌಢಾವ್ಯಸ್ಥೆಗೆ ಬರುವ ಹೊತ್ತಿಗೆ ರಾಜಕೀಯ ಎಲ್ಲ ವರಸೆಗಳನ್ನು ಬಲ್ಲವಳಾಗಿದ್ದು, ಅವುಗಳ ಪ್ರಯೋಗದಲ್ಲಿ ತೊಡಗಿದ್ದಳು. ಕದಂಬ ಅರಸ ಮಯೂರವರ್ಮನೊಡನೆ ಅಕ್ಕಾದೇವಿಯ ಮದುವೆ ಮಾಡಿ ಕಲ್ಯಾಣ ಚಾಲುಕ್ಯ ಅರಸರು ತಮ್ಮ ಸಂಬಂಧವನ್ನು ಗಟ್ಟಿಗೊಳಿಸಿಕೊಂಡರು. ಮಯೂರವರ್ಮನ ಜೊತೆಗೂಡಿದ ಅಕ್ಕಾದೇವಿಯು ಕೆಲ ವರ್ಷ ಬಂಕಾಪುರ ಹಾಗೂ ಹಾನಗಲ್ಲು ಪ್ರದೇಶದಲ್ಲಿ (ಬನವಾಸಿನಾಡು) ಆಳ್ವಿಕೆ ನಡೆಸಿದಳು. ಬನವಾಸಿ ನಾಡಿನಲ್ಲಿ ಆಳ್ವಿಕೆ ಮಾಡಿದ ಸೂಚನೆಯ ಕೆಲವೇ ವರ್ಷಗಳಲ್ಲಿ ಮತ್ತೆ ಕಿಸುಕಾಡು-೭೦ರಲ್ಲಿ ಆಳ್ವಿಕೆ ಮಾಡಿರುವ ಆಧಾರಗಳು ಹೆಚ್ಚು ಕಂಡುಬರುತ್ತವೆ. ಬಹುಶಃ ಮಯೂರವರ್ಮನ ಜೊತೆಗಿನ ವೈವಾಹಿಕ ಸಂಬಂಧ ಕ್ಷೀಣಗೊಂಡಿರಬಹುದು. ಅಥವಾ ಆತನ ಅಕಾಲ ಮರಣದಿಂದ ಮರಳಿ ಕಿಸುಕಾಡು-೭೦ರ ಆಡಳಿತ ವಿಭಾಗವನ್ನು ವಹಿಸಿಕೊಂಡಿರಬಹುದೆಂದು ಅಭಿಪ್ರಾಯಿಸಿದ್ದಾರೆ. ಮಯೂರವರ್ಮನ ಅಕಾಲ ಮರಣ ಅಥವಾ ವೈವಾಹಿಕ ಸಂಬಂಧ ಮುರಿದು ಬಿದ್ದಿರುವುದರ ಬಗೆಗೆ ಸ್ಪಷ್ಟ ಮಾಹಿತಿಗಳಿಲ್ಲ.

ಕಿಸುಕಾಡು-೭೦ರ ಆಡಳಿತ ವಿಭಾಗದ ರಾಜಧಾನಿ ವಿಕ್ರಮಪುರದಿಂದ ತನ್ನ ಬದುಕಿನ ಹೆಚ್ಚಿನ ಅವಧಿಯವರೆಗೆ ಆಳ್ವಿಕೆ ಮಾಡಿದಳು. ಅರಸಿ ಅಕ್ಕಾದೇವಿಯ ಆಳ್ವಿಕೆ ಹಿನ್ನೆಲೆಯಲ್ಲಿ ವಿಕ್ರಮಪುರ ಪಟ್ಟಣವನ್ನು ಎಂತಲೂ ಕರೆಯಲಾಗುತ್ತದೆ. ವಿಕ್ರಮಪುರ ಅಥವಾ ಅರಸಿಬೀದಿಯು

ಐತಿಹಾಸಿಕ ಪ್ರಸಿದ್ಧ ಐಹೊಳೆಯಿಂದ ಉತ್ತರಕ್ಕೆ ಸುಮಾರು ಎಂಟು ಮೈಲುಗಳ ದೂರದಲ್ಲಿದೆ. ಐಹೊಳೆ ಮತ್ತು ಕೆಲೂರು ಮಾರ್ಗದ ಮಧ್ಯ ಬರುವ ಈ ಪ್ರಾಚೀನ ಪಟ್ಟಣ ಸಂಪೂರ್ಣವಾಗಿ ಹಾಳಾಗಿದೆ. ಇದರ ಬಗೆಗೆ ಪ್ರಬಂಧದಲ್ಲಿ ವಿವರಿಸಲಾಗಿದೆ.

ರೋಣ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಇನ್ನೊಂದು ಗ್ರಾಮ ಸೂಡಿಯು ಅಕ್ಕಾದೇವಿಯ ಆಳ್ವಿಕೆಗೆ ಒಳಪಟ್ಟಿತ್ತು. ರಾಜಧಾನಿ ಪಟ್ಟಣ ವಿಕ್ರಮಪುರವನ್ನು ಹೊರತುಪಡಿಸಿದರೆ ಸೂಡಿಯಲ್ಲಿ ಕೆಲವು ಮಹತ್ವದ ದೇವಾಲಯಗಳು ಅಕ್ಕಾದೇವಿ ಕಾಲದಲ್ಲಿ ನಿರ್ಮಾಣವಾಗಿವೆ. ಹಾಗೂ ಅವುಗಳ ನಿತ್ಯ ನಿರ್ವಹಣೆಗೆ ದಾನ-ದತ್ತಿ ನೀಡಿರುವ ಉಲ್ಲೇಖಗಳಿವೆ.[೯]

ಕಿಸುಕಾಡು-೭೦ನ್ನು ಹೊರತುಪಡಿಸಿ ಮಾಸವಾಡಿ-೧೪೦, ಬೆಳ್ವೊಲ-೩೦೦ರ ಆಡಳಿತ ವಿಭಾಗಗಳು ಕೆಲವು ಪ್ರದೇಶಗಳು ಅಕ್ಕಾದೇವಿ ಆಡಳಿತಕ್ಕೆ ಒಳಪಟ್ಟಿರುವ ಮಾಹಿತಿಗಳಿವೆ. ಇದೇ ರಾಣಿಗೆ ಸಂಬಂಧಿಸಿದ ಎರಡೂ ಮಹತ್ವದ ಸಂಗತಿಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಒಂದು ಗೋಕಾಕದ ಕೋತ್ವಾಲನ ಮೇಲೆ ದಂಡೆತ್ತಿ ಆತನನ್ನು ಅಧೀನ ಮಾಡಿಕೊಂಡಿದ್ದು[೧೦] ಹಾಗೂ ತೊರಗೆಲೆ ಪ್ರದೇಶದಲ್ಲಿ ತನ್ನ ಆಡಳಿತವನ್ನು ವಿಸ್ತರಿಸಿರುವ ಬಗೆಗೆ ಉಲ್ಲೇಖಗಳಿವೆ. ಹತ್ತು ಹಲವು ರಾಜಕೀಯ ಸಾಧನೆ ಮಾಡಿರುವ ಅಕ್ಕಾದೇವಿಯ ಬಗೆಗೆ ಸಮಗ್ರವಾದ ಅಧ್ಯಯನದ ಅವಶ್ಯಕತೆಯ ಹಿನ್ನೆಲೆಯಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಅಕ್ಕಾದೇವಿಯ ಚಾರಿತ್ರಿಕ ಅಧ್ಯಯನ ಎಂಬ ವಿಷಯ ವ್ಯಾಪ್ತಿಯು ಅವಳು ಆಳ್ವಿಕೆ ಮಾಡಿದ ಕಾಲಾವಧಿಯನ್ನು ಒಳಗೊಂಡಿರುತ್ತದೆ. ಕ್ರಿ.ಶ. ೧೦೧೦ರಿಂದ ಕ್ರಿ.ಶ. ೧೦೬೪ರವರೆಗೆ ಅಂದರೆ ತನ್ನ ಜೀವಿತಾವಧಿಯ ಐವತ್ನಾಲ್ಕು ವರ್ಷಗಳ ಕಾಲ ಸ್ವತಂತ್ರವಾಗಿ ರಾಜ್ಯಭಾರ ಮಾಡಿರುವಳು. ಹಲವಾರು ಯುದ್ಧಗಳನ್ನು ಕೈಗೊಂಡು ರಾಜ್ಯವನ್ನು ವಿಸ್ತರಿಸಿದಳು. ತನ್ನ ಆಡಳಿತಾವಧಿಯಲ್ಲಿ ಮಹತ್ವದ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದಳು. ಕಿಸುಕಾಡು-೭೦, ಮಾಸವಾಡಿ-೧೪೦, ತೊರಗೆರೆ-೬೦, ಹಾಗೂ ಬಾಗಡಗೆ-೭೦, ಆಡಳಿತ ವಿಭಾಗಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದವು. ಈ ಹಿಂದೆ ಹೆಸರಿಸಿದ ಪ್ರಾಚೀನ ಆಡಳಿತ ವಿಭಾಗಗಳು ಇಂದಿನ ಬಾಗಲಕೋಟೆ ಜಿಲ್ಲೆ ಹಾಗೂ ಗದಗ, ಬಿಜಾಪುರ, ಕೊಪ್ಪಳ ಜಿಲ್ಲೆಗಳ ಕೆಲವು ಪ್ರದೇಶಗಳನ್ನು ಒಳಗೊಂಡಿದ್ದವು. ಈ ಪ್ರದೇಶಗಳಲ್ಲಿ ಅವಳ ಕಾಲಾವಧಿಯಲ್ಲಿ ಸಿಗುವ ಎಲ್ಲ ದಾಖಲೆಗಳನ್ನು ಬಳಸಿಕೊಂಡು ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ ಎಂಬ ವಿಷಯ ವ್ಯಾಪ್ತಿಯನ್ನು ನಿರ್ಧರಿಸಿಕೊಳ್ಳಲಾಗಿದೆ. ಅವಳು ನಿರ್ವಹಿಸಿದ ರಾಜಕೀಯ ಸಾಧನೆಗಳು ಹಾಗೂ ಅವಳು ನಿರ್ಮಿಸಿದ ಸಾಂಸ್ಕೃತಿಕ ಕೊಡುಗೆಗಳನ್ನು ಪ್ರಬಂಧದ ವ್ಯಾಪ್ತಿಯಲ್ಲಿ ತರಲು ಪ್ರಯತ್ನಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಪ್ರಬಂಧ ರಚನೆಯಲ್ಲಿ ಬಳಸಿಕೊಳ್ಳುವ ವಿಧಾನಗಳ ಬಗೆಗೆ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಪ್ರಕಟಗೊಂಡಿರುವ ಮಾಹಿತಿಗಳು ಹಾಗೂ ಶಾಸನಾಧಾರಗಳನ್ನು ಆಧಾರವಾಗಿಟ್ಟುಕೊಂಡು, ಅವಳ ಜೀವನ ಸಂಬಂಧಗಳು ಹಾಗೂ ಅಕ್ಕಾದೇವಿ ಕೈಗೊಂಡ ರಾಜಕೀಯ ವಿಸ್ತಾರಗಳು ಮತ್ತು ಅವಳ ಆಡಳಿತ ನಿರ್ವಹಣೆ ಕುರಿತಂತೆ ಚರ್ಚಿಸಲಾಗುವುದು. ಮೂರನೆಯ ಅಧ್ಯಾಯದಲ್ಲಿ ಅಂದಿನ ಸಮಾಜೋ-ಧಾರ್ಮಿಕ ವಿಚಾರಗಳನ್ನು ಪ್ರಬಂಧಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಅಕ್ಕಾದೇವಿಯ ಕಾಲದಲ್ಲಿ ಹಾಗೂ ಅವಳೇ ನಿರ್ಮಿಸಿರುವ ದೇವಾಲಯಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳ ಕುರಿತಂತೆ ವಿವರವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಕ್ಷೇತ್ರಕಾರ್ಯಾಧಾರಿತ ಈ ಅಧ್ಯಾಯದಲ್ಲಿ ದೇವಾಲಯ ಹಾಗೂ ಶಿಲ್ಪಗಳ ಛಾಯಾಚಿತ್ರ ಹಾಗೂ ನಕ್ಷೆಗಳನ್ನು ಅಳವಡಿಸಿಕೊಂಡು ವಿಶ್ಲೇಷಿಸಲಾಗಿದೆ. ಅಧ್ಯಾಯ ಐದರಲ್ಲಿ ಉಪಸಂಹಾರ ಎಂಬ ಶೀರ್ಷಿಕೆಯಲ್ಲಿ ಒಟ್ಟಾರೆ ಅಧ್ಯಯನದಲ್ಲಿ ಕಂಡುಕೊಳ್ಳುವ ಫಲಿತಗಳ ಕುರಿತು ವಿವೇಚಿಸಲಾಗಿದೆ. ಸ್ಥೂಲವಾಗಿ ವಿಷಯದ ವ್ಯಾಪ್ತಿಯನ್ನು ಮೇಲಿನಂತೆ ರೂಪಿಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ:

ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ ಎಂಬ ಪ್ರಬಂಧದ ರಚನೆಯಲ್ಲಿ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ ವಿಧಾನಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಈ ರೀತಿಯ ಅಧ್ಯಯನಗಳಿಗೆ ಆಧಾರಗಳು ಬಹುಮುಖ್ಯವಾಗಿದೆ. ಹೀಗಾಗಿ ಪ್ರಬಂಧವನ್ನು ಪ್ರಾಥಮಿಕ ಆಧಾರಗಳಾದ ಶಾಸನ ದೇವಾಲಯ, ಶಿಲ್ಪ ಹಾಗೂ ಆ ಕಾಲದಲ್ಲಿ ನಿರ್ಮಾಣವಾದ ಕೆರೆ-ಕಟ್ಟೆಗಳನ್ನು ಗಮನಿಸಲಾಗಿದೆ.

ಅಲ್ಲದೇ ಪ್ರಕಟಿತ ಶಾಸನ ವಿವರಗಳು, ಲೇಖನಗಳು ಹಾಗೂ ಗ್ರಂಥಗಳನ್ನು ಪ್ರಾಥಮಿಕ ಮೂಲಾಧಾರಗಳಿಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಪ್ರಬಂಧದಲ್ಲಿ ಒಂದು ಪ್ರಮುಖ ಅಧ್ಯಾಯವಾಗಿರುವ ದೇವಾಲಯ ಹಾಗೂ ಶಿಲ್ಪಗಳ ಕುರಿತಂತೆ ಬರೆಯುವಾಗ ಕ್ಷೇತ್ರಾಧಾರಿತ ಆಧಾರ ವಿಧಾನವನ್ನು ಅವಲಂಬಿಸಲಾಗುವುದು. ಅಲ್ಲದೇ ಈಗಾಗಲೇ ಪ್ರಕಟಗೊಂಡಿರುವ ಸಂಬಂಧಿಸಿದ ಪ್ರಬಂಧಗಳು ಹಾಗೂ ಲೇಖನಗಳನ್ನು ಅವಲೋಕಿಸಿ ಪ್ರಸ್ತುತ ಪ್ರಬಂಧದಲ್ಲಿ ಬಳಸಿಕೊಳ್ಳಲಾಗುವುದು. ಒಟ್ಟಿನಲ್ಲಿ ಪ್ರಬಂಧ ರಚನೆಯ ವಿಧಾನದಲ್ಲಿ ಮುಖ್ಯವಾಗಿ ಕ್ಷೇತ್ರಾಧಾರಿತ ಮಾಹಿತಿಗಳು ಹಾಗೂ ಪ್ರಕಟಿತ ವಿಷಯಗಳನ್ನು ಪರಿಗಣಿಸಲಾಗಿದೆ.

'ಅಕ್ಕಾದೇವಿ : ಚಾರಿತ್ರಿಕ ಅಧ್ಯಯನ'ವನ್ನು ಮುಖ್ಯವಾಗಿ ಇತಿಹಾಸ ಮತ್ತು ಪುರಾತತ್ವ ವಿಷಯಗಳ ಅನುಗುಣವಾಗಿ ರೂಪಿಸಿಕೊಂಡಿದ್ದರೂ, ಆಧುನಿಕ ಕಾಲಘಟ್ಟದಲ್ಲಿ ಚರ್ಚಿತವಾಗುತ್ತಿರುವ ಅಲಕ್ಷಿತ ಹಾಗೂ ಸ್ತ್ರೀ ಸಮುದಾಯ ಅಧ್ಯಯನಗಳ ಅವಶ್ಯಕತೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಪ್ರಾಚೀನ ಇತಿಹಾಸದಲ್ಲಿ ಅದ್ವಿತೀಯ ಕಾರ್ಯಗಳ ಮೂಲಕ ದಾಖಲಾಗಿರುವ ಅಕ್ಕಾದೇವಿಯ ಕುರಿತಂತೆ ಸಮಗ್ರ ಹಾಗೂ ಚಾರಿತ್ರಿಕ ವಿಧಾನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವನ್ನು ರಚಿಸುವ ಪ್ರಯತ್ನ ಮಾಡಲಾಗಿದೆ.

ಪ್ರಬಂಧದ ಸಂಯೋಜನೆಯಲ್ಲಿ ಅವಶ್ಯಕವಾಗಿರುವ ಅಡಿಟಿಪ್ಪಣಿ, ಗ್ರಂಥಋಣ, ಸಂಕ್ಷೇಪಗಳು, ಛಾಯಾಚಿತ್ರಗಳು ಹಾಗೂ ನಕ್ಷೆಗಳನ್ನು ಒಳಗೊಂಡು ಪ್ರಬಂಧವನ್ನು ಅಂತಿಮಗೊಳಿಸಲಾಗಿದೆ.

ಅಡಿಟಿಪ್ಪಣಿ

೧. ಸುರೇಂದ್ರರಾವ್.ಬಿ. : ಕರ್ನಾಟಕ ಚರಿತ್ರೆ – ಸಂ.೩, ಪುಟ ೫೫೧.

೨. ಜಯಮ್ಮ. ಎಚ್. ಕರಿಯಣ್ಣ : ಹೆಣ್ಣಿನ ಸ್ಥಾನಮಾನ (ಒಂದು ಪುನರವಲೋಕನ), ಪುಟ ೧೫

೩. ಚೆನ್ನಕ್ಕ ಪಾವಟೆ : ಹಾನಗಲ್ಲ ಕದಂಬರು, ಪುಟ ೮೩.

೪. ಎಸ್.ಆಯ್.ಆಯ್. Vol - Xi - i - 86 ೧೦೫೦ ಕೊರ್ಲಹಳ್ಳಿ.

೫. ಚನ್ನಕ್ಕ ಎಲಿಗಾರ : ಪ್ರಾಚೀನ ಕರ್ನಾಟಕದ ರಾಣಿಯರು, ಚನ್ನಗಂಗಾ ಪ್ರಕಾಶನ, ಧಾರವಾಡ, ಪುಟ. ೧೨.

೬. ಅದೇ

೭. ಅದೇ ಪು, ೩೧

೮. ಎ.ಇ. Vol, XVI-II ಹೊಟ್ಟೂರು (ತಾ) – ೧೦೩೭.

೯. ಎ.ಇ. Vol, XV-6 ಸೂಡಿ – ೧೦೧೦.

೧೦. ಚನ್ನಕ್ಕ ಪಾವಟೆ : ಹಾನಗಲ್ ಕದಂಬರು, ಪುಟ.೯೧.

ಅಧ್ಯಾಯ : ಎರಡು

ಅಕ್ಕಾದೇವಿ: ಜೀವನ ಮತ್ತು ಸಾಧನೆ

ಅಧ್ಯಾಯ : ಎರಡು

ಅಕ್ಕಾದೇವಿ: ಜೀವನ ಮತ್ತು ಸಾಧನೆ

ಕರ್ನಾಟಕ ನಾಡನ್ನಾಳಿದ ಪ್ರಮುಖ ರಾಜಮನೆತನಗಳಲ್ಲಿ ಕಲ್ಯಾಣದ ಚಾಲುಕ್ಯರು ಪ್ರಮುಖರಾಗಿದ್ದಾರೆ. ಕ್ರಿ.ಶ. ೯೭೩ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಈ ವಂಶವು ಕ್ರಿ.ಶ. ೧೧೮೯ರ ಸುಮಾರಿಗೆ ಕೊನೆಗೊಂಡಿತು. ಅವರಿಗೆ ಸಂಬಂಧಿಸಿದ ಹಲವಾರು ಶಾಸನಗಳಲ್ಲಿ ತಮ್ಮನ್ನು ಬಾದಾಮಿ ಚಾಲುಕ್ಯರ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಇಂಥ ಸಂಗತಿಗಳನ್ನು ಕೆಲವು ವಿದ್ವಾಂಸರು ಒಪ್ಪಿಕೊಂಡು ತಮ್ಮ ಅಭಿಪ್ರಾಯ ಸಮ್ಮತಿಯನ್ನು ವ್ಯಕ್ತಪಡಿಸಿದ್ದುಂಟು. ಎರಡುನೂರು ವರ್ಷಗಳ ಕಾಲ ಆಳ್ವಿಕೆ ಮಾಡಿದ ಈ ರಾಜ ಮನೆತನದಲ್ಲಿ ಪ್ರಮುಖವಾಗಿ ಎರಡನೆಯ ತೈಲಪ ಸತ್ಯಾಶ್ರಯ, ಒಂದನೆಯ ಸೋಮೇಶ್ವರ, ಎರಡನೆಯ ಜಯಸಿಂಹ, ಐದನೆಯ ವಿಕ್ರಮಾದಿತ್ಯ ಹಾಗೂ ಆರನೇ ವಿಕ್ರಮಾದಿತ್ಯರಂತಹ ರಾಜರುಗಳು ತಮ್ಮ ಯುದ್ದ ಸಾಹಸದಿಂದ ಮೆರೆದಿದ್ದಾರೆ. ಹಾಗೂ ಅನೇಕ ಮಹತ್ವದ ಸಾಂಸ್ಕೃತಿಕ ಸಾಧನೆಗಳನ್ನು ಕೈಗೊಂಡಿರುವ ಬಗೆಗೆ ತಿಳಿದುಬರುತ್ತದೆ.[೧]

ಕ್ರಿ.ಶ.೯೭೩ರಲ್ಲಿ ಎರಡನೆಯ ತೈಲಪನು ರಾಷ್ಟ್ರಕೂಟರ ಎರಡನೆಯ ಕರ್ಕನನ್ನು ಅಧಿಕಾರ ಕೇಂದ್ರದಿಂದ ಹೊರಗಟ್ಟಿ ಅವರಿಂದ ಸಾಮ್ರಾಜ್ಯವನ್ನು ಕಿತ್ತುಕೊಂಡನು. ಕಾಲಾನಂತರ ಎರಡನೆಯ ತೈಲಪನ ಮಗನಾದ ಸತ್ಯಾಶ್ರಯ ಇರಿವೆಬೆಡಂಗವೆಂಗಿ ಚಾಲುಕ್ಯರನ್ನು ಸೋಲಿಸಿ ಸಾಮಾಜ್ಯವನ್ನು ವಿಸ್ತರಿಸಿದನು. ಅಕಳಂಕಚರಿತ ಎಂಬ ಬಿರುದಿನಿಂದ ಪ್ರಖ್ಯಾತನಾದ ಇರಿವೆಬೆಡಂಗವೆಂಗಿ ತನ್ನ ಚೈತ್ರ ಯಾತ್ರೆಯನ್ನು ಮುಂದುವರೆಸಿ ಕ್ರಿ.ಶ.೧೦೦೬ ಸುಮಾರಿಗೆ ಧಾನ್ಯಕಟಕ ಮತ್ತು ಯಾಣಮಂಡಲ ಕೋಟೆಯನ್ನು ಸುಟ್ಟು ಹಾಕಿದನು.[೨]

ಕಲ್ಯಾಣ ಚಾಲುಕ್ಯರ ರಭಸಕ್ಕೆ ಹೆದರಿದ ಚೋಳರ ರಾಜಾಧಿರಾಜ ಹಾಗೂ ಅವನ ತಮ್ಮ ಎರಡನೆಯ ರಾಜೇಂದ್ರರಿಬ್ಬರೂ ಕೂಡಿ ಪ್ರತಿಯಾಗಿ ಚಾಲುಕ್ಯರ ಮೇಲೆ ಎರಗಿದರು ಇವರಿಬ್ಬರನ್ನು ಒಂದನೇ ಸೋಮೇಶ್ವರ ಕ್ರಿ.ಶ. ೧೦೫೪ರಲ್ಲಿ ಕೊಪ್ಪಂ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಸಾಕಷ್ಟು ಹಾನಿಗೊಳಪಡಿಸಿ ಜಯಶೀಲನಾದನು.[೩]

ಕ್ರಿ.ಶ. ೧೦೭೬ರಿಂದ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯದ ಅಧಿಪತಿಯಾಗಿ ಆರನೆಯ ವಿಕ್ರಮಾಧಿತ್ಯನು ಆಳ್ವಿಕೆ ಪ್ರಾರಂಭಿಸಿದನು. ವಿದೇಶಿಯ ಅರಸರೊಂದಿಗೆ ಹಾಗೂ ರಾಜ್ಯಗಳೊಂದಿಗೆ ಒಳ್ಳೆಯ ಮೈತ್ರಿಯುತ ಸಂಬಂಧವನ್ನು ಇವನು ಹೊಂದಿದ್ದನು. ಸಿಲೋನ್‌ದ ರಾಜನಾದ

ವಿಜಯಬಾಹುನೊಂದಿಗೆ ಸ್ನೇಹ ಸಂಬಂಧವನ್ನು ಹೊಂದಿದ್ದ ಆರನೇ ವಿಕ್ರಮಾಧಿತ್ಯನು ಸಿಲೋನ್ ಮತ್ತು ರಾಜಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದ್ದನು. ವೀರಯೋಧ ಶ್ರೇಷ್ಠ ಆಡಳಿತಗಾರನಾದ ಆರನೆಯ ವಿಕ್ರಮಾದಿತ್ಯ ತನ್ನ ಸಾಮ್ರಾಜ್ಯವನ್ನು ದೂರ ದೂರದ ಪ್ರದೇಶಗಳವರೆಗೂ ವಿಸ್ತರಿಸಿದ್ದನು. ಅವುಗಳಲ್ಲಿ ಮಾಸವಾಡಿ, ಬೆಳ್ವೊಲ. ಪುಲಿಗೆರೆ, ಕೋಗಳಿ, ಕುಂದೂರು, ಬನವಾಸಿ, ಹಾನಗಲ್ಲು ಹಾಗೂ ಸಾಂತಲಿಗೆ ಪ್ರದೇಶಗಳಲ್ಲಿ ಕಲ್ಯಾಣದ ಚಾಲುಕ್ಯರು ತಮ್ಮ ಹಿಡಿತವನ್ನು ಸಾಧಿಸಿದ್ದರು.[೪]

ಇದೇ ಪ್ರಮುಖ ರಾಜಮನೆತನಕ್ಕೆ ಸೇರಿದ ಅಕ್ಕಾದೇವಿ ಸ್ವತಂತ್ರವಾಗಿ ಆಡಳಿತ ವಿಭಾಗಗಳನ್ನು ಆಳ್ವಿಕೆ ಮಾಡಿದಳು. ಐದನೆಯ ವಿಕ್ರಮಾದಿತ್ಯನ ಸಹೋದರಿಯಾದ ಇವಳು ಆ ಕಾಲದಲ್ಲಿ ಬಲಿಷ್ಠ ಸ್ತ್ರೀ ಶಕ್ತಿಯಾಗಿ ಅಧಿಕಾರ ನಿರ್ವಹಿಸಿದಳು. ಪುರುಷ ರಾಜರಷ್ಟೆ ಸರಿಸಮನಾಗಿ ಯುದ್ಧ ಮಾಡಿ ತನ್ನ ಆಡಳಿತವನ್ನು ಬೆಳೆಸಿಕೊಂಡಳು. ಅಲ್ಲದೇ ಮುಖ್ಯವಾಗಿ ಅಕ್ಕಾದೇವಿ ಕಾಲದಲ್ಲಿ ನೀಡಿರುವ ಸಾಂಸ್ಕೃತಿಕ ಕೊಡುಗೆಗಳು ಅತ್ಯಂತ ಪ್ರಮುಖ ಸಂಗತಿಗಳಾಗಿ ಚರಿತ್ರೆಯಲ್ಲಿ ದಾಖಲಾಗಿರುವುದು ಗಮನಾರ್ಹ ವಿಷಯ.

ಕಲ್ಯಾಣ ಚಾಲುಕ್ಯರು ಆಡಳಿತಕ್ಕೆ ನೀಡಿದ ಮಹತ್ವವನ್ನು ಸಾಂಸ್ಕೃತಿಕ ಕ್ಷೇತ್ರಕ್ಕೂ ಸಹ ಸಮಾನ ಆದ್ಯತೆ ನೀಡಿದ್ದಾರೆ. ಇವರ ಕಾಲದಲ್ಲಿ ನಿರ್ಮಾಣವಾದ ಅನೇಕ ದೇವಾಲಯ ಸ್ಮಾರಕಗಳು ಈ ದಿಶೆಯಲ್ಲಿ ಮಹತ್ವವನ್ನು ಹೊಂದಿದೆ. ಅವುಗಳಲ್ಲಿ ಗದುಗಿನ ತ್ರಿಕೂಟೇಶ್ವರ, ಅಣ್ಣಿಗೇರಿ ಅಮೃತೇಶ್ವರ, ಕುಕ್ಕನೂರಿನ ಕಲ್ಲೇಶ್ವರ ಹರಳಹಳ್ಳಿಯ ಸೋಮೇಶ್ವರ ಬಾಗಳಿಯ ಕಲ್ಲೇಶ್ವರ, ನೀಲಗುಂದ ಭೀಮೇಶ್ವರ, ಹಾವೇರಿಯ ಸೋಮೇಶ್ವರ ಉಣಕಲ್ಲಿನ ಚಂದ್ರಮೌಳೇಶ್ವರ, ಗಳಗನಾಥನ ಗಳಗೇಶ್ವರ ಹಾಗೂ ಮಹಾಕೂಟ, ಬನಶಂಕರಿ ತಲಪುವ ರಸ್ತೆಯಲ್ಲಿರುವ ಅಕ್ಕೇಶ್ವರ ಹಾಗೂ ಇಟಗಿಯ ಮಹಾದೇವ ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣವಾಗಿವೆ. ಅಲ್ಲದೇ ಸೂಡಿಯ ಮಲ್ಲಿಕಾರ್ಜುನ ಹಾಗೂ ಜೋಡಿ ಕಳಸದ ದೇವಾಲಯಗಳು, ಲಕ್ಕುಂಡಿಯ ಬ್ರಹ್ಮ ಜಿನಾಲಯಗಳು ಸೂಡಿಯ ಮಲ್ಲಿಕಾರ್ಜುನ ಹಾಗೂ ಜೋಡಿ ಕಳಸ ದೇವಾಲಯಗಳು ಮುಖ್ಯವಾಗಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚನೆಯಾಗಿರುವಂಥವು. ಇವರು ದೇವಾಲಯಗಳನ್ನಲ್ಲದೆ ಕೆರೆ, ಬಾವಿಗಳು ಹಾಗೂ ನೀರು ಕಟ್ಟೆಗಳನ್ನು ನಿರ್ಮಿಸಿದರು. ಅವು ಎಲ್ಲ ಕಾಲಕ್ಕೂ ಜನೋಪಯೋಗಿಯಾದ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸಿದವು.

ವಿಸ್ತಾರವಾದ ಸಾಮ್ರಾಜ್ಯ ಹಾಗೂ ಜನ ಮನದಲ್ಲಿ ಎಂದೆಂದಿಗೂ ಉಳಿಯುವ ಸಾಧನೆಗಳನ್ನು ಮಾಡಿದ ಕಲ್ಯಾಣ ಚಾಲುಕ್ಯ ಅರಸರು ತಮ್ಮ ಕಾರ್ಯಗಳಿಗೆ ಸಾಮಂತರನ್ನು ಹಾಗೂ ಅಡಳಿತಾಧಿಕಾರಿಗಳನ್ನು ಅವಲಂಬಿತರಾಗಿದ್ದರು. ಆಡಳಿತವನ್ನು ಸುಗಮಗೊಳಿಸಿಕೊಳ್ಳುವಲ್ಲಿ ವಿಸ್ತಾರವಾದ ರಾಜ್ಯವನ್ನು ಚಿಕ್ಕ ಪುಟ್ಟ ಘಟಕಗಳನ್ನಾಗಿ ರಚಿಸಿಕೊಂಡು ಆಡಳಿತವನ್ನು

ಕೇಂದ್ರೀಕರಿಸಿಕೊಂಡಿದ್ದರು. ತಮಗೆ ನಿಷ್ಠರಾದ ಹಾಗೂ ದಕ್ಷತೆಯಿಂದ ಕೂಡಿದ ಸಾಮಂತರರನ್ನು ಆಡಳಿತ ವಿಭಾಗಗಳ ಕಾರ್ಯ ನಿರ್ವಹಣೆಗೆ ನೇಮಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಇಂಥ ಕಾರ್ಯ ಸಾಧನೆಯನ್ನು ಸುಲಭವಾಗಿ ಮಾಡಿಕೊಳ್ಳಲು ರಕ್ತ ಸಂಬಂಧಿಗಳನ್ನು ನೋಡಿಕೊಳ್ಳುತ್ತಿದ್ದರು. ಬಲಾಢ್ಯವಾದ ಸಾಮಾಂತರಿಗೆ ತಮ್ಮ ಸಹೋದರಿಯನ್ನು ಮದುವೆ ಮಾಡಿಕೊಳ್ಳುವುದರ ಮೂಲಕ ಮೇಲಿಂದ ಮೇಲೆ ಬಂದು ಎರಗೂವ ಅಪಾಯಗಳನ್ನು ಇಂಥ ಕಾರ್ಯಗಳ ಮೂಲಕ ಚಿವುಟಿ ಹಾಕುತ್ತಿದ್ದರು. ಅಲ್ಲದೇ ಇದೇ ಸಂದರ್ಭಗಳಲ್ಲಿ ತಾವು ಸಹ ಸಾಮಂತರ ಮಗಳನ್ನೊ ಅಥವಾ ಸಹೋದರಿಯನ್ನು ಸಂಬಂಧ ಮಾಡಿಕೊಳ್ಳುವ ಚಾಣಕ್ಷತನವನ್ನು ಮಾಡುತ್ತಿದ್ದರು. ಇಂಥ ಕಾರ್ಯವನ್ನು ಕಲ್ಯಾಣ ಚಾಲುಕ್ಯ ಅರಸರು ಮಾಡಿದರು. ಬಲಾಢ್ಯನಾದ ಕದಂಬ ಮಯೂರವರ್ಮನಿಗೆ ತನ್ನ ಸಹೋದರಿಯಾದ ಅಕ್ಕಾದೇವಿಯನ್ನು ಐದನೆಯ ವಿಕ್ರಮಾದಿತ್ಯನು ಮದುವೆ ಮಾಡಿಕೊಟ್ಟು ತನ್ನ ರಾಜ್ಯ ವಿಸ್ತರಣೆಗೆ ಉಂಟಾಗುವ ಅಡೆತಡೆಗಳನ್ನು ನಿವಾರಿಸಿಕೊಂಡನು. ಅವರ ಜೊತೆಗೆ ವೈವಾಹಿಕ ಸಂಬಂಧಗಳನ್ನು ಮಾಡಿಕೊಂಡಿದ್ದಾರೆ. ಕಾರಣಾಂತರಗಳಿಂದ ಅಕ್ಕಾದೇವಿಯು ಚಾಲುಕ್ಯ ಅರಸರು ಆಶ್ರಯಿಸಬೇಕಾಯಿತು. ಗೌರವ ಸನ್ಮಾನ ನೀಡಿದ ಚಾಲುಕ್ಯ ಅರಸರು ತಮ್ಮ ರಾಜ್ಯದಲ್ಲಿಯೇ ಕೆಲವು ವಿಭಾಗಳಿಗೆ ತಮ್ಮ ಸಹೋದರಿಯನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಿದರು.

ಕಲ್ಯಾಣ ಚಾಲುಕ್ಯರ ಸಾವಂತರಾದ ಕದಂಬರು ಸುವಾರು ವಮೂರು ಶತಮಾನಗಳಾವಧಿಯವರೆಗೆ ಆಳ್ವಿಕೆಗೆ ನಡೆಸಿದ್ದರು. ಮೂಲತಃ ಬನವಾಸಿ ಪ್ರಾಂತದ ಮೂಲಕ ಆಳ್ವಿಕೆ ಮಾಡುತ್ತಿದ್ದ ಇವರು ಕಾಲಾನಂತರ ಅನೇಕ ಶಾಖೆಗಳಲ್ಲಿ ಒಡೆದುಕೊಂಡರು. ಅಂತಹ ಶಾಖೆಗಳನ್ನು ಇತಿಹಾಸ ತಜ್ಞರಾದ ಬಿ.ಎಲ್. ರೈಸ್ ಜಾರ್ಜ್ ಮೊರೆಸ್ ಅವರು ವಿವರಿಸಿದ್ದಾರೆ. ಅವುಗಳೆಂದರೆ ಪುನ್ನಾಟ, ಬೇಲೂರ, ಬಂಕಾಪುರ, ಉಚ್ಚಂಗಿ, ನಾಗರ ಖಂಡ, ಬನವಾಸಿ, ಹಾನಗಲ್ಲು, ಗೋವಾ, ಬಯಲ್ನಾಡು, ಕಳಿಂಗ, ಕರಡಿಕಲ್, ರಟ್ಟಿಹಳ್ಳೀ (ನೂರಂಬಾಡಿ ರೆಟ್ಟಿಹಳ್ಳಿ) ಮಂಜರಾಭಾದ, ಲುಂಕೆ(ಮೊಳಕಾಲ್ಮುರ) ಕೋಗಳಿ[1] ಕದಂಬರನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಕದಂಬರ ಅನೇಕ ಶಾಖೆಗಳಲ್ಲಿ ಹಾನಗಲ್ಲಿನ ಕದಂಬರು ಅತೀ ಪ್ರಮುಖವೆನಿಸಿದ್ದಾರೆ. ಹಾನಗಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸುಮಾರು ನೂರು ವರ್ಷಗಳಿಗಿಂತ ಹೆಚ್ಚಿನ ಅವಧಿ ಆಳ್ವಿಕೆ ಮಾಡಿದರು. ಹಾನಗಲ್ಲನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ಇಲ್ಲಿಯ ಕದಂಬರು ಹಾನಗಲ್ಲು ಕದಂಬರೆಂದು ಕರೆಯಿಸಿಕೊಳ್ಳುತ್ತಾರೆ. ಕಲ್ಯಾಣ ಚಾಲುಕ್ಯ ಅರಸರ ಸಾಮಂತನಾದ ಒಂದನೆಯ ಮಯೂರವರ್ಮನ ಮಹಾಮಂಡಳೇಶ್ವರನಾಗಿ ಕಾರ್ಯನಿರ್ವಹಿಸಿದ. ಇವನು ಸಮರ್ಥ ರಾಜನಾಗಿದ್ದಂತೆ ನಿಷ್ಠಾವಂತ ಸಾಮಂತನೂ ಆಗಿದ್ದನು. ಇವನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಕಲ್ಯಾಣದ ಚಾಲುಕ್ಯರ ಅರಸರ ಎರಡನೆಯ ಜಯಸಿಂಹ ತನ್ನ ಸಹೋದರಿಯಾದ ಅಕ್ಕಾದೇವಿಯನ್ನು ಕದಂಬ

ಒಂದನೇ ಮಯೂರವರ್ಮನಿಗೆ ಕೊಟ್ಟು ವೈವಾಹಿಕ ಸಂಬಂಧವನ್ನು ಬೆಳೆಸಿದನು.[೬] ಹೀಗೆ ಕಲ್ಯಾಣದ ಚಾಲುಕ್ಯರು ಹಾನಗಲ್ಲ ಕದಂಬರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರುವ ಸಂಗತಿ ವೇದ್ಯವಾಗುತ್ತದೆ. ಆದರೆ ಕೆಲವೇ ವರ್ಷಗಳಲ್ಲಿ ಕಾರಣಾಂತರಗಳಿಂದ ಈ ಸಂಬಂಧವು ಮುಂದುವರೆದಿರುವ ಸಂಗತಿಗಳು ಇತಿಹಾಸದಲ್ಲಿ ದಾಖಲಾಗಿಲ್ಲ. ಕಾರಣ ತನ್ನ ಜೀವಿತಾವಧಿಯ ಹೆಚ್ಚಿನ ಕಾಲವನ್ನು ಅಕ್ಕದೇವಿಯು ಕಲ್ಯಾಣದ ಚಾಲುಕ್ಯರ ಅಧೀನದಲ್ಲಿಯೇ ಕಳೆದಳು. ತನ್ನ ಸಹೋದರಿಯಾದ ಅಕ್ಕದೇವಿಗೆ ಅರಸಿ ಸ್ಥಾನವನ್ನು ನೀಡಿ ಸ್ವತಂತ್ರವಾಗಿ ಆಡಳಿತ ನಿರ್ವಹಿಸುವಂತೆ ಚಾಲುಕ್ಯ ಅರಸರು ಪ್ರೋತ್ಸಹಿಸಿದರು.

ಅಕ್ಕಾದೇವಿ: ಬಾಲ್ಯ ಜೀವನ:–

ಕಲ್ಯಾಣದ ಚಾಲುಕ್ಯ ಅರಸ ದಶವರ್ಮ ಮತ್ತು ರಾಣಿ ಭಾಗಲಾದೇವಿಯರ ಮಗಳಾಗಿದ್ದಳು. ಐದನೇ ವಿಕ್ರಮಾದಿತ್ಯ, ಅಯ್ಯಣ, ಮತ್ತು ಎರಡನೇ ಜಯಸಿಂಹರೆಂಬ ಸಹೋದರನ್ನು ಹೊಂದಿದ್ದಳು. ಕ್ರಿ.ಶ. ೧೦೩೭ರ ಹೊಟ್ಟೂರು ಶಾಸನದಲ್ಲಿ ಉಲ್ಲೇಖಿಸಿದಂತೆ ಅಕ್ಕಾದೇವಿಯನ್ನು (ಇ.ಆಯ್.XVI-ನಂ–೧೧) ಹಾನಗಲ್ಲು ಕದಂಬರ ಅರಸ ಒಂದನೇ ಮಯೂರವರ್ಮನಿಗೆ ಕೊಟ್ಟು ವಿವಾಹ ಮಾಡಲಾಯಿತು.[೮] ಎಂಬ ಸಂಗತಿ ತಿಳಿದುಬರುತ್ತದೆ.

ಅಕ್ಕಾದೇವಿಯು ಮಹಿಳೆಯಾದರು ಸಹ ತನ್ನ ಸಹೋದರರೊಂದಿಗೆ ಆಡಳಿತದ ಎಲ್ಲಾ ವರಸೆಗಳನ್ನು ಕಲಿತಿದ್ದಳು. ಇದಕ್ಕೆ ಪುಷ್ಟಿ ನೀಡುವ ವಿವರಗಳೂ ಕ್ರಿ.ಶ. ೧೦೧೦ ರ ಸೂಡಿ ಶಾಸನದಲ್ಲಿ ದಾಖಲಾಗಿದೆ.[೯] (ಇ.ಆಯ್.XV-ನಂ–೧೬)

ಅಕ್ಕಾದೇವಿಯು ತನ್ನದೆಯಾದ ಸ್ವತಂತ್ರ ಆಡಳಿತವನ್ನು ನಿರ್ವಹಿಸುತ್ತಿದ್ದಳು. ನಂತರದಲ್ಲಿ ಮಯೂರವರ್ಮನೊಂದಿಗೆ ವಿವಾಹವಾಯಿತು ಎಂಬುದನ್ನು ಉಲ್ಲೇಖಗಳು ತಿಳಿಸುತ್ತವೆ. ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸಿಸ ಇವಳು ಮಯೂರವರ್ಮನೊಂದಿಗೆ ಮದುವೆಯಾದ ನಂತರವು ಸಹ ಆತನ ಜೊತೆಗೂಡಿ ಬನವಾಸಿಯಲ್ಲಿ ಆಳ್ವಿಕೆ ಮುಂದುವರೆಸಿದಳು ಎಂಬುದು ಮುಖ್ಯವಾದ ಸಂಗತಿ. ಈ ಕುರಿತು ಕ್ರಿ.ಶ. ೧೦೩೭ ರ ಹೊಟ್ಟುರು ಶಾಸನವು ಸ್ಪಷ್ಟ ಮಾಹಿತಿಯನ್ನು ನೀಡುತ್ತದೆ.[೧೦]

ಅಲ್ಲದೇ ಇನ್ನೊಂದು ಮುಖ್ಯ ವಿಚಾರವೆಂದರೆ ಅಕ್ಕದೇವಿಯ ಮಗನಾದ ತೋಯಿಮದೇವ ಇವರ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದ ಸಂಗತಿ ತಿಳಿದು ಬರುತ್ತದೆ.[೧೧] ಅಕ್ಕದೇವಿ ಮತ್ತು ಮಯೂರವರ್ಮರಿಗೆ ಮೂರು ಜನ ಮಕ್ಕಳಿದ್ದುದರ ಬಗೆಗೆ ವಿದ್ವಾಂಸರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಈ ಕೆಳಗಿನಂತೆ ಅವರಿಗೆ ಸಂಬಂಧಿಸಿದ ವಂಶಾವಳಿಯನ್ನು ಗುರುತಿಸಿದ್ದಾರೆ.

ಮಯೂರವರ್ಮ - ಅಕ್ಕಾದೇವಿ(೧೨)

ಹ(ಅ)ರಿಕೇಸರಿ ತೋಯಮದೇವ ಹರಿಕಾಂತದೇವ

(ಹೆಂಡತಿ ಲಚ್ಚಂದೇವಿ ಹೆಂಡತಿ ಮೈಳುದೇವಿ

ಮೇಲೆ ವಿವರಿಸಿದಂತೆ ಸಂಕ್ಷಿಪ್ತವಾದ ಜೀವ ಚರಿತ್ರ ಅಕ್ಕಾದೇವಿ ಬಗೆಗೆ ಲಭ್ಯವಾಗಿದೆ. ಸಿಕ್ಕಿರುವ ಕೆಲವು ಸಂಗತಿಗಳ ಮೂಲಕ ಅವಳ ಸಮಗ್ರ ಜೀವನವನ್ನು ತಿಳಿದುಕೊಳ್ಳುವುದು ಕಷ್ಟ ಸಾಧ್ಯವಾಗಿದೆ. ಆದರೆ ಬೇರೆ ಬೇರೆ ಸ್ಥಳದಲ್ಲಿ ಬೇರೆ ಬೇರೆ ಕಾಲದಲ್ಲಿ ಸಿಕ್ಕಿರುವ ಅನೇಕ ಶಾಸನಗಳಲ್ಲಿ ಆಡಳಿತ ಚತುರೆಯಾದ ಅಕ್ಕಾದೇವಿ ಬಗೆಗೆ ಉಲ್ಲೇಖಗಳನ್ನು ಮಾಡಲಾಗಿದೆ. ಅಂದರೆ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದ ಅಕ್ಕದೇವಿಯ ಬಗೆಗಿನ ಮಹತ್ವವನ್ನು ಅರಿತ ಅಂದಿನ ಶಾಸನಗಳಲ್ಲಿ ಹಲವಾರು ಉಲ್ಲೇಖಗಳನ್ನು ನೀಡಿರುವುದು ಗಮನಾರ್ಹ ಸಂಗತಿ.

ಆಡಳಿತದ ವಿಭಾಗಗಳು

ವಿಸ್ತಾರವಾದ ರಾಜ್ಯದ ಆಡಳಿತವನ್ನು ಸುಗಮಗೊಳಿಸಿಕೊಳ್ಳಲು ಅಧಿನಾಯಕನು ತನ್ನ ಅನುಕೂಲಕ್ಕಾಗಿ ಭೂಪ್ರದೇಶಗಳನ್ನು ವಿಭಾಗಿಸಿ ನಿರ್ವಹಿಸುತ್ತಿದ್ದರು. ಬೇರೆ ಬೇರೆ ಆಡಳಿತ ವಿಭಾಗಗಳನ್ನು ಮಾಡವುದರಿಂದ ಸುಭದ್ರ ಆಡಳಿತ ಹಾಗೂ ರಾಜ್ಯ ರಕ್ಷಣೆಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದಂತಾಗುತ್ತಿತ್ತು. ಸಾಮಾಜ್ಯದ ಚಕ್ರವರ್ತಿಯು ಅನುಕೂಲಕ್ಕೆ ತಕ್ಕಂತೆ ಆಡಳಿತ ವಿಭಾಗಗಳನ್ನು ಮಾಡಿ ಸಮರ್ಥರು ಹಾಗೂ ನಿಷ್ಠರಾಗಿದ್ದು ಅಧಿಕಾರಿವರ್ಗವನ್ನು ಜವಾಬ್ದಾರಿಯ ಕಾರ್ಯ ನಿರ್ವಹಿಸುವಂತೆ ಮಾಡಲಾಗುತ್ತಿತ್ತು. ಸಾಮಾನ್ಯವಾಗಿ ಪ್ರಾಚೀನ ಆಡಳಿತ ವ್ಯವಸ್ಥೆಯನ್ನು ಎರಡು ನಿರ್ದಿಷ್ಟ ಭಾಗಗಳಲ್ಲಿ ಹಂಚಿಕೆ ಮಾಡಲಾಗುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ನೇರವಾಗಿ ಚಕ್ರವರ್ತಿಯ ಅಧೀನದಲ್ಲಿ ನಡೆಯುವ ಕೇಂದ್ರಾಡಳಿತ ಹಾಗೂ ವಿಸ್ತಾರ ಪ್ರದೇಶವನ್ನು ವಿಭಾಗಿಸಿ ಪ್ರಾಂತ ರಚಿಸುವುದು ಹಾಗೂ ಅವುಗಳಿಗೆ ತನ್ನ ವಿಶ್ವಾಸಿಗರನ್ನು ಪ್ರಾಂತಾಡಳಿತಾಧಿಕಾರಿಗಳಾಗಿ ನೇಮಕ ಮಾಡಲಾಗುತ್ತಿತ್ತು. ಕೇಂದ್ರಾಡಳಿತದಲ್ಲಿ ಚಕ್ರವರ್ತಿ, ಯುವರಾಜ ದಂಡನಾಯಕ(ಸೇನಾಪತಿ) ಸಂಧಿವಿಗ್ರಹಿ (ವಿದೇಶ ಸಚಿವ) ಸುಂಕಾಧಿಕಾರಿಗಳು ಹಾಗೂ ಬೇಹುಗಾರ ಪಡೆಯ ಮುಖಂಡರನ್ನೊಳಗೊಂಡ ವ್ಯವಸ್ಥೆ ರೂಪಿತವಾಗಿತ್ತು. ಇವರೆಲ್ಲರೂ ನೇರವಾಗಿ ಚಕ್ರವರ್ತಿಯ ಅಧೀನಕ್ಕೊಳಪಟ್ಟು ಕಾರ್ಯ ನಿರ್ವಹಿಸುತ್ತಿದ್ದರು. ಪ್ರಾಂತಾಡಳಿತ ವ್ಯವಸ್ಥೆಯಲ್ಲಿ ವಿಶಾಲವಾದ ಪ್ರಾಂತಗಳಿಗೆ ನಂಬಿಕಸ್ಥ ಅರಸರು ಅಥವಾ ಸಾಮಂತರನ್ನು ನೇಕಮ ಮಾಡುತ್ತಿದ್ದರು. ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮ ಪ್ರಾಂತಗಳನ್ನು ಮಂಡಲ, ನಾಡು, ವಿಷಯ, ಭುಕ್ತಿ, ಕಂಪಣ

ಹಾಗೂ ಹಳ್ಳಿಗಳೆಂದು ವಿಭಾಗಿಸಿ ತಮ್ಮ ಅಧೀನ ನಾಯಕರಿಗೆ ಹಂಚುತ್ತಿದ್ದರು. ಅವುಗಳನ್ನು ಪಾಲಿಸಲು ಮಂಡಲಾಧಿಪತಿ, ನಾಡುಪ್ರಭು, ಪ್ರಭುಗಾವುಂಡ ಹಾಗೂ ಗಾವುಂಡ ಎಂಬ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುತ್ತಿತ್ತು. ಸ್ಥಳೀಯ ಮುಖಂಡರನ್ನು ನೇಮಿಸುವ ಹಾಗೂ ಕಿತ್ತೊಗೆಯುವ ಅಧಿಕಾರವನ್ನು ಪ್ರಾಂತಾಡಳಿತ ನಾಯಕ (ಅರಸ) ನೇ ಹೊಂದಿದ್ದ. ಪ್ರಾಂತಡಳಿತಾಧಿಕಾರಿಗಳಿಗೆ ಸ್ವತಂತ್ರ್ಯ ಸೈನ್ಯ, ಕರ ಸಂಗ್ರಹಿಸುವ(೧೩) ಅಧಿಕಾರ, ದಾನ ದತ್ತಿ ನೀಡುವ ದೇವಾಲಯಗಳನ್ನು ನಿರ್ಮಿಸುವ ಕೆರೆ- ಕಟ್ಟೆಗಳನ್ನು ಕಟ್ಟಿಸುವ ಸಮಾಜೋ ಧಾರ್ಮಿಕ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರು. ಸ್ವತಂತ್ರ ಸೈನ್ಯಪಡೆಯನ್ನು ಹೊಂದಿದ್ದ ಪ್ರಾಂತಾಡಳಿತಾಧಿಕಾರಿಗಳು ತಮ್ಮ ಸೈನ್ಯಾಧಿಕಾರಿಗಳನ್ನು ಸ್ಥಾನಪಲ್ಲಟಗೊಳಿಸುವ ಹಕ್ಕನ್ನು ಪಡೆದಿದ್ದರು ತಮ್ಮ ಸೀಮಿತ ಆಡಳಿತದಲ್ಲಿ ಏನೆಲ್ಲ ಒಡೆತನಗಳನ್ನು ಸಾಮಾಂತಾಧಿಕಾರಿಗಳು ಹೊಂದಿದ್ದರೂ. ಚಕ್ರವರ್ತಿಗೆ ವರ್ಷಂಪ್ರತಿ ಕಪ್ಪ ನೀಡುವ ಹಾಗೂ ಅವರಿಗೆ ಗಂಡಾಂತರ ಒದಗಿದಾಗ ತನ್ನ ಸೈನ್ಯದ ಸೇವೆಯನ್ನು ಒದಗಿಸುವುದು ಕಡ್ಡಾಯವಾಗಿತ್ತು. ಪ್ರಾಂತಾಡಳಿತಾಧಿಕಾರಿಗಳು ತಮ್ಮ ಪ್ರಾಂತದ ಗಡಿಯನ್ನು ವಿಸ್ತರಿಸಿಕೊಳ್ಳುವ ಸ್ವಾತಂತ್ರ್ಯ ಅವರಿಗಿತ್ತು. ಆದರೆ ಅದು ಚಕ್ರವರ್ತಿಯ ಸರ್ವಭೌಮತೆಯನ್ನು ಪ್ರಶ್ನಿಸುವ ಹಂತ ತಲುಪಬಾರದಾಗಿತ್ತು.

ನ್ಯಾಯ ತೀರ್ಮಾನಗಳನ್ನು ಸಹ ಪ್ರಾಂತಾಡಳಿತಗಳು ನಿರ್ವಹಿಸುತ್ತಿದ್ದವು. ಆದರೂ ಪ್ರಾಂತಾಡಳಿತಾಧಿಕಾರಿಗಳೂ ಹಾಗೂ ಪ್ರಜೆಗಳಿಗೆ ರಾಜನು ನೀಡುವ ನ್ಯಾಯವನ್ನು ಅಥವಾ ತೀರ್ಮಾನವನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ.

ಪ್ರಾಂತಾಡಳಿತಾಧಿಕಾರಿಗಳು ಪ್ರಜೆಗಳಿಗೆ ನೀಡುವ ನ್ಯಾಯ ತೀರ್ಮಾನಗಳ ಬಗೆಗೆ ಅಸಮಾಧಾನವಿದ್ದರೆ, ಸಂಬಂಧಿಸಿದವರು ಚಕ್ರವರ್ತಿಯವರೆಗೂ ತಮ್ಮ ಸಮಸ್ಯೆಗಳನ್ನು ಒಯ್ಯಬಹುದಾಗಿತ್ತು. ಆದರೆ ಅಂತಿಮವಾಗಿ ಚಕ್ರವರ್ತಿಯು ಕೊಟ್ಟ ತೀರ್ಪನ್ನು ಒಪ್ಪಲೇಬೇಕಾದುದು ಕಡ್ಡಾಯವಾಗಿತ್ತು.

ಆಡಳಿತ ವ್ಯವಸ್ಥೆಗೆ ದೀರ್ಘವಾದ ಪರಂಪರೆ ಇದೆ. ಬಲಿಷ್ಠವು ಹಾಗೂ ಅತೀ ಬಾಹಳ್ಯವನ್ನು ಪಡೆದಿದ್ದ ಮೌರ್ಯರ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪಾಲನೆಯ ನಿರ್ವಹಣೆಗೋಸ್ಕರ ಆಡಳಿತವನ್ನು ಪ್ರಾಂತ್ಯಗಳಲ್ಲಿ ವಿಭಾಗಿಸಿ ಪ್ರಾಂತ್ಯಾಡಳಿತಾಧಿಕಾರಿಗೆ ವಹಿಸಿಕೊಡುತ್ತಿರುವ ಬಗೆಗೆ ಸಾಕ್ಷಾಧಾರಗಳಿವೆ. ಕರ್ನಾಟಕದಲ್ಲಿ ಸಿಕ್ಕಿರುವ ಅಶೋಕನ ಶಾಸನಗಳಲ್ಲಿ ಇದು ದಾಖಲಾಗಿದೆ. ಸ್ವರ್ಣಗಿರಿ ದಕ್ಷಿಣದಲ್ಲಿ ಮೌರ್ಯರ ಆಡಳಿತ ಪ್ರಾಂತ್ಯವಾಗಿತ್ತು. ಇದಕ್ಕೆ ಇಸಿಲಾ ಪಟ್ಟಣ ರಾಜಧಾನಿ ಆಗಿತ್ತು. ಈ ಕೇಂದ್ರ ಮೂಲಕ ದಕ್ಷಿಣ ಪ್ರಾಂತ್ಯದ ಆಡಳಿತವನ್ನು ಮೌರ್ಯ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಭಾರತದ ಆಡಳಿತ ವ್ಯವಸ್ಥೆಯ ಇತಿಹಾಸ ಸಂದರ್ಭದಲ್ಲಿ ಗುಪ್ತರ ಕಾಲದಲ್ಲಿ ಒಂದು ಸ್ಪಷ್ಟ ರೂಪವನ್ನು

ಪಡೆಯಲಾರಂಭಿಸಿತು ಎಂಬುದು ವಿದ್ವಾಂಸರು ಅಭಿಪ್ರಾಯವಾಗಿದೆ. ವಿಶಾಲವಾದ ಸಾಮ್ರಾಜ್ಯವನ್ನು ಚಕ್ರವರ್ತಿಯು ವಿಷಯ ಹಾಗೂ ಭುಕ್ತಿಗಳಲ್ಲಿ ವಿಭಾಗಿಸಿ, ಅವುಗಳಿಗೆ ಸ್ವತಂತ್ರ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಪ್ರಾಂತಾಡಳಿತಾಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ರಚಿಸಿದರು. ಈ ವ್ಯವಸ್ಥೆಯು ಭಾರತೀಯ ಊಳಿಗಮಾನ್ಯ ಇತಿಹಾಸಕ್ಕೆ ನಾಂದಿಯಾಗಿದೆ ಎಂದು ವಿದ್ವಾಂಸರುಗಳ ಅಭಿಮತವಾಗಿದೆ. ಕನ್ನಡ ನಾಡಿನ ಆಡಳಿತ ಇತಿಹಾಸ ಸಂದರ್ಭದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ವಿಸ್ತಾರವಾದ ಸಾಮ್ರಾಜ್ಯವನ್ನು ಆಡಳಿತ ವಿಭಾಗಗಳಾನ್ನಾಗಿ ವಿಭಾಗಿಸಿ ಆಡಳಿತ ವ್ಯವಸ್ಥೆ ರೂಪಿಸುವ ಸಂಪ್ರದಾಯಗಳು ಪ್ರಾರಂಭವಾದವು. ರಾಷ್ಟ್ರಕೂಟ ಪೂರ್ವದಲ್ಲಿ ಕದಂಬರು ಹಾಗೂ ಬದಾಮಿ ಚಾಲುಕ್ಯರ ಕಾಲದಲ್ಲಿ ಆಡಳಿತ ವಿಭಾಗಗಳ ಉಲ್ಲೇಖಗಳಿದ್ದರೂ ಅವು ನೇರವಾಗಿ ಚಕ್ರವರ್ತಿಯಿಂದಲೇ[೧೪] ನಿರ್ವಹಿಸುತ್ತಿದ್ದವು ಎಂಬುದು ಮುಖ್ಯ ಸಂಗತಿ. ಆ ಕಾಲದಲ್ಲಿ ಕೇಂದ್ರಾಡಳಿತ ಅಂದರೆ ಚಕ್ರವರ್ತಿಯ ಒಪ್ಪಿಗೆಯ ಮೇರೆಗೆ ಅಧಿಕಾರಿಗಳನ್ನು ನೇಮಿಸುವ ಹಾಗೂ ಸ್ಥಾನಪಲ್ಲಟಗೊಳಿಸುವ ನಿಯಂತ್ರಣವನ್ನು ರಾಜನೇ ಹೊಂದಿದ್ದನು. ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ಸಾಮ್ರಾಜ್ಯವನ್ನು ರಾಷ್ಟ್ರ, ಪ್ರಾಂತ, ದೇಶ, ನಾಡು, ವಿಷಯ, ಭುಕ್ತಿ, ಠಾಣೆ ಹಾಗೂ ಹಳ್ಳಿಗಳೆಂದು ಸ್ಪಷ್ಟವಾಗಿ ವಿಭಾಗಿಸಿರುವ ಗುರುತುಗಳು ಲಭ್ಯವಾಗಿದೆ.

ಇವುಗಳ ಆಡಳಿತ ನಿರ್ವಹಣೆಯ ಹೆಚ್ಚಿನ ಜವಾಬ್ದಾರಿಗಳು ಪ್ರಾಂತ್ಯಾಡಳಿತಕಾರಿಗಳಾದ ಮಹಾಮಂಡಳೇಶ್ವರ ಕಡೆಗೆ ವಾಲಿದವು. ಪ್ರಾಂತ್ಯವನ್ನು ವಿಭಾಗಿಸಿ ಅವುಗಳಿಗೆ ಅಧಿಕಾರಿಗಳನ್ನು ಗೊತ್ತುಪಡಿಸುವ ಬಡ್ತಿ ನೀಡುವ ಹಾಗೂ ಕಿತ್ತೊಗೆಯುವ ಸಂಪೂರ್ಣ ಅಧಿಕಾರ ಪ್ರಾಂತ್ಯಾಡಳಿತಧಿಕಾರಿಗಳು ಹೊಂದಿದರು. ಅಲ್ಲದೇ ಮುಖ್ಯವಾಗಿ ಸ್ವಂತ ಸೈನ್ಯ ವ್ಯವಸ್ಥೆಯನ್ನು ರೂಪಿಸಿರುವ ತಾರಮ್ಯ ಪ್ರಾಂತ್ಯಾಡಳಿತಾಧಿಕಾರಿಗಳ ಪಾಲಾಯಿತು. ಇಂಥ ವ್ಯವಸ್ಥೆ ವಿಜಯನಗರ ಆಡಳಿತಾವಧಿಯವರೆಗೆ ಕರ್ನಾಟಕ ಇತಿಹಾಸದಲ್ಲಿ ಮುಂದುವರೆದಿರುವ ದಾಖಲೆಗಳಿವೆ. ಆದರೆ ಪ್ರಾಂತ್ಯಾಡಳಿತಗಳು ಉಚ್ಛ್ರಾಯ ಸ್ಥಿತಿ ತಲುಪಿದ್ದು ಮಾತ್ರ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯವು ನೂರಾರು ಪ್ರಾಂತ್ಯಗಳಲ್ಲಿ ಆಡಳಿತದ ಅನುಕೂಲಕ್ಕಾಗಿ ವಿಭಾಗವಾಗಿತ್ತು. ಈ ಪ್ರಾಂತ್ಯಗಳನ್ನು ದೇಶ, ಮಂಡಲ, ರಾಜ್ಯ, ವಿಷಯ, ಜನಪದ, ಕಂಪಣಗಳೆಂದು ಕರೆಯಲಾಗುತ್ತಿತ್ತು. ಗ್ರಾಮ ಅಥವಾ ಹಳ್ಳಿ ಎಂಬುದು ಆಡಳಿತದ ಕೊನೆಯ ಘಟಕವಾಗಿತ್ತು.

ಆಡಳಿತ ವಿಭಾಗಗಳ ಸಂದರ್ಭಗಳಲ್ಲಿ ಇನ್ನೊಂದು ಮುಖ್ಯವಾದ ಚರ್ಚೆಯ ಸಂಗತಿ ಎಂದರೆ ಆಡಳಿತ ವಿಭಾಗಗಳ ಹೆಸರಿನೊಂದಿಗೆ ಸಂಖ್ಯೆಯನ್ನು ಗೊತ್ತುಪಡಿಸಿರುವುದು. ಪ್ರಾಂತ್ಯಗಳ ಹೆಸರಿನೊಂದಿಗೆ ಉಲ್ಲೇಖವಾಗಿರುವ ಈ ಸಂಖ್ಯೆಗಳು ಆ ಪ್ರಾಂತ್ಯದಲ್ಲಿದ್ದ ಗ್ರಾಮ ಅಥವಾ ಹಳ್ಳಿಗಳ ಸಂಖ್ಯೆಯಂತಲೂ ಕಂದಾಯ ಗ್ರಾಮಗಳೆಂತಲೂ ಹಾಗೂ ೯-೧೨ನೇ ಶತಮಾನದವರೆಗೆ ಆಡಳಿತ ವ್ಯವರ್ಸತೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದ ಮಹಾಜನರ ಸಂಖ್ಯೆ ಗುರುತಿಸುವ

ಅಂಶಗಳೆಂದು ವಿದ್ವಾಂಸರು ತಮ್ಮ ಜಿಜ್ಞಾಸೆಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾ ದೃಷ್ಟಿಕೋನಗಳಲ್ಲಿ ಸಂಶೋಧಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಒಮ್ಮತದ ಅಭಿಪ್ರಾಯದಂತೆ ಆಡಳಿತ ವಿಭಾಗಗಳ ಹೆಸರಿನೊಂದಿಗೆ ಇರುವ ಸಂಖ್ಯೆಯು ಅಲ್ಲಿರುವ ಗ್ರಾಮಗಳ ಅಥವಾ ಹಳ್ಳಿಗಳ ಒಟ್ಟು ಮೊತ್ತವಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ ಎಂಬ ವಿಚಾರ ಎಲ್ಲರಿಗೂ ಮಾನ್ಯವಾದುದು ಕಲ್ಯಾಣದ ಚಾಲುಕ್ಯರ ಅಧಿಕಾರವಧಿಯಲ್ಲಿ ಇಂಥ ನೂರಾರು ಆಡಳಿತ ವಿಭಾಗಗಳು ಉಲ್ಲೇಖಗೊಂಡಿವೆ. ಉದಾಹರಣೆಗೆ ಸಹರ್ಸಮಂಡಲ ಸಾವರಿ ನಾಡು, ಸಾವಿರ ಬಾಡ, ಸಾಸಿರ ನಾಡು, ಸಾಂತಳಿಗೆ ಸಾವಿರ[೧೫], ಕೊಲ್ಲಿಪಾರ ಸಾವಿರ, ಬೆಳ್ವೊಲ ಮುನ್ನೂರು, ಬನವಾಸಿ ಪನ್ನಚ್ಛಾಸಿರ, ಹಾನಗಲ್ಲು ಐನೂರು, ಬಾಸವ್ಯರ ನೂರ ನಲವತ್ತು, ಮಾಸವಾಡಿ ನೂರನಲ್ವತ್ತು ಮತ್ತು ಕಿಸುಕಾಡು ಎಪ್ಪತ್ತು ಮುಂತಾದ ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣುತ್ತೇವೆ.[೧೬]

ಅಕ್ಕಾದೇವಿಯು ಸಹ ತನ್ನ ಆಡಳಿತಾವಧಿಯಲ್ಲಿ ಕೆಲವು ಆಡಳಿತ ವಿಭಾಗಗಳನ್ನು ಹೊಂದಿದ್ದಳು. ಅವುಗಳಲ್ಲಿ ಕಿಸುಕಾಡು ಎಪ್ಪತ್ತು, ತೊರಗೆರೆ ಅರವತ್ತು, ಬಾಗಡಗೆ ಎಪ್ಪತ್ತು, ಮಾಸುವಾಡಿ ನೂರಾನಲ್ವತ್ತು, ಪನ್ನಲಕೋಟೆ, ಗೋಕಾಕ್ ಇವುಗಳನ್ನೆಲ್ಲ ಒಳಗೊಂಡ ಆಡಳಿತದ ವಿಭಾಗಗಳು ಪ್ರಮುಖ ಕೆಲವು ವಿಕ್ರಮ ಪುರವಾಗಿತ್ತು.

ಕಿಸುಕಾಡು – ಎಪ್ಪತ್ತು.

ಈ ವಿಭಾಗವು ಬೆಳ್ವೊಲ ನಾಡಿನಲ್ಲಿ ಕಂಡುಬರುತ್ತದೆ. ಈ ಕಿಸುಕಾಡು ಎಪ್ಪತ್ತರಲ್ಲಿ ಕಂಡುಬರುವ ಗ್ರಾಮಗಳೆಂದರೆ ರೋಣ ತಾಲ್ಲೂಕಿನ ಅಬ್ಬಿಗೆರೆ, ನಿಡುಗುಂದಿ, ಸೂಡಿಗಳಾಗಿವೆ. ಹಾಗೆಯೇ ಬಾಗಲಕೋಟೆ ಜಿಲ್ಲೆಯ ಹುನುಗುಂದ ತಾಲ್ಲೂಕಿನ ಕೆಲವು ಗ್ರಾಮಗಳು, ಬಾದಾಮಿ ತಾಲ್ಲೂಕಿನ ಕೆಲವು ಗ್ರಾಮಗಳು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೆಲವು ಗ್ರಾಮಗಳೆಂದರೆ ನಿಡಗುಂದಿ, ಸೂಡಿ, ಬಾದುಬ್ಬೆಯ ಪಾಳ, ಕಿಸುಕಾಡು ೭೦ ರಲ್ಲಿದ್ದವು. ಈ ಕಿಸುಕಾಡಿನ ಉಪವಿಭಾಗ ಹುನುಗುಂದ– ಮೂವತ್ತು ಎಂದು ತಿಳಿದುಬರುವುದು. ಬಾಗಲಕೋಟೆಯ ಅರಿಸಿಬೀದಿಯನ್ನು ಶಾಸನದಲ್ಲಿ ವಿಕ್ರಮಪುರ ಎಂದು ಕರೆಯಲಾಗಿದೆ.[೧೭] ಈ ವಿಕ್ರಮಪುರ ಅಕ್ಕಾದೇವಿಯ ಆಡಳಿತ ವಿಭಾಗದ ಮುಖ್ಯ ಪಟ್ಟಣವಾಗಿತ್ತು. ಇಲ್ಲಿಂದಲೇ ಅವಳು ತನ್ನ ರಾಜ್ಯಾಧಿಕಾರವನ್ನು ನಿರ್ಧರಿಸುತ್ತಿದ್ದರ ಬಗೆಗೆ ದಾಖಲೆಗಳಿವೆ.

ಮಾಸವಾಡಿ – ನೂರಾನಲ್ವತ್ತು

ಹನ್ನೊಂದನೆಯ ಶತಮಾನದಲ್ಲಿ ಮಾಸವಾಡಿನಾಡು ಎಂದು ಉಲ್ಲೇಖಗೊಂಡಿದೆ. ಇದು ಮಾಸೆಯರ + ವಾಡಿ + ನಾಡು + ಮಾಸೆವಾಡಿನಾಡು ಎಂದಾಗುತ್ತದೆ. ಈ ಹೆಸರಿನಲ್ಲಿಯ ಪೂರ್ವಪದ 'ಮಾಸೆಯರು' ಎನ್ನುವುದು ಜನಾಂಗವಾಚಿಯಾಗಿದ್ದು, ಮಾಸೆಯರು ನೆಲೆಗಿಂತ ನಾಡೇ ಮಾಸೆವಾಡಿನಾಡು, ಮಾಸವಾಡಿನಾಡು,

ಇಲ್ಲಿಯ ೧೪೦ ಎನ್ನುವುದು ಈ ಪ್ರಾಂತದಲ್ಲಿರುವ ಹಳ್ಳಿಗಳ ಸಂಖ್ಯೆಯಾಗಿದೆ. ಈ ಹಳ್ಳಿಗಳ ಹೆಸರುಗಳನ್ನು ಗುರುತಿಸಲು ಮುಂಡರಗಿ ತಾಲ್ಲೂಕಿನ ಹಿರೇವಡ್ಡಟ್ಟಿಯ ಶಾಸನ ಬಹುಮುಖ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ಈ ಶಾಸನವು ಮಾಸವಾಡಿ ಪ್ರಾಂತ್ಯದಲ್ಲಿರುವ ಹಳ್ಳಿಗಳಲ್ಲಿಯ ಭೂಮಿಯನ್ನು ಹಿರೇಮಡ್ಡಟ್ಟಿಯ ಬಲ್ಲಾಳೇಶ್ವರ, ರೆಮೇಶ್ವರ ದೇವರಿಗೆ ದತ್ತಿಯಾಗಿ ಬಿಟ್ಟಿರುವುದನ್ನು ಹೇಳುತ್ತದೆ. ಈ ಹಳ್ಳಿಗಳೆಂದರೆ ಕೊಪ್ಪಳ ಜಿಲ್ಲೆಯಲ್ಲಿ ಬರುವ ಸಿಂಧವರಿಗೆ (ಸಿಂಧೋಗಿ), ನೆಲುವಿಗೆ (ನೆಲೋಗಿ), ತಿಗುರೆ (ತಿಗುರಿ), ನಿಡುಸುವಗೆ (ನಿಡೋಸೋಗಿ), ಗುಡ್ಡನಾಲೂರ (ಗುಡ್ಲಾನೂರ) ಕೂಡಲಿಗೆ (ಕೂಡ್ಲಿಗಿ), ಗೊಗ್ಗಾಬಾಳು (ಗೊಂಡಬಾಳ), ಕಾತರಿಕೆ (ಕಾತರಿಕೆ), ಕೋಳೂರು, ಹಲುಗೆರೆ (ಹಲಗೆರೆ) ಕೆಸುನೆಲಗಳು, ಹಾಗೆಯೇ ಮುಂಡರಗಿ ತಾಲ್ಲೂಕಿನ ಆಲೂರು (ಪೇಠಾಲೂರು), ಸಿರಿವೂರ (ಜಂತ್ಲಿ ಶಿರೂರು), ಮೇಳುಬೀಡು (ಮೇವುಂಡಿ) ಬರದೂರು, ಹಾರುವಗೆರೆ (ಹಾರುಗೇರಿ), ಮೆಂಡರೆ (ಮುಂಡರಗಿ), ಬಲವಾಡಿ, ಕಿಸುಕುಂಡಿ (ತಾಮ್ರಗುಂಡಿ) ಸಿಂಗಟಲೂರು (ಸಿಂಗಟಾಲೂರು) ಕೊರಲಹಳ್ಳಿ (ಕೋರ್ಲಹಳ್ಳಿ) ಹೆಸರೂರು, ಹೊನ್ನಬರದೂರು, ಬರದೂರು, ಮುಂತಾದವುಗಳು. ಶಿರಹಟ್ಟಿ ತಾಲ್ಲೂಕಿನ ಅರಹಟ ಅರಗಿಲವಾಡ (ಅಲಗಿವಾಡ) ಕನಹಳ್ಳಿ ಬೆಳವಿ (ಬೆಳವಿಗೆ), ಇತ್ಯಾದಿಗಳು. ಯಲಬುರ್ಗಿ ತಾಲ್ಲೂಕಿನ ಎಡೆಹಳ್ಳಿ (ಎಡೆಹಳ್ಳಿ) ಮತ್ತು ಗಂಗಾವತಿ ತಾಲ್ಲೂಕಿನಲ್ಲಿರುವ ಹೊನ್ನೆಯರಹಳ್ಳಿ ಆನೆಗುಂದಿಗಳು. ಎಲ್ಲ ಊರುಗಳು ಮಾಸವಾಡಿ ೧೪೦ ರಲ್ಲಿ ಸೇರಿಸುವುದನ್ನು ತಿಳಿಸುವ ಈ ಶಾಸನದ ಆಧಾರದ ಮೇಲೆ ಮಾಸವಾಡಿ ಪ್ರಾಂತ್ಯದ ಸಂಸ್ಥೆಯನ್ನು ರಚಿಸಬಹುದಾಗಿದೆ. ಇದರಿಂದಾಗಿ ತುಂಗಭದ್ರೆಯ ಎಡೆದಂಡೆಯಲ್ಲಿರುವ ಮೇಲ್ಕಾಣಿಸಿದ ಊರುಗಳನ್ನು ಒಳಗೊಂಡಂತೆ ಮುಂಡರಗಿ ಕೊಪ್ಪಳ ಶಿರಹಟ್ಟಿ, ಗಂಗಾವತಿ, ಯಲಬುರ್ಗಾ ತಾಲ್ಲೂಕುಗಳ ಭಾಗವೇ ಮಾಸವಾಡಿ ೧೪೦ ಆಗಿತ್ತೆಂದು ಅದರ ವಿಸ್ತಾರವನ್ನು ಖಚಿತವಾಗಿ ಗುರುತಿಸಬಹುದಾಗಿದೆ.

ಡಂಬಳ ಮತ್ತು ಮುಂಡರಗಿ ಈ ಎರಡು ಹೋಬಳಿಗಳನ್ನು ಪ್ರಮುಖವಾಗಿ ಹೊಂದಿದ ಮಾಸವಾಡಿನಾಡು ನೂರನಲ್ವತ್ತು ಹಳ್ಳಿಗಳ ಆಡಳಿತ ವಿಭಾಗವಾಗಿ ರೂಪಗೊಂಡ ಈ ನಾಡು ಶಾಸನಗಳಲ್ಲಿ ಮಾಸವಾಡಿ ನೂರಾನಲ್ವತ್ತರ, ಮಾಸವಾಡಿ ನೂರನಲ್ವತ್ತರಮಂ, ಮಾಸವಾಡಿ ನೂರಾನಲ್ವತ್ತು, ಮಾಸವಾಡಿ ನೂರಾನಲ್ವತ್ತರ, ಮಾಸವಾಡಿನಾಡು, ಮಾಸವಾಡಿ ಎಂಬ ರೂಪಗಳಲ್ಲಿ ಕಾಣಿಸಿಕೊಂಡಿವೆ. ಇದರಿಂದ ಮಾಸವಾಡಿಯ 'ನಾಡು' ಆಗಿತ್ತು ಎಂಬುದು ವಿಧಿತವಾಗುತ್ತದೆ.

ಈ ಮಾಸವಾಡಿ ನೂರನಲವತ್ತರ ರಾಜಧಾನಿ ಕೊಪ್ಪಳ ತಾಲ್ಲೂಕಿನ ಹಿರೇಸಿಂಧೋಗಿ ಯಾಗಿದ್ದಿತೇ? ಅಥವಾ ಐತಿಹ್ಯಗಳ ಅನ್ವಯ ಡಂಬಳ ಈ ನಾಡಿನ ರಾಜಧಾನಿಯಾಗಿದ್ದೀತೆ? ಅಥವಾ ಮೋಳವೀಡಾಗಿತ್ತೇ? (ಮೇವುಂಡಿ) ಎನ್ನುವುದನ್ನು ಆಧಾರಗಳು ದೊರೆತಾಗ ಮಾತ್ರ ನಿಖರವಾಗಿ ನಿರ್ಣಯಿಸಬಹುದಾಗಿದೆ. ರಾಜಧಾನಿ ಸಿಂದವಿಗೆ ಮತ್ತು ರಾಜಧಾನಿ ಮೇಳುವೀಡು

ಎಂಬ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ ಎನ್ನುವುದು ಗಮನಾರ್ಹ. ಆದರೆ ಈ ಮಾಸವಾಡಿ ನೂರನಲವತ್ತರಲ್ಲಿ ಲಕ್ಕುಂಡಿಯು ಸೇರಿರಲಿಲ್ಲ ಎನ್ನುವುದು ಖಚಿತವಾಗಿದೆ.

ಈ ನಾಡಿನಲ್ಲಿ ಆಲೂರು, ಕಕ್ಕೂರು, ಡಂಬಳ, ಮೇವುಂಡಿ, ತಾಮ್ರಗುಂಡಿ, ಬರದೂರು, ಬಿದರಳ್ಳಿ, ಚಿಕ್ಕವಡ್ಡಟ್ಟಿ, ಮುಂಡರಗಿ, ಕವಲೂರುಗಳು ಸೇರಿದ್ದವೆಂದು ಇತರೆಡೆಯ ಶಾಸನಗಳಿಂದ ತಿಳಿದುಬರುತ್ತದೆ.

ಈ ನಾಡನ್ನು ಕಲ್ಯಾಣ ಚಾಲುಕ್ಯ ವಂಶದ 'ರಣಭೈರವಿ' ಬಿರುದಿನ ಅಕ್ಕಾದೇವಿ ಆಳುತ್ತಿದ್ದಳೆಂದು ಸೂಡಿ ಶಾಸನದಲ್ಲಿ ಉಲ್ಲೇಖವಾಗಿದೆ. ಇದಲ್ಲದೆ ಸಂಕನೂರ ಮತ್ತು ಅಣ್ಣಿಗೇರಿ ಶಾಸನಗಳಲ್ಲಿಯೂ ಈ ನಾಡಿನ ಪ್ರಸ್ತಾಪವಿದೆ. ಈ ನಾಡು ಕನ್ನಡದ ತಿರುಳೆನಿಸಿದೆ ಎಂಬುದಕ್ಕೆ ಕವಿರಾಜಮಾರ್ಗದ ಈ ಕೆಳಗಿನ ಪದ್ಯವೇ ಸಾಕ್ಷಿಯಾಗಿದೆ.

ಅದರೊಳಗಂ ಕಿಸುವೊಳಲಾ ।

ವಿದಿತ ಮಹಾಕೋಪಣ ನಗರದಾ ಪುಲಿಗೆರೆಯಾ ।

ಸದಭಿಸುತ್ತಮಪ್ಪೊಂಕುಂ ।

ದದ ನಡುವಣ ನಾಡ ನಾಡೆ ಕನ್ನಡದ ತಿರಳ್ ।

ಈ ಪ್ರದೇಶ ಕನ್ನಡದ ತಿರುಳೆನಿಸಿದ ಕೊಪ್ಪಳ ಪುಲಿಗೆರೆ (ಲಕ್ಷ್ಮೇಶ್ವರ) ಒಕ್ಕುಂದ, ಕಿಸುವೊಳಲ್ (ಪಟ್ಟದಕಲ್ಲು)ಗಳ ಮಧ್ಯದಲ್ಲಿರುವ ಕಾರಣ ಇದು ಮಾಸವಾಡಿ ನಾಡೇ ಆಗಿದೆ.[೧೮] ಹೀಗೆ ಮಾಸವಾಡಿ ನೂರನಲ್ವತ್ತು ಆಡಳಿತ ವಿಭಾಗವು ಅಕ್ಕಾದೇವಿಯ ಆಡಳಿತಕ್ಕೆ ಒಳಪಟ್ಟು ಆಡಳಿತವಾಗಿತ್ತು.

ಬಾಗಡಗೆ-೭೦

ಎಪ್ಪತ್ತು ಗ್ರಾಮಗಳನ್ನು ಹೊಂದಿರುವ ಈ ಆಡಳಿತ ವಿಭಾಗದಲ್ಲಿ ಬಾಗಲಕೋಟೆ ಜಿಲ್ಲೆಯ ಕೆಲವು ಗ್ರಾಮಗಳನ್ನು ಹೊಂದಿದೆ. ಹಿಂದೆ ಈ ಜಿಲ್ಲೆಯನ್ನು ಬಾಗಡಗೆ ಎಂದು ಕರೆಯುತ್ತಿದ್ದರು.[೧೯]

ಪನ್ನಲಕೋಟೆ

ಪನ್ನಲಕೋಟೆ ಇದನ್ನು ಪನ್ನಲದುರ್ಗ ಎನ್ನುವರು ಇದು ಕೊಲ್ಲಾಪುರದ ವಾಯುವ್ಯಕ್ಕೆ ೧೨ ಮೈಲು ದೂರದಲ್ಲಿ ಕಂಡುಬರುತ್ತದೆ.[೨೦]

ಆಡಳಿತ ಕಾರ್ಯಗಳು

ಕಲ್ಯಾಣದ ಚಾಲುಕ್ಯರು ತಮ್ಮ ಸಾಮ್ರಾಜ್ಯ ಆಡಳಿತ ವ್ಯವಸ್ಥಿತವಾಗಿ ಸಾಗಲು ಹಾಗೂ ದಕ್ಷತೆಯಿಂದ ನಡೆಸಿಕೊಂಡು ಹೋಗಲು ಆಡಳಿತದಲ್ಲಿ ಕೇಂದ್ರಾಡಳಿತ ಮತ್ತು ಪ್ರಾಂತ್ಯಾಡಳಿತ

ಎಂದು ಎರಡು ವಿಭಾಗಗಳನ್ನು ಮಾಡಿದ್ದರು. ಪ್ರಾಂತ್ಯಗಳ ಅಧೀನದಲ್ಲಿ ನಾಡು, ವಿಷಯ, ಕಂಪಣ ಹಾಗೂ ಗ್ರಾಮಗಳಿದ್ದವು.

ರಾಜ್ಯದ ಅರಸನೇ ಕೇಂದ್ರಾಡಳಿತದ ಮುಖ್ಯಸ್ಥನಾಗಿದ್ದನು. ಆಡಳಿತದಲ್ಲಿ ತನ್ನ ಸಹಾಯಕರನ್ನಾಗಿ ಪ್ರಧಾನಮಂತ್ರಿ, ಮಂತ್ರಿಮಂಡಲ, ಗಾವುಂಡ, ಕರಣಿಕರುಗಳನ್ನು ನೇಮಕ ಮಾಡಿದ್ದನು. ಪ್ರಾಂತೀಯ ಅಧಿಕಾರಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವರಿಗೆ ಕೆಲವು ಅಧಿಕಾರಿಗಳನ್ನು ನೀಡಿದ್ದನು. ಈ ಅಧಿಕಾರಿಗಳು ಸಾಮಾಜಿಕವಾಗಿ ಕೆರೆ, ಬಾವಿ, ಕಟ್ಟಿಸುವುದು ಹಾಗೂ ಉತ್ಸವಗಳನ್ನು ನಡೆಸುವ ಮುಂತಾದ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ತಪ್ಪು ಮಾಡಿದ ಅಪರಾಧಿಗಳಿಗೆ ಶಿಕ್ಷಿಸುವ ಹಾಗೂ ದಂಡ ವಿಧಿಸುವ ಅಧಿಕಾರ ಹೊಂದಿದ್ದರು. ಧಾರ್ಮಿಕವಾಗಿ ದೇವಾಲಯಗಳ ನಿರ್ಮಾಣ ಹಾಗೂ ಅವುಗಳಿಗೆ ದಾನದತ್ತಿ ನೀಡುವುದು ಮತ್ತು ಪಂಡಿತರನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿದ್ದರು.

ಅಕ್ಕಾದೇವಿಯು ಸುಮಾರು ಐವತ್ನಾಲ್ಕು ವರ್ಷಗಳ ಕಾಲ ತನ್ನ ಆಡಳಿತವನ್ನು ನಿರ್ವಹಿಸಿದಳು. ಅಂದರೆ ಕ್ರಿ.ಶ. ೧೦೧೦ರಿಂದ ಕ್ರಿ.ಶ.೧೦೬೪ರವರೆಗೆ ಎಂದು ತಿಳಿದುಬರುತ್ತದೆ. ಇವಳ ಆಡಳಿತದ ಬಗೆಗೆ ಕೆಲವು ಶಾಸನಗಳು ಮಾಹಿತಿಯನ್ನು ಒದಗಿಸುತ್ತವೆ. ಅವುಗಳಲ್ಲಿ ಕ್ರಿ.ಶ. ೧೦೧೦ ಸೂಡಿ ಶಾಸನ (ಎ.ಇ.XV-6), ಕ್ರಿ.ಶ. ೧೦೫೮ ಸೂಡಿ ಶಾಸನ (ಎ.ಇ.XV-6), ಕ್ರಿ.ಶ. ೧೦೫೮ ಸೂಡಿ ಶಾಶನ (ಎ.ಇ.XV-6) ಕ್ರಿ.ಶ. ೧೦೨೨ ಬೇಲೂರು ಶಾಸನ (ಬಾಗಲಕೋಟೆ ಶಾಸನ ಸೂಚಿ) ಕ್ರಿ.ಶ. ೧೦೩೭ (ಎ.ವಿ.XVI-II) ಹೊಟ್ಟೂರು ಶಾಸನ, ಕ್ರಿ.ಶ. ೧೧೬೪ ಹೊಟ್ಟುರು ಶಾಸನ, ಕ್ರಿ.ಶ. ೧೧೬೪ ಹೊಟ್ಟೂರು ಶಾಸನ (ಎ.ಇ.XVI-II), ಕ್ರಿ.ಶ. ೧೦೪೭ ಅರಸೀಬೀದಿ ಶಾಸನ (ಎ.ಇ. XV-10) ಕ್ರಿ.ಶ. ೧೦೫೩ ಅರಸಿಬೀದಿ ಶಾಸನ (ಬಾಗಲಕೋಟಿ ಶಾಸನ ಸೂಚಿ ನಂ.೧೦೩) ಕ್ರಿ.ಶ.೧೦೫೦ ಕೊರಲಹಳ್ಳಿ ಶಾಸನ (ಎಸ್.ಆಯ್.ಆಯ್.XV-i-86)

ಅಕ್ಕಾದೇವಿಯು ತನ್ನ ಆಡಳಿತದವನ್ನು ಅತ್ಯಂತ ಚಾಣಾಕ್ಷತನದಿಂದ ನಿರ್ವಹಿಸುತ್ತಿದ್ದಳು. ಇವಳು ಆಡಳಿತದ ರಾಜಧಾನಿ ವಿಕ್ರಮಪುರ ಅಥವಾ ಅರಸಿಬೀದಿ ಹಾಗೆಯೇ ಇನ್ನೊಂದು ಆಡಳಿತ ಪ್ರದೇಶ ಸೂಡಿ ಎಂದು ತಿಳಿದುಬರುತ್ತದೆ. ಅಕ್ಕಾದೇವಿಯ ಸೂಡಿಯ ಆಡಳಿತವನ್ನು ನಿರ್ವಹಿಸಿಕೊಂಡು ಹೋಗಲು ಆರು ಜನ ಗಾವುಂಡವನ್ನು ಮತ್ತು ಎಂಟು ಜನ ಶೆಟ್ಟಿಯರನ್ನು ನೇಮಕ ಮಾಡಿದ್ದಳು. ಆರು ಜನ ಗಾವುಂಡರಲ್ಲಿ ಮಂತ್ರಿ ಕಾಳಿದಾಸಯ್ಯ, ಭೂ ಅಧಿಕಾರಿ ಮಲ್ಲಯ್ಯ, ತಂತ್ರಪಾಲ ಚಟ್ಟಿಮಯ್ಯ, ಪ್ರಧಾನದೇಮನ್ನ, ಅಳಿಯ ಚಂದಿಮಯ್ಯ, ಹಡಪದ ಚಾವುಂಡರಾಯರಾಗಿದ್ದಾರೆ. ಈ ಗಾವುಂಡರ ಮೇಲೆ ಇನ್ನೂ ಇಬ್ಬರು ಅಧಿಕಾರಿಗಳಿದ್ದರು ಅವರಲ್ಲಿ ಕಾರ್ಯದಲ್ಲಿ ದಾಸಿಮಯ್ಯ, ಆಡಳಿತ ಅಧಿಕಾರಿ ನಾಗದೇವಯ ಎಂದು ತಿಳಿದುಬರುತ್ತದೆ.

ಇವಳ ಆಡಳಿತದಲ್ಲಿಯ ಎಂಟು ಜನ ಶೆಟ್ಟಿಯವರ ಕಾರ್ಯವೆಂದರೆ ಆಡಳಿತದ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದ್ದರು. ಜೊತೆಗೆ ಪೂಜೆಗಳ ಮೇಲಿನ ತೆರಿಗೆ ಸಂಬಂಧಿಸಿದಂತೆ ಅಧಿಕಾರಿಗೆ ಸಲಹೆ ನೀಡುತ್ತಿದ್ದುದ್ದು ಇವರ ಮತ್ತೊಂದು ಕಾರ್ಯವಾಗಿತ್ತು. ಈ ಆಡಳಿತದಲ್ಲಿ ಅಜ್ಜಮಯ್ಯ ಶೆಟ್ಟಿ, ಮಗ ಬಲ್ಲಯ್ಯ, ಸುಭಾನಯ್ಯ ಶೆಟ್ಟಿ, ಮದನಾಗಯ್ಯ ಶೆಟ್ಟಿ, ಚಾಮನ್ನ ಶೆಟ್ಟಿ, ಜಯದೇವಯ್ಯ ಶೆಟ್ಟಿ, ಹೀಗೆ ಎಂಟು ಜನ ಶೆಟ್ಟಿಯರನ್ನು ಸೂಡಿ ಆಡಳಿತದ ಪ್ರದೇಶದಲ್ಲಿ ನೇಮಕ ಮಾಡಿದ್ದಳು.[೨೨]

ಅಕ್ಕಾದೇವಿಯು ಬ್ರಾಹ್ಮಣರಿಗೆ ದಾನ ನೀಡಿದ್ದುದರ ಬಗ್ಗೆ ತಿಳಿದುಬರುತ್ತದೆ. (ಎ.ಇ.XV-6, ೧೦೧೦) ಅವಳು ೧೧೪ ಮತ್ತರು ಕೆಂಪು ಭೂಮಿಯನ್ನು ನೀಡಿದ್ದಲ್ಲದೆ ಅವರಿಗೆ ಗೌರವದ ಸ್ಥಾನವನ್ನು ನೀಡಿದ್ದಳು. ಹಾಗೆಯೇ ವಿದ್ಯಾಕೇಂದ್ರಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ, ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟಿದ್ದಳು. ಈ ಬ್ರಾಹ್ಮಣರಿಗೆ ಗ್ರಾಮಗಳಲ್ಲಿ 'ಮಹಾಜನ' ಎಂದು ಕರೆಯುತ್ತಿದ್ದರು. ತಮಗೆ ದಾನದ ರೂಪದಲ್ಲಿ ದೊರೆತ ಭೂಮಿಯನ್ನು ರೈತರಿಗೆ ಗುತ್ತಿಗೆಗೆ ನೀಡುವರು. ಅವರು ಬೆಳೆದ ಬೆಳೆಗಳನ್ನು ಸಾಮ್ರಾಜ್ಯಕ್ಕೆ ನೀಡಿ ಪ್ರತಿಯಾಗಿ ಹಣದ ರೂಪದಲ್ಲಿ ಆದಾಯ ಪಡೆಯುತ್ತಿದ್ದರು.[೨೩]

ಅಕ್ಕಾದೇವಿಯು ತನ್ನ ಆಡಳಿತ ರಾಜಧಾನಿಯಾದ ವಿಕ್ರಮಪುರ (ಅರಸಿಬೀದಿ)ದ ಆಡಳಿತ ನಿರ್ವಹಣೆಯಲ್ಲಿ ಅನೇಕ ಮಂತ್ರಿಗಳನ್ನು ನೇಮಕ ಮಾಡಿದ್ದಳು. ಅವರು ಅವಳಿಗೆ ಸಹಾಯಕವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನಾಗದೇವಯ್ಯ ಎಂಬುವನು ಆಡಳಿತದ ಅಧಿಕಾರಿ (ನಡ–ಪರ್ಗಡೆ) ಯಾಗಿದ್ದನು. ರೇವದಾಸಯ್ಯ ಎಂಬುವನು ಆಡಳಿತದ ಮತ್ತೊಬ್ಬ ಸಹಾಯಕ ಅಧಿಕಾರಿಯಾಗಿದ್ದನು. ಹಾಗೂ ಮಾದವಯ್ಯ ನ್ಯಾಯವನ್ನು ನೀಡುವವನಾಗಿದ್ದನು. ಹೀಗೆ ಆಡಳಿತದಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವ ಮೂಲಕ ಆಡಳಿತದಲ್ಲಿ ದಕ್ಷತೆಯನ್ನು ಸಾಧಿಸಿದ್ದಳು.[೨೪]

ಸೂಡಿ ಆಡಳಿತಕ್ಕೆ ಒಳಪಟ್ಟ ಕರಗಮಬಿಡಿನ ಸುತ್ತಮುತ್ತಲೂ ಇರುವ ಹೊಲ, ಮನೆ, ಅಂಗಡಿಗಳಿದ್ದವು. ಇವರಿಗೆ ಒಂದು ವರ್ಷಕ್ಕೆ ಹದಿನೆಂಟು ಗದ್ಯಾಣಗಳೆಂದು ಭೂ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು. ಇಪ್ಪತ್ತೈದು ಒಂದು ಗದ್ಯಾಣ ಹತ್ತು ಪಣಕ್ಕೆ ಸಮವಾಗಿತ್ತು. ಒಂದು ಪಣ ನಾಲ್ಕು ಹಗಕ್ಕೆ ಸಮ, ಒಂದು ಪಣ ನಾಲ್ಕು ಕಾಗಿಣೆಗೆ ಸಮ, ಒಂದು ಹಗ ನಾಲ್ಕು ಅಥವಾ ಐದು ವಿಸಾಕ್ಕೆ ಸಮ, ಒಂದು ಹಗ ಎರಡು ಬಿಲ್ಲೆಗಳಿಗೆ ಸಮವಾಗಿದ್ದವು. ವಸೂಲಿ ಮಾಡಿದ ತೆರಿಗೆಯು ದಾನ ಸಂಸ್ಥಾನಗಳಿಗೆ ಸೇರುತ್ತಿತ್ತು. ಆದರೆ ಸೂಡಿ ಆಡಳಿತದಲ್ಲಿದ್ದ ಎಂಟು ಜನ ಶೆಟ್ಟಿಗಳಿಗೆ ಮಾತ್ರ ಈ ಭೂ ತೆರಿಗೆ ವಸೂಲಿ ಮಾಡುವಂತಿರಲಿಲ್ಲ.[೨೫]

ಕಿಸುಕಾಡು–ಎಪ್ಪತ್ತರ ಪಟ್ಟಣದಲ್ಲಿ ಏನಾದರೂ ಅನ್ಯಾಯ ನಡೆದರೆ ಅದಕ್ಕೆ ತಳವಾರನೇ ಹೊಣೆಯಾಗಿದ್ದನು. ತಂದೆಯ ದೊಡ್ಡ ಮಗನನ್ನು ಮಗನ ದೋಷ ತಂದೆಯನ್ನು ಹೊಂದುವುದಿಲ್ಲ.

ಆದರೆ ಯಾರು ತಪ್ಪು ಮಾಡಿರುತ್ತಾರೋ ಅವರಿಗೆ ಶಿಕ್ಷಿಸಬೇಕು. ಅವರನ್ನು ಬಿಟ್ಟು ಬೇರೆಯವರನ್ನು ದಂಡಿಸಿದರೆ ಅವರಿಗೂ ದಂಡವಿತ್ತು ಕಳ್ಳ, ಬಂಧಿಕಾರ ಅಂಚಲವಿಡ, ಹಗೆ, ಕೆಟ್ಟ ಮನುಷ್ಯ, ಅಪರಾಧಿಗಳನ್ನು ಅಪರಾದದ ಸ್ಥಳದಲ್ಲಿ ಇರಿದರೆ ಯಾವುದೇ ದಂಡವಿರಲಿಲ್ಲ. ಇವರನ್ನು ಬಿಟ್ಟು ನಿರಪರಾಧಿಗಳನ್ನು ಇರಿದರೆ ಅಂತವರನ್ನು ಅಂದರೆ ಇರಿದವರು ಮೂರು ಗದ್ಯಾಣ ದಂಡವನ್ನು ಕೊಡಬೇಕಿತ್ತು.[೨೭]

ಅಕ್ಕಾದೇವಿಯು ಆಡಳಿತ ಕಾರ್ಯಗಳನ್ನು ಯಶಸ್ವಿಯಾಗಿ ನಿಭಾಯಿಸಿದಂತೆ ಸೈನಿಕ ಚಟುವಟಿಕೆಗಳನ್ನು ಮಾಡಿರುವ ಸಂಗತಿಗಳು ತಿಳಿದುಬರುತ್ತವೆ. ಅವುಗಳನ್ನು ಗೋಕಾಕದ ಕೋತ್ವಾಲನ ಮೇಲೆ ಆಕ್ರಮಣ ಮಾಡಿ ಅವನನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡಳು. ಈ ಸಾಧನೆಯ ಹಿನ್ನಲೆಯಲ್ಲಿ ಬೇಲೂರು ಶಾಸನವು ಅಕ್ಕಾದೇವಿಯನ್ನು ರಣಭೈರವಿ ಎಂದು ಶೌರ್ಯ ಪರಾಕ್ರಮವನ್ನು ಬಣ್ಣಿಸಿದೆ.[೨೮]

ಅಡಿಟಿಪ್ಪಣಿಗಳು

೧. ಸುರೇಂದ್ರರಾವ್.ಬಿ : ಕರ್ನಾಟಕ ಚರಿತ್ರೆ ಸಂ.೨ – ಪುಟ, ೫೭, ೧೯೯೭.

೨. ಗೋಪಾಲ್.ಬಿ.ಆರ್. : ಕಲ್ಯಾಣ ಚಾಲುಕ್ಯ ಆಂಡ ಕಲ್ಚರಿ ಪುಟ ೧೧೯.

೩. ಅದೇ ೧೫೬–೧೫೭.

೪. ಸುರೇಂದ್ರರಾವ್.ಬಿ : ಕರ್ನಾಟಕ ಚರಿತ್ರೆ, ಸಂ.೨, ಪುಟ ೬೪, ೧೯೯೭.

೫. ಅದೇ ಪುಟ. ೨೫೨.

೬. ಜಾರ್ಜ್ ಎಂ.ಮೊರೆಸ್ : ಕದಂಬ ಕುಲ, ಪುಟ ೧೫, ೧೯೯೦.

೭. ಅದೇ ಪುಟ. ೧೬

೮. ಎ.ಇ. Vol, XVI-11ಹೊಟ್ಟೂರು (ತಾ), ಬಂಕಾಪುರ – ೧೦೩೭.

೯. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೧೦.

೧೦. ಎ.ಇ. Vol, XVI-11 ಹೊಟ್ಟೂರು (ತಾ), ಬಂಕಾಪುರ – ೧೦೬೪.

೧೧. ಚನ್ನಕ ಪಾವಟೆ : ಹಾನಗಲ್ಲ ಕದಂಬರು, ಪುಟ ೪೧.

೧೩. ವಾಸುದೇವ ಬಡಿಗೇರ : ಹಾನಗಲ್ಲು, ಪುಟ ೩೬.

೧೪. ಅದೇ ಪುಟ ೩೭.

೧೫. ಅದೇ ಪುಟ ೩೮

೧೬. ಅದೇ, ಪುಟ ೩೯

೧೭. ಜೆ.ಎಂ. ನಾಗಯ್ಯ : ಆರನೇ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ಪುಟ ೧೦೫೬.

೧೮. ಡಂಬಳ : ಸಾಂಸ್ಕೃತಿಕ ಅಧ್ಯಯನ, ಪುಟ ೬, ೭, ೮.

೧೯. ಜೆ.ಎಂ. ನಾಗಯ್ಯ : ಆರನೇ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ಪುಟ ೧೦೫–೬, ೧೯೯೨.

೨೦. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೦.

೨೧. ಎಸ್.ಎನ್.ಶಿವರುದ್ರಸ್ವಾಮಿ : ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ ಪುಟ.೧೫೫, ೨೦೦೨.

೨೨. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೦.

೨೩. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೧೦.

೨೪. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೪.

೨೫. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೦.

೨೬. ಎಂ.ಎಸ್. ನಾಗರಾಜರಾವ್, ದಿ ಚಾಲುಕ್ಯಾಸ್ ಆಫ್ ಕಲ್ಯಾಣ – ೧೯೮೩, ಪುಟ ೧೭.

೨೭. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೦.

೨೮. ಎ.ಇ. Vol, XV-6 ಸೂಡಿ, (ತಾ), ರೋಣ – ೧೦೫೪.

ಅಧ್ಯಾಯ : ಮೂರು

ಸಮಾಜೋ-ಧಾರ್ಮಿಕ ಕಾರ್ಯಗಳು

ಅಧ್ಯಾಯ : ಮೂರು

ಸಮಾಜೋ-ಧಾರ್ಮಿಕ ಕಾರ್ಯಗಳು

ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಮಹಿಳೆಯರ ಸ್ಥಿತಿಗತಿಯು ಉತ್ತಮವಾಗಿತ್ತು. ಈ ಕಾಲದ ಸಮಾಜದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಅವರಿಗೆ ಅನುಕೂಲಕರವಾಗಿದ್ದವು. ಈ ಕಾಲಾವಧಿಗೆ ಸಂಬಂಧಿಸಿದ ಶಾಸನಾಧಾರಗಳು ರಾಜಮನೆತನಕ್ಕೆ ಸಂಬಂಧಿಸಿದ ಮಹಿಳೆಯರ ಕುರಿತಲ್ಲದೇ ಆ ಕಾಲದ ಆಡಳಿತ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಕ್ರಿಯಾಶೀಲರಾಗಿರುವ ತಮ್ಮನ್ನು ತಾವು ತೊಡಗಿಸಿಕೊಂಡಂತಹ ಕೆಳವರ್ಗದ ಮಹಿಳೆಯರ ಹೆಸರನ್ನೂ ಸೂಚಿಸುತ್ತವೆ. ಇದರಲ್ಲಿ ಕೆಲವರು ತಮ್ಮನ್ನು ತಾವು ಉತ್ತಮ ಆಡಳಿತಗಾರರೆಂದು ಸಮರ್ಥಿಸಿಕೊಂಡರೆ, ಮತ್ತೆ ಕೆಲವರು ದೇವಾಲಯಗಳ ನಿರ್ಮಾಣ ಕಾರ್ಯದಿಂದ, ಗ್ರಾಮ, ಭೂಮಿ, ಹಣಗಳ ರೂಪದಲ್ಲಿ ದಾನ ದತ್ತಿ ಕೊಡುವಿಕೆಯಲ್ಲಿ ಮತ್ತೆ ಕೆಲವರು ಶೈಕ್ಷಣಿಕ ಸಂಸ್ಥೆ ಕೇಂದ್ರಗಳ ನಿರ್ಮಾಣ, ಬಾವಿಗಳ ತೋಡಿಸುವಿಕೆ, ಕೆರೆಗಳ ನಿರ್ಮಾಣ ಮತ್ತು ಛತ್ರಗಳ ನಿರ್ಮಾಣ ಹೀಗೆ ಮೊದಲಾದ ಸಾಮಾಜಿಕ ಕಾರ್ಯಗಳಿಂದ ಸಮಾಜದಲ್ಲಿ ಉತ್ತಮ ಹೆಸರನ್ನು ಗಳಿಸಿದ್ದಾರೆ. ನೃತ್ಯ, ಸಂಗೀತ ಹಾಗೂ ಲಲಿತಕಲೆಗಳಲ್ಲಿ ಅಭಿರುಚಿಯುಳ್ಳ ಕಲಾವಂತಿಕೆಯ ಮಹಿಳೆಯರು ಇದ್ದರು. (ರಾಣಿಯರೂ ಇದ್ದರು)[೧]

ಆಡಳಿತ ಕ್ಷೇತ್ರದಲ್ಲಿ ಕಲ್ಯಾಣದ ಚಾಲುಕ್ಯರ ರಾಣಿಯರು ಸಾಮ್ರಾಜ್ಯದ ಅನೇಕ ಭಾಗಗಳ ಆಡಳಿತವನ್ನು ನಿರ್ವಹಿಸುತ್ತಿದ್ದರು. ಹೀಗಾಗಿ ಇದು ಕಲ್ಯಾಣದ ಚಾಲುಕ್ಯರ ಆಡಳಿತದ ಅತ್ಯಂತ ಶ್ರೇಷ್ಠ ಗುಣಲಕ್ಷಣವಾಗಿದೆ. ಈ ಅವಧಿಯು ಅನೇಕ ರಾಣಿಯರಿಗೆ ಆಡಳಿತದಲ್ಲಿ ಭಾಗಿಯಾಗಿರುವಂತೆ ಮುಕ್ತ ಅವಕಾಶವನ್ನು ನೀಡಿತು. ಆಡಳಿತಕ್ಕೆ ತಮ್ಮ ಬಾಹುಬಲವನ್ನು ನೀಡಿದಂತಹ ಕೆಲವು ಮಹಿಳೆಯರನ್ನು ಹೆಸರಿಸಲಾಗಿದೆ. ಅವರಲ್ಲಿ ಕೇತುದೇವಿ, ಮೈಳುಲಾದೇವಿ, ಲಚ್ಚಲಮಹಾದೇವಿ, ಸುಗ್ಗಲಾದೇವಿ ಹಾಗೂ ಅಕ್ಕಾದೇವಿ[೨] ಪ್ರಮುಖರಾಗಿದ್ದಾರೆ.

ಶಾಸನಗಳಲ್ಲಿ ಅಗ್ರಹಾರಗಳು, ಘಟಿಕಾಸ್ಥಾನಗಳು, ಬ್ರಹ್ಮಪುರಿ ಮತ್ತು ಮಠಗಳ ಉಲ್ಲೇಖಗಳಿದ್ದು, ಆದರೆ ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರವೇಶವಿತ್ತೋ, ಇಲ್ಲವೋ ಎಂದು ತಿಳಿದು ಬಂದಿಲ್ಲ. ರಾಜಮನೆತನಗಳ ರಾಣಿಯರು ಮತ್ತು ಗೌರವಾನ್ವಿತ ವರ್ಗದ ಮಹಿಳೆಯರು ಆಡಳಿತಾತ್ಮಕವಾಗಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲೂ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಸಮಾಜದಲ್ಲೂ ಉನ್ನತ ವರ್ಗದ ಮಹಿಳೆಯರ ಉತ್ತಮ ಶಿಕ್ಷಣವನ್ನು

ಪಡೆಯುತ್ತಿದ್ದರೆಂದು ತಿಳಿದು ಬರುತ್ತದೆ. ಕೆಲವು ಮಹಿಳೆಯರು ವಿದ್ಯಾ ಕೇಂದ್ರಗಳಿಗೆ ದತ್ತಿಯನ್ನು ನೀಡಿರುವ ಉಲ್ಲೇಖ ಕಂಡುಬರುತ್ತದೆ.

ಶಾಸನಗಳು ಕೆಳವರ್ಗದ ಮಹಿಳೆಯರನ್ನು ಉಲ್ಲೇಖಿಸುವುದಿಲ್ಲ. ಇದರಿಂದಾಗಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದರೆಂದರ್ಥವಲ್ಲ. ಸಾಮಾನ್ಯವಾಗಿ ಶಾಸನಗಳು ರಾಜಮನೆತನದವರ ಧಾರ್ಮಿಕ ವಿಚಾರಗಳನ್ನೇ ಉಲ್ಲೇಖಿಸುತ್ತವೆ. ಆದರೂ ಶಾಸನಗಳು ಉಲ್ಲೇಖಿಸದಿದ್ದರು. ಮೇಲ್ವರ್ಗಕ್ಕೆ ಸೇರಿದ ಮಹಿಳೆಯರು ತಮಗೆ ಇಷ್ಟವಾದ ವಿಷಯಗಳಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದರು.

ಮಹಿಳೆಯರ ಸ್ಥಿತಿಗತಿಗಳನ್ನು ಗಮನಿಸಿದಾಗ ಮಹಿಳೆಯರ ವಿಷಯವಾಗಿ ಸಂಪೂರ್ಣ ಮಾಹಿತಿ ದೊರೆಯುವುದಿಲ್ಲ. ಶಾಸನಗಳು ಕೇವಲ ರಾಜಮನೆತನಗಳ ಮಹಿಳೆಯರ ಸ್ವರೂಪವನ್ನಷ್ಟೇ ತಿಳಿಸುತ್ತದೆ. ಇಲ್ಲಿ ರಾಣಿಯರನ್ನು ಆಶ್ರಯಿಸಿಕೊಂಡಿದ್ದಂತಹ ಇತರೆ ಮಹಿಳೆಯರ ವಿಷಯಗಳು ನಮಗೆ ದೊರೆಯುವುದಿಲ್ಲ. ಆದರೆ ಇಂತಹ ಮಹಿಳೆಯರು ಶೈಕ್ಷಣಿಕ ಸಂಸ್ಥೆಗಳಿಗೆ ದತ್ತಿಯನ್ನು ನೀಡಿದುದರ ಉಲ್ಲೇಖ ಬರುವುದರಿಂದ ಅವರೂ ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಇಂತಹ ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದರು. ಚಾಲುಕ್ಯರ ಕಾಲದಲ್ಲಿ ಮಹಿಳೆಯರು ಸಮಾಜದಲ್ಲಿ ಉತ್ತಮ ಸ್ಥಾನವನ್ನು ಹೊಂದಿದ್ದು ಜೀವನದ ಎಲ್ಲಾ ಹೆಜ್ಜೆಗಳಲ್ಲೂ ತಮ್ಮ ಕೊಡುಗೆಯನ್ನು ನೀಡಿದ್ದಾರೆ.[೩]

ಅಕ್ಕಾದೇವಿಯು ತನ್ನ ಆಡಳಿತ ಅವಧಿಯಲ್ಲಿ ಸಾಮಾಜಿಕ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿಕೊಂಡು ಬಂದಳು. ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳನ್ನು ಪ್ರೋತ್ಸಾಹಿಸಿ[೪] ದಾನ ದತ್ತಿಗಳನ್ನು ನೀಡಿದಳು. ದೇವಾಲಯ ನಿರ್ಮಿಸುವುದು ಮತ್ತು ಜೀರ್ಣೋದ್ಧಾರ ಮಾಡುವುದು ಹಾಗೂ ಅವುಗಳ ನಿರ್ವಹಣೆಗಾಗಿ ಪಂಡಿತರನ್ನು ನೇಮಕ ಮಾಡುತ್ತಿದ್ದಳು. ದೇವಾಲಯದ ಕಾರ್ಯಗಳಿಗೆ ಕೆರೆ, ಬಾವಿ, ತೋಟ, ಹೊಲಗಳನ್ನು ದಾನ ನೀಡುತ್ತಿದ್ದಳು.

ಮಠಗಳು ಅಗ್ರಹಾರಗಳನ್ನು ನಿರ್ಮಿಸಿ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯವನ್ನು ಒದಗಿಸಿದ್ದಳು. ಜಾತ್ರೆ, ಉತ್ಸವ, ಮೇಳದಲ್ಲಿ ನೃತ್ಯ, ಸಂಗೀತ, ನಾಟಕ[೫] ಮುಂತಾದವು ಜರುಗುತ್ತಿದ್ದವು ಎಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

ತ್ರಿಭುವನಮಲ್ಲ ಎಂಬ ಬಿರುದನ್ನು ಹೊಂದಿದ ಐದನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅಕ್ಕಾದೇವಿಯು ಕಿಸುಕಾಡು-೭೦ ಆಡಳಿತ ವಿಭಾಗವನ್ನು ಆಳುತ್ತಿದ್ದಳು. ಇವಳನ್ನು ವಾಗ್ದೇವಿ, ಸೀತೆ, ಮಹಾದೇವಿ, ಭೂದೇವಿಗೆ ಸಮಾನಳು ಎಂದು ವರ್ಣಿಸಿದ್ದಾರೆ.[೬] ಅಕ್ಕಾದೇವಿಯು ಸೂಡಿಯಲ್ಲಿ ಅಕ್ಕೇಶ್ವರ ದೇವಾಲಯವನ್ನು ಕಟ್ಟಿಸಿ ಅಲ್ಲಿ ಶಾಸ್ತ್ರೋಕ್ತವಾಗಿ ಶಿವಲಿಂಗವನ್ನು ಸ್ಥಾಪನೆ ಮಾಡಿಸಿದಳು. ಆ ದೇವಾಲಯಕ್ಕೆ ಪಂಡಿತರನ್ನು ನೇಮಕ ಮಾಡಿ ಅವರಿಗೆ ಕೆಲವು

ದಾನ ದತ್ತಿಗಳನ್ನು ಕೊಟ್ಟಿದ್ದಳು. ಅಲ್ಲಿಯ ಪಂಡಿತರಾದ ಶಿವ ವಿಶ್ವಚಾರ್ಯ್ಯ ವಾಮಸಿಂಗಯ್ಯ ಇವರಿಗೆ ಮತ್ತರ ಹನ್ನೆರಡು, ರಾಮಲವಲ ಸಿಂಗಯ್ಯನಿಗೆ ಮತ್ತರ ಹದಿನೈದು (ಭೂಮಿ ದಾನ ಕೊಟ್ಟಿದ್ದಳು) ಬಾರಿಯ ರಾಮಲವಲ ಇವರು ದೇವಾಲಯದ ಪಂಡಿತರು ಹಾಗೂ ವ್ಯವಸ್ಥಾಪಕರು ಆಗಿದ್ದರು.[೭]

ಕಲ್ಯಾಣದ ಚಾಲುಕ್ಯರು ಭೂ ಅಳತೆಯ ಕೆಲವು ಮಾಪಕಗಳಾದ ಮತ್ತರ, ಕಮ್ಮ, ಹದ ಎನ್ನುವ ಅಳತೆ ಕೋಲನ್ನು ಬಳಸುತ್ತಿದ್ದರು. ಹದ ಅಳತೆ ಕಮ್ಮ ಅಳತೆಯ ನಾಲ್ಕು ಪಟ್ಟು ಹೆಚ್ಚಿರುತ್ತದೆ. ಅಂದರೆ ಇಪ್ಪತ್ತೈದು ಕಟ್ಟು ಒಂದು ಹದಕ್ಕೆ ಸಮ ನಾಲ್ಕು ಹದ ನೂರು ಕಮ್ಮಕ್ಕೆ ಸಮ ನೂರು ಕಮ್ಮ ಒಂದು ಮತ್ತರಕ್ಕೆ ಸಮವಾಗಿರುತ್ತದೆ.[೮]

ಪ್ರಾಚೀನ ಕಾಲದಲ್ಲಿ ದೇವಸ್ಥಾನ ಒಂದು ಸಾಮಾಜಿಕ ಸಂಸ್ಥೆಯೆನಿಸಿಕೊಂಡಿದ್ದಿತು. ಇದರ ಆಡಳಿತ ವ್ಯವಸ್ಥೆ ಸುವ್ಯವಸ್ಥಿತವಾಗಿದ್ದು ಅದು ಪೂಜಾರಿಯಿಂದ ಮೊದಲ್ಗೊಂಡಿತ್ತು. ಅವರಲ್ಲಿ ಪಾಲ್ಗೊಳ್ಳುವರಲ್ಲಿ ಪರೆಕಾರ, ದೇಸಿಗ, ಜೋತಿಷಿ (ಸೂಳೆ) ಇತರರು ಮುಖ್ಯವಾಗಿದ್ದಾರೆ. ಮುಖ್ಯವಾದ ಇದರಲ್ಲಿ ಸೂಳೆಯರರೊಂದಿಗೆ ಪ್ರಮುಖ ವರ್ಗ.

ಸೂಳೆಯರನ್ನು ದೇವಾಲಯಕ್ಕೆ ಬಿಡಲು ಪ್ರಾರಂಭಿಸಿದ ಕಾಲ ನಿರ್ದಿಷ್ಟವಾದ ತಿಳಿಯುವುದು ಕಷ್ಟಸಾಧ್ಯ. ಪಟ್ಟದಕಲ್ಲಿನ ಶಾಸನದಲ್ಲಿ ಬದಾಮಿ ಚಾಲುಕ್ಯ ವಂಶದ ವಿಜಯಾದಿತ್ಯ ಗಂಧರ್ವರಿಗೆ ನೀಡಿದ ಪೂರ್ವಮರ್ಯಾದೆಯ ವಿಷಯ ತಿಳಿಸುತ್ತದೆ. ಈ ಗಂಧರ್ವರು ಕೇವಲ ಸಂಗೀತದವರೋ, ಸಂಗೀತ ಕಲಾಭಿಜ್ಞರಾದ ಸೂಳೆ ಪರಿವಾರದವರೊ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಎಂಟನೆಯ ಶತಮಾನದ ಪಟ್ಟದಕಲ್ಲು ಶಾಸನೋಕ್ತ ಲೋಕಮಹಾದೇವಿ ನಿರ್ಮಿಸಿದ ಲೋಕೇಶ್ವರ ದೇವಾಲಯದ ಗೋಯಿನ್ದಪೊಡ್ಡಿ ಖಾದಿ ಪೊಡ್ಡಿಯರೇ ಕರ್ನಾಟಕದ ಪ್ರಥಮ ದೇವಾಲಯದ ಸೂಳೆಯರು. ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು, ನಾಗಮಂಗಲ ತಾಲ್ಲೂಕಿನ ಮಂಸೆ, ಹೊನ್ನಾಳಿ ತಾಲ್ಲೂಕಿನ ನ್ಯಾಮರೆ, ರೋಣ ತಾಲ್ಲೂಕಿನ ಸೂಡಿ, ಗದಗ ತಾಲ್ಲೂಕಿನ ಲಕ್ಕುಂಡಿ, ಹರಪನಹಳ್ಳಿ ತಾಲ್ಲೂಕಿನ ಬಾಗಳಿ, ಹಿರೇಮಂಗಳಗೇರಿ ಹಾಗೂ ಹೂವಿನಹಡಗಲಿ ತಾಲ್ಲೂಕು ಇದೇ ತಾಲ್ಲೂಕಿನ ಮೋರಿಗೆರೆ, ಹಳಗೊಂಡಿ, ಮುದ್ದೇಬಿಹಾಳ ತಾಲ್ಲೂಕಿನ ನಾಲತವಾಡ, ರಾಣೆಬೆನ್ನೂರು ತಾಲ್ಲೂಕಿನ ಹೊಳೆ ಆನವೇರಿ,[೯] ಹೂಲಿಹಳ್ಳಿ, ಮುಂಡರಗಿ ತಾಲ್ಲೂಕಿನ ಕೊರಲಹಳ್ಳಿ, ಶಿಗ್ಗಾಂವ ತಾಲ್ಲೂಕಿನ ಬಂಕಾಪುರ– ಅಡೋನಿ ತಾಲ್ಲೂಕಿನ ಬೆನ್ನೆತುಬಂಳ ಬಳ್ಳಾರಿ ತಾಲ್ಲೂಕಿನ ಶಿರುಗುಪ್ಪಿ, ಯಲಬುರ್ಗಾ ತಾಲ್ಲೂಕಿನ ಕುಕನೂರು, ಯಲಬುರ್ಗಾ ತಾಲ್ಲೂಕಿನ ಇಟಗಿ, ಹಿರೇಕೆರೂರು ತಾಲ್ಲೂಕಿನ ಕಾಗಿನೆಲೆ, ಸಿಂದಗಿ ತಾಲ್ಲೂಕಿನ ದೇವರನಾವದಗಿ, ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ, ಬೇಲೂರು ತಾಲ್ಲೂಕಿನ ಹಳೇಬೀಡು, ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ, ಕುಂದಾಪುರ, ತಾಲ್ಲೂಕಿನ ಕೋಟೇಶ್ವರ ಮುಂತಾದ ದೇವಾಲಯಗಳಲ್ಲಿ ಸೂಳೆಯರಿದ್ದ ಉಲ್ಲೇಖಗಳು ದೊರೆಯುತ್ತವೆ.[೧೦]

ಸೂಡಿಯ ಅಕ್ಕೇಶ್ವರ ದೇವಾಲಯಕ್ಕೆ ಒಟ್ಟು ಐದನೂರು ಮತ್ತರ ಭೂಮಿ ದಾನ ಕೊಟ್ಟಿದ್ದರು. ಇದೇ ದೇವಾಲಯಕ್ಕೆ ಸೂಳೆಯನ್ನು ನೇಮಕ ಮಾಡಿದ್ದರು.[೧೧] ಅದರಲ್ಲಿ ವಿವಿಧ ಬಗೆಗಳಿವೆ. ಕಂಬದ ಸೂಳೆ, ಚಾಮರದ ಸೂಳೆ, ಪರ್ಗಡೆ ಸೂಳೆ, ಪಾತರದ ಸೂಳೆ ಮತ್ತು ಮಾಡ ಸೂಳೆ ಇವರು ಕೇವಲ ದೇವಸ್ಥಾನಕ್ಕೆ ಮಾತ್ರ ಸೀಮಿತವಾಗಿದ್ದರು.[೧೨]

ಅಂಗಭೋಗ ಸೂಳೆ

ದೇವಾಲಯದ ಅಂಗಭೋಗ ರಂಗಭೋಗದ ಸೂಳೆಯರು ದೇವರ ಅಂಗಕ್ಕೆ ಸಂಬಂಧಿಸಿದ ಸ್ನಾನ, ಪೂಜೆ, ನೈವೇದ್ಯ, ತಾಂಬೂಲಗಳ ಸಮರ್ಪಣಾಕಾರ್ಯ ಅಂಗಭೋಗದವರು ಕರ್ತವ್ಯಗಳಾಗಿರಬಹುದು. ದೇವನ ಗರ್ಭಗೃಹದಲ್ಲಿ ಅಂಗಭೋಗದ ಸೂಳೆಗೆ ಮಾತ್ರ ಪ್ರವೇಶವಿದ್ದಂತೆ ತಿಳಿದುಬರುತ್ತದೆ.[೧೩]

ರಂಗಭೋಗ ಸೂಳೆ

ರಂಗಭೋಗದ ಸೂಳೆ ದೇವಸ್ಥಾನದ ಗರ್ಭಗೃಹದ ಮುಂಭಾಗವಾದ ನವರಂಗ ಅಥವಾ ರಂಗಮಂಟಪದಲ್ಲಿ ನಡೆಸುವ ದೇವರ ಸೇವೆಗೆ ರಂಗಭೋಗ ಸೇವೆಯೆಂದು ಹೆಸರು. ರಂಗಭೋಗದ ಕಾರ್ಯಗಳಲ್ಲಿ ಸೇವೆ ಸಲ್ಲಿಸುವುದಕ್ಕೆ ವಿವಿಧ ಬಗೆಗಳಿವೆ. ಇದಕ್ಕೆ ರಂಗಭೋಗದ ಸೂಳೆ ಎನ್ನುವರು.

ಕಂಬದ ಸೂಳೆ ರಂಗಭೋಗದ ಸೂಳೆಯರಲ್ಲಿ ಮಹತ್ವದ ಒಂದಾದ ಕಂಬದ ಸೂಳೆಯರು ದೇವಸ್ಥಾನ ರಂಗಮಂಟಪದ ಅಲಂಕಾರಕ್ಕೋಸ್ಕರ ಅಲ್ಲಿಯ ಕಂಬಗಳ ಹತ್ತಿರ ಒಬ್ಬಿಬ್ಬರು ಪೂಜೆ ಮುಗಿಯವರೆಗೂ ಅಲಂಕಾರವಾಗಿ ನಿಲ್ಲುವುದು ಇವರ ಕಾರ್ಯವಾಗಿರಬೇಕು.[೧೪]

'ಮಾಡದ' ಸೂಳೆ ಶಾಸನದಲ್ಲಿ ಕ್ವಚಿತವಾಗಿ ತಿಳಿಸಿದೆ. ಇಲ್ಲಿಯ ಮಾಡ ಎಂಬ ಪದಕ್ಕೆ ಮಹಡಿ ಎಂಬ ಅರ್ಥವಿರದೆ ದೇವಾಲಯದಲ್ಲಿರುವ 'ಗೂಡು' ಅರ್ಥವೇ ಆಗಿರಬೇಕು. ದೇವಸ್ಥಾನಗಳ ಗರ್ಭಗೃಹದ ಎಡಬಲ ಪಕ್ಕಗಳಲ್ಲಿ ಮಾಡಗಳು ಕಂಡುಬರುತ್ತಿದೆ. ಇವುಗಳ ಹತ್ತಿರ ಅಲಂಕಾರವಾಗಿ ನಿಂತುಕೊಳ್ಳುವ ಸೂಳೆಯರನ್ನು ಶಾಸನಗಳು ಮಾಡದ ಸೂಳೆಯರೆಂದು ಕರೆದಿದ್ದಾರೆ.

ದೇವಾಲಯದಲ್ಲಿ ದೇವರಿಗೆ ಚಾಮರದ ಸೇವೆ ಮಾಡುವವಳು ಚಾಮರದ ಸೂಳೆ, ಇವಳು ರಂಗಮಂಟಪದ ಮಿಕ್ಕ ಕಂಬಗಳ ಸಮೀಪದಲ್ಲಿ ನಿಲ್ಲುತ್ತಿದ್ದಳೋ ಅಥವಾ ಗರ್ಭಗೃಹದ ಸಮೀಪದಲ್ಲಿ ನಿಲ್ಲುತ್ತಿದ್ದಳೋ ಎಂಬುದು ಹೇಳುವುದು ಕಷ್ಟ.[೧೫]

ದೇವಾಲಯದಲ್ಲಿ ನಟನೆ ಮಾಡುವವಳು ಪಾತರದ ಅಥವಾ ಪಾತ್ರದ ಸೂಳೆ ಎಂದು ಕರೆಯುತ್ತಿದ್ದರು. ಕ್ರಿ.ಶ. ೯೭೫ರ ಹೆಬ್ಬಾಳಿನ ಶಾಸನದಲ್ಲಿರುವ 'ಪಾತ್ರದ' ಉಲ್ಲೇಖವೇ ಪ್ರಥಮ ಉಲ್ಲೇಖವಾಗಿದೆ. ಅಂದಿನಿಂದ ಬಂದ ಉಳಿದೆಲ್ಲಾ ಶಾಸನ ಹಾಗೂ ಸಾಹಿತ್ಯದಲ್ಲಿ ಪಾತ್ರದವರ ಉಲ್ಲೇಖ ಕಾಣಸಿಗುತ್ತದೆ.[೧೬] ಹೆಬ್ಬಾಳ ಶಾಸನ ಭುಜಬೇಶ್ವರ ದೇಗುಲದಲ್ಲಿ ಐವರು ಸೂಳೆಯರೊಂದಿಗೆ ಒಬ್ಬ ಪಾತ್ರದವಳು ಕಂಡುಬರುತ್ತಾಳೆ. ಪಾತ್ರದವಳಿಗೆ ಬಿಟ್ಟ ದಾನ ಈ ಸೂಳೆಯನ್ನು ಪ್ರತ್ಯೇಕಿಸಿ ತೋರಿಸುತ್ತದೆ. ಪಾತರದವರು ವ್ಯಭಿಚಾರಿಗಳಾಗಿ ಕಂಡುಬರುತ್ತಿದ್ದರೂ 'ಪಾತ್ರ'ವೆಂಬ ಪದ ಉಚ್ಚ ಮಟ್ಟದಲ್ಲಿ ನಿಲ್ಲಲು ಪ್ರಯತ್ನಿಸಿದೆ. ಇಲ್ಲಿ ಪಾತ್ರ ಶಬ್ದ ನೃತ್ಯ ಗೀತಾದಿಗಳಲ್ಲಿ ಪರಿಣತಳಾದವಳನ್ನು ಪಾತ್ರ ಸೂಳೆ ಎನ್ನುವರು. 'ಸೂಳೆ' ಶಬ್ದ ಅಂಗರಂಗಭೋಗಕ್ಕೆ ಸಂಬಂಧಿಸಿದ ಉಳಿದ ಸೇವಕಾರ್ಯದವರನ್ನು ಸೂಚಿಸುತ್ತದೆ. ಈ ಶಾಸನಗಳಲ್ಲಿ ಬರುವ ಪಾತ್ರದ 'ಸೂಳೆ' ಎಂಬುದಕ್ಕೆ ನರ್ತನದ ಸೂಳೆಯೆಂದು ಅರ್ಥ. ಈ ಪಾತ್ರದವರನ್ನು ಸಾಮಾನ್ಯವಾಗಿ ಊರವರೇ ಆಯ್ಕೆಮಾಡುತ್ತಿದ್ದು ಅವಳ ಜೀವಿತದ ವ್ಯವಸ್ಥೆಯನ್ನು ಆಯಾ ಗ್ರಾಮದವರೇ ನಿರ್ವಹಿಸುತ್ತಿರಬೇಕು. ರಾಮನಾಥದೇವರ ಪಾತ್ರ ಕೇತವ್ವೆ ಅವಳ ಜೀವನಕ್ಕೆ ನಾಲ್ಕಾರು ಗ್ರಾಮಗಳ ಪ್ರಮುಖರು ಕೂಡಿ ನಿರ್ಣಯಿಸಿ ಅವಳ ಜೀವನಕ್ಕೆ ಪ್ರತಿಗ್ರಾಮದ ಬಡಗಿಗಳು, ಅಕ್ಕಸಾಲಿಗರು, ಕಂಚಗಾರರು, ದತ್ತಿಬಿಟ್ಟುಕೊಡುವಂತೆ ಯೋಚಿಸುತ್ತಿದ್ದರು[೧೭]

ಸೂಡಿಯ ಅಕ್ಕೇಶ್ವರ ದೇವಾಲಯದ ಎಡ ಪಕ್ಕದ ಕೇರಿಯ ಮೊದಲ ದೆಸೆಯ ಬಿಟ್ಟಿಯ ಚಾಮರದ ಸೂಳೆ. ಬೈಗೆ ಹನ್ನೊಂದು ಮತ್ತರ, ಪರ್ಗ್ಗಡೆ ಬಲಮುಕ್ಕಯ್ಯಮಗೆ ಮತ್ತರ ಹದಿನೈದು, ಬಲದ ದೆಸೆಯ ಮೊದಲ ಕಂಬದ ಸೂಳೆ ಬೈಗೆ ಮತ್ತರ ಹದಿನೈದು, ಅಲ್ಲಿಯ ಕಂಬದ ಸೂಳೆ ಅಸಗಬ್ಬೆಗೆ ಮತ್ತರ ಹದಿನೈದು ಅಲ್ಲಿ ಕಂಬದ ಸೂಳೆ ಅಸಗಬ್ಬೆಗೆ ಮತ್ತರ ಹದಿಮೂರು ಇದಾದ ದೆಸೆಯ ಮೊದಲ ಕಂಬದ ಸೂಳೆ ರೇವಕಬ್ಬಿಗೆ ಮತ್ತರ ಹದಿಮೂರು, ಅಲ್ಲಿಯ ಕಂಬದ ಸೂಳೆ ಗುಬ್ಬಿಯ ಚಾವುಂಡಬ್ಬೆಗೆ ಮತ್ತರ ..... ಬಲದ ದೆಸೆಯ ಬಿಟ್ಟಿಯ ಚಾಮರದ ಸೂಳೆ.... ಬೈಗ್ಗೆ ಮತ್ತರ ಹನ್ನೆರಡು ಅಲ್ಲಿಯ ಕೇರಿಯ ಚಾಮರದ ಸೂಳೆ ಚಟ್ಟಿಯೆಬ್ಬೆಗೆ ಮತ್ತರ ಹನ್ನೆರಡು ಇದಾದ ದೆಸೆಯ ಕೇರಿಯ ಚಾಮರದ ಸೂಳೆ ಗುಬ್ಬಿಯ ಕೇತಬ್ಬೆಗೆ ಮತ್ತರ ಹನ್ನೆರಡು, ಬಲದ ದೆಸೆಯ ಪಾತರದ ಸೂಳೆ ವಕ್ಕಬ್ಬೆಗೆ ಮತ್ತರ ಹನ್ನೆರಡು, ಇದಾದ ದೆಸೆಯ ಪಾತರದ ಸೂಳೆಬ್ಬೆಗೆ ಮತ್ತರ ಹದಿಮೂರು, ಬಲದ ಮಾಡದ ಸೂಲೆ ಗಾರ್ಗೆಬ್ಬೆಗೆ ಮತ್ತರ ಹನೆನರಡು ಇದ ವಕ್ಕದ ಕೇರಿಯ ಸೂಳೆ ಮೈಳಬ್ಬೆಗೆ ಮತ್ತರ ಹನ್ನೆರಡು ಬಲವಕ್ಕದ ಕೇರಿಯ ಸೂಳೆ, ಜಕ್ಕಬ್ಬೆಗೆ ಮತ್ತರ ಹನ್ನೆರಡು, ಹೀಗೆ ಎಡ ಬಲ ಎಂದು ದೇವಾಲಯದಲ್ಲಿ ಇರುತ್ತಿದ್ದರು.[೧೮] 'ಕೇರಿ' ಎನ್ನುವುದು ಅವರು ವಾಸಿಸುವ ಬೀದಿಯ ಎಡ ಬಲ ಎಂದು ಗುರುತಿಸಿದೆ.[೧೯]

ಸೂಡಿಯ ಕ್ರಿ.ಶ. ೧೦೫೮ರ ಶಾಸನವು ವಿಶೇಷವಾಗಿದೆ. ಅದರಲ್ಲಿ ಬಲಿ, ಕರ್ಣ, ಸಿಬಿ, ದವಿಚಿ, ಚಾರುದತ್ತ, ಜೀಮುಂತ ವಾಹನ, ಈ ಕಥೆಗಳ ಪಾತ್ರಗಳು ಕಂಡುಬರುತ್ತವೆ. ಪರಾಕ್ರಮನಾದ ಬಲಿಚಕ್ರವರ್ತಿಯು ವಾಮನ ಅವತಾರವಾಗಿ ಬಂದ ವಿಷ್ಣು ಮೂರು ಪಾದ ಭೂಮಿಯನ್ನು ಭಿಕ್ಷೆ ಕೇಳುತ್ತಾನೆ. ಆಗ ಬಲಿಚಕ್ರವರ್ತಿಯು ವಾಮನಿಗೆ ಮೂರು ಪಾದ ಭೂಮಿಯನ್ನು ಅಳೆಯಲು ಹೇಳಿದಾಗ ಅವನು ಒಂದು ಪಾದ ಭೂಲೋಕ, ಇನ್ನೊಂದು ಪಾದ ಆಕಾಶ ಅಳೆದು ಪೂರ್ಣಗೊಳಿಸುತ್ತಾನೆ. ನಂತರ ಇನ್ನೊಂದು ಪಾದ ಬಲಿಚಕ್ರವರ್ತಿಯು ತನ್ನ ತಲೆಯ ಮೇಲೆ ಇಡಲು ಹೇಳುತ್ತಾನೆ. ಹೀಗೆ ದಾನದಲ್ಲಿ ಪ್ರಮುಖನು ಎನ್ನಿಸಿಕೊಳ್ಳುತ್ತಾನೆ. [Mahabharata III, 28, XIII, 223, XIII.98, Bhagavata-Purana VIII.X.XXIII]

ಮಹಾಭಾರತದ ಕರ್ಣನು ದಾನಶೂರ ಎಂದು ಹೊಗಳಿಸಿಕೊಂಡಿದ್ದಾನೆ. ಇವನು ದೇಹದ ಕವಚ ಮತ್ತು ಕಿವಿಯ ಕುಂಡಲಗಳನ್ನು ಕೃಷ್ಣನಿಗೆ ಕೊಡುತ್ತಾನೆ. ಸಿಬಿ ಚಕ್ರವರ್ತಿಯು ತನ್ನ ಆಶ್ರಯಕ್ಕೆ ರಕ್ಷಣೆ ಕೇಳಿಕೊಂಡು ಬಂದ ಪಾರಿವಾಳಕ್ಕೆ ತನ್ನ ತೊಡೆಯ ಮಾಂಸವನ್ನು ಪಾರಿವಾಳದ ತೂಕದಷ್ಟು ಹದ್ದಿಗೆ ಕೊಡುತ್ತಾನೆ. [Mahabhi III, 139, 197, 199, VII, 58, of the Sivijataka, Jal, No.499, and the artical by messrs, M.L. Dames and T.A. Joyce in man, Feb. 1913]

ಅಕ್ಕಾದೇವಿಯು ಮೊದಲು ದಾನವನ್ನು ಕೊಟ್ಟಿದ್ದಳು. ಈ ದಾನವನ್ನು ಮುಂದುವರೆಸಿಕೊಂಡು ಹೋಗಲು ಮಂತ್ರಿಯನ್ನು ನೇಮಿಸಿದ್ದಳು. (ಮಂತ್ರಿಯ ಹೆಸರು ಉಲ್ಲೇಖಸಿಲ್ಲ) ದಾನ ಶೂರರಾದ ಬಲಿ, ಕರ್ಣ, ಸಿಬಿ, ದದಿಚಿ, ಚಾರುದತ್ತ, ಚಿಮುತವಾಹನ ಇವರಿಗೆ ಸಮನಾದವನೆಂದು ಮಂತ್ರಿಯನ್ನು ಈ ಶಾಸನದಲ್ಲಿ ಹೊಗಳಲಾಗಿದೆ.

ದದಿಚಿ ಅಥವಾ ದಯೋಚಿಯು ತನ್ನ ಗಟ್ಟಿಮುಟ್ಟಾದ ಎಲಬುಗಳನ್ನು ಅಸುರರನ್ನು ಕೊಲ್ಲಲು ಕೊಡುತ್ತಾನೆ. ಅಸುರರಾದ ವರಿತ್ರಾ ಮತ್ತು ತ್ರಿಶಿರಾಸ್ [Rig-veda I IXXXIV. 13XXI, VIII, 10, Mahabh III, 100 IX.51, XII.342] ಮೃಚ್ಛಕಟಿಕ ಮತ್ತು ನಾಗಾನಂದ ಅಂದಿನ ಪ್ರಸಿದ್ಧ ನಾಟಕಗಳು ಹಾಗಿ, ಚಾರುದತ್ತ, ಚೇಮುತವಾನ ನಾಟಕಗಳು ಕಂಡುಬರುತ್ತವೆ. ಇವುಗಳು ಅಂದಿನ ರಾಜ ಸುದ್ರರನ ಕಾಲದಲ್ಲಿ ಪ್ರಚಲಿತದಲ್ಲಿದ್ದವು. [Sanskrit Liter.P.361] ಇದನ್ನು ಆರನೆಯ ಶತಮಾನದಲ್ಲಿ ನೋಡಬಹುದು. ಇವುಗಳು ಕನೋಜದ ಹರ್ಷದೇವನ ಕಾಲದಲ್ಲಿ ನಾಟಕಗಳನ್ನು ಪ್ರಕಟಿಸಲಾಗಿದೆ. [Bhasa's Works an Nos. XV, XVII, XXVI, XXXIX, XIiiay] ತ್ರಿವಂದ್ರಮ್ ಸಂಸ್ಕೃತ ನಾಟಕದಲ್ಲಿ [No. XXXIX] ಚಾರುದತ್ತ ನಾಟಕ ಒಂದು ಪ್ರಶ್ನಾವಳಿಯ ನಾಟಕವಾಗಿದೆ. ಬಾಸನ ಕೃತಿಯಲ್ಲಿ ಮೃಚ್ಛಕಟಕವು ಸಿಗುತ್ತದೆ.

ಇನ್ನೊಂದು ಕೃತಿ ತಿರುವನಂತಪುರ ಸಂಸ್ಕೃತ ಕೃತಿಯ ಪಂಡಿತ ಗಣಪತಿಶಾಸ್ತ್ರಿ, [No. XIii, P. XI] ಇದರಲ್ಲಿ ಪಾತ್ರದಾರಿಗಳಿಗೆ 'ಚಕಿಯಾರ್} ಎಂದು ಹಾಗೂ ನಾಗಾನಂದ ಮತ್ತು ಪ್ರತಿಜ್ಞದ್ರಾನ್ಯಯನ ಪಾತ್ರಗಳನ್ನು 'ಮಂತ್ರಕ' ನಾಟಕ ಎಂದು ಕರೆಯುತ್ತಾರೆ. ಇವುಗಳನ್ನು ಜಾತ್ರೆ ಉತ್ಸವದ ವೇಳೆಯಲ್ಲಿ ಮಾಡುತ್ತಿದ್ದರು. ಪ್ರತಿಜ್ಞಾಗದಾರಯನ ಇದು 'ಬಾಸನ' ಸಂಗ್ರಹವಾಗಿದೆ.

ಕ್ರಿ.ಶ. ೧೦೫೦ರ ಕೊರಲಹಳ್ಳಿ ಶಾಸನವು ಅಕ್ಕಾದೇವಿಯ ಪನ್ನಲ ಕೋಟೆಯಿಂದ ಆಳ್ವಿಕೆ ಮಾಡುತ್ತಿದ್ದಳು. ಅವಳ ಮಹಾಸಾಮಂತನಾದ ಅಜ್ಜರಸನನ್ನು ಕರೆಯಿಸಿದಳು. ಅವನಿಗೆ ದ್ವಾರವತೀಪುರವರೇಶ್ವರ ಹಾಗೂ ಗರುಡಧ್ವಜಂ ಎಂದು ಬಿರುದನ್ನು ಹೊಂದಿದ್ದನು. ಇವನು ಯಾದವರ ಮುಖ್ಯಸ್ಥನಾಗಿದ್ದನು. ಅಕ್ಕಾದೇವಿಯು ಅಜ್ಜರಸನನ್ನು ತನ್ನ ಸನ್ನಿದಾನಕ್ಕೆ ಕರೆಸಿ ಇವನ ಎದುರಿನಲ್ಲಿ ದೇವರಿಗೆ ಅಥವಾ ದೇವಾಲಯದ ಕಾರ್ಯಗಳಿಗೆ ದಾನವನ್ನು ಕೊಡುತ್ತಾಳೆ.

ಈ ದೇವಾಲಯ ಹರೆಕಾರಿಗೆ ಅಂದರೆ ಹಾಡು ಹೇಳುವರಿಗೆ ಎರೆ ಮತ್ತರ ಆರು, ಎರೆ (ಕಪ್ಪು ಭೂಮಿ) ದೇವಾಲಯದ ಸೂಳೆ...... ಯರ್ಗ್ಗೆ ಎರೆ ಮತ್ತರ ಹದಿನೈದು, ಕಿಸುಮತ್ತರ ಒಂಬತ್ತು ಕಿಸು (ಕೆಂಪು ಭೂಮಿ) ಗ್ರಾಸಕ್ಕೆ ಎರೆ ಮತ್ತರ ಹನ್ನೆರಡು ದೇವರ ನೈವೇಧ್ಯಕ್ಕೆ ಗದ್ದೆಕಮ್ಮ ಏಳನೂರು ಎಪ್ಪತ್ತರ ದೇವಾಲಯದ ಕಾರ್ಯಗಳಿಗೆ ಬಾವಿಯನ್ನು ಕಟ್ಟಿಸಿದಳು.

ಧರ್ಮಬ್ರಯದ ದೇವರ್ಗ್ಗೆ ಎರ್ಕ್ಕಯ್ಯ ಮನೆಗಳು ಹದಿಮೂರು, ಗಾಣ ಒಂದು, ಹನ್ನುಸಿಂಗಂ ಪದ್ಮನಾಭನಿಗೆ ಮತ್ತರ ಹನ್ನೆರಡು, ಗದ್ದೆ ಕಮ್ಮ ನಾಲ್ಕನೂರ ಐವತ್ತು ತೋಟಕಮ್ಮ ಮೂರನೂರ ಎಪ್ಪತ್ತು, ಅರಿವಣ ಗದ್ಯಾಣ ಮೂರು ಆ ಸ್ಥಳದಲ್ಲಿ ನೆಲೆಸಿದ ಬ್ರಾಹ್ಮಣನಿಗೆ ಹಾಗೂ ತಪೋಧರನಿಗೂ ದಾನ ಕೊಟ್ಟಳು. ಅಲ್ಲಿ ಸಹಸ್ರಲಿಂಗವನ್ನು ಪ್ರತಿಷ್ಠಾಪನೆ ಮಾಡಿಸಿದ್ದಳು.[೨೧]

ಕಿಸುಕಾಡು ಎಪ್ಪತ್ತನ್ನು ಆಳುತಿದ್ದಾಗ ತನ್ನ ಅಣ್ಣ ಐದನೆಯ ವಿಕ್ರಮಾದಿತ್ಯನಿಗೆ ಪರೋಕ್ಷವಾಗಿ ಪೆರೂರು ಅಗ್ರಹಾರವನ್ನು ಸರ್ವಮನಸ್ಯವಾಗಿ ಬಿಟ್ಟಳಲ್ಲದೆ, ಆ ಊರಿನಲ್ಲಿ ತ್ರಿಪುರುಷ ದೇವಾಲಯವನ್ನು ನಿರ್ಮಿಸಿ ಅಲ್ಲಿಯ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಅಗ್ರಹಾರಕ್ಕೆ ಐದನೂರು ಮತ್ತರ ಭೂಮಿ, ಐವತ್ತು ಮನೆ, ಎರಡು ಮತ್ತರ ಹೂವಿನ ತೋಟವನ್ನು ವಿದ್ಯಾರ್ಥಿಗಳ ಊಟ, ಬಟ್ಟೆಗಾಗಿ ದಾನ ಮಾಡಿದಳು. ಈ ಧರ್ಮವನ್ನು ರಾಜರಕ್ಷಿತವೆಂದು ಕರೆದಳು. ಇದನ್ನು ಪೇರೂರಿನ ನಾಲ್ಕನೂರು ಮಹಾಜನರು ಪಾಲಿಸಬೇಕೆಂದು ಆಜ್ಞೆ ಮಾಡಿದಳು.[೨೨]

ಕೇಶವೇಶ್ವರ ಶೈವ ಮಠಕ್ಕೆ ವಿದ್ಯಾದಾನಕ್ಕೋಸ್ಕರ ಅಕ್ಕಾದೇವಿಯು ತಪೋನಿಯತ ಜಪಸಮಾಧಿ ಶೀಲ ಸಂಪನ್ನಯರ ಗಂಗಿಕಬ್ಬೆಗೆ ಕಾಲಂಗರ್ಚಿ ಅಂದ್ರೆ ಪಾದ ಪೂಜೆ ಮಾಡಿದಳು. ಅವರಿಗೆ ಧಾರಾಪುರದ ಎರಡು ಗದ್ಯಾಣದ ತೆರೆಯನ್ನು ದಾನ ಕೊಟ್ಟಳು.[೨೩]

ಅಕ್ಕಾದೇವಿಯ ರಾಜಧಾನಿ ವಿಕ್ರಮಪುರದಲ್ಲಿ ನಂದಿಯಣ್ಣಷಡಂಗಿ ಭಟ್ಟೋಪಾಧ್ಯಾಯ ಹಾಗೂ ನಲವತ್ತೆರಡು ಜನ ಬ್ರಾಹ್ಮಣರಿಗೆ ಊರ ದಕ್ಷಿಣ ದಿಕ್ಕಿನಲ್ಲಿರುವ ತೋಟದ ಕೆಲವು ಭಾಗ ಭೂಮಿಯನ್ನು ದಾನವಾಗಿ ಕೊಟ್ಟಳು. ಈ ದಾನವನ್ನು ಪಂಪಾತೀರ್ಥದಲ್ಲಿ ಕೊಡಲಾಗಿದೆ. ಭೂಮಿಯನ್ನು ಅಳೆಯಲು ಎಪ್ಪತ್ತರ ಕೋಲನ್ನು ಅಳತೆಯ ಕೋಲಾಗಿ ಬಳಸಲಾಗಿದೆ.[೨೪]

ವಿಕ್ರಮಪುರದ ಗೋಣದ ಬೆಡಂಗಿಯ ಜಿನಾಲಯಕ್ಕೆ ಜೀರ್ಣೋದ್ಧಾರ ಮಾಡಲು, ಸುಣ್ಣ ಬಳಿಯಲು, ಗಂಧ, ಧೂಪ, ದೀಪಕ್ಕೆಂದು, ಮೂಲ ಸಂಘದವರಾದ ಸೇನಗಣದ ಹೊಗರೆಯಗಚ್ಛದ ನಾಗಸೇನ ಪಂಡಿತರಿಗೆ ಅಲ್ಲಿದ್ದ ರೀಷಿಯರಿಗೆ ಮತ್ತು ಅಜ್ಜಿಯರಿಗೆ ಆಹಾರ ದಾನ, ಕಪ್ಪಡಕ್ಕೆ ಕಿಸುಕಾಡು–ಎಪ್ಪತ್ತರ ಬಳಿ ಇದ್ದ ಗಾಣದ ಹೊಳೂರು ಗ್ರಾಮವನ್ನು ದಾನ ಮಾಡಿದಳು. ಇದಲ್ಲದೆ ವಿಕ್ರಮಪುರದ ಈಶಾನ್ಯಕ್ಕೆ ಒಂದು ಮತ್ತರ ತೋಟವನ್ನು, ನೈರುತ್ಯ ದಿಕ್ಕಿನಲ್ಲಿ ಪಂಡಿತ ನಾಗದೇವರಿಗೆ ಹನ್ನೆರಡು ಮತ್ತರ, ದಕ್ಷಿಣಕ್ಕೆ ಪೆರೆಕಾರ ಕೋತೋಜನಿಗೆ ಇಪ್ಪತ್ನಾಲ್ಕು ಮತ್ತರ, ಉತ್ತರಕ್ಕೆ ಒಂದು ಮತ್ತರ ತೋಟವನ್ನು ಕೊಡುತ್ತಾಳೆ. ಕಲ್ಕುಟಿಗ ಸರೋಜನಿಗೆ ಹನ್ನೆರಡು ಮತ್ತರ ಹೊಲ, ಒಂದು ಮತ್ತರ ತೋಟ ಕೊಡುತ್ತಾಳೆ. ದಡಿಗರಸನಿಂದ ಭೂಮಿ ಕೊಂಡುಕೊಂಡು ದೇವರಿಗೆ ಕಪ್ಪಡಿ ಕೆರೆಯ ದಕ್ಷಿಣಕ್ಕೆ ಐವತ್ತು ಮತ್ತರ ಭೂಮಿಯನ್ನು ದಾನ ಮಾಡುತ್ತಾಳೆ.[೨೫]

ಹೀಗೆ ಅಕ್ಕಾದೇವಿಯ ಈ ಎಲ್ಲಾ ಸಾಧನೆಗಳು ಇತಿಹಾಸದ ಅಧ್ಯಯನದಲ್ಲಿ ಮುಖ್ಯವಾಗಿದೆ. ಸಾಮಾಜಿಕವಾಗಿ ಭಿನ್ನ ಭಿನ್ನ ರೂಪದಲ್ಲಿ ದಾನ ಕಾರ್ಯಗಳನ್ನು ಕೈಗೊಳ್ಳುವ ಮೂಲಕ, ಧಾರ್ಮಿಕ ಹಿನ್ನಲೆಯಲ್ಲಿ ಧರ್ಮ ಸಹಿಷ್ಣುವಾಗಿ ಎಲ್ಲಾ ಧರ್ಮಗಳನ್ನು (ಜೈನ, ಬೌದ್ಧ, ಶೈವ, ವೈಷ್ಣವ) ಸಮಾನ ದೃಷ್ಟಿಯಿಂದ ಕಂಡಳು. ಅಲ್ಲದೇ ದೇವಾಲಯ ನಿರ್ಮಾಣದಲ್ಲೂ ವಿಶಿಷ್ಟ ಸಾಧನೆ ಮಾಡಿರುವುದು ಇಲ್ಲಿ ಉಲ್ಲೇಖನಾರ್ಹವಾಗಿದೆ.

ಅಡಿಟಿಪ್ಪಣಿಗಳು :

೧. ಎಂ.ಎಸ್. ನಾಗರಾಜರಾವ್ : ದಿ ಚಾಲುಕ್ಯಸ್ ಆಫ್ ಕಲ್ಯಾಣ, ಪುಟ - ೧೬೪.

೨. ಅದೇ, ೧೬೭.

೩. ಅದೇ, ೧೬೯.

೪. ದೇವರಕೊಂಡರೆಡ್ಡಿ : ಬಾಗಲಕೋಟೆ ಶಾಸನ, ಸಂ-೯, ಪುಟ-೧೬.

೫. ಬಿ.ಸುರೇಂದ್ರರಾವ್ : ಕರ್ನಾಟಕ ಚರಿತ್ರೆ ಸಂ-೨, ಪುಟ - ೨೧೪.

೬. ದೇವರಕೊಂಡರೆಡ್ಡಿ : ಬಾಗಲಕೋಟೆ ಶಾಸನ, ಸಂ-೯, ಪುಟ-೧೬.

೭. ಎ.ಇ.XV-6-ಸೂಡಿ (ತಾ) ರೋಣ - ೧೦೫೪.

೮. ಶ್ರೀನಿವಾಸ ರಿತ್ತಿ : ಸೇವನಾಸ್, ಪುಟ-೨೩೧.

೯. ಚನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪುಟ-೫೩.

೧೦. ಅದೇ, ೫೪.

೧೧. ಎ.ಇ.XV-6-ಸೂಡಿ (ತಾ) ರೋಣ - ೧೦೫.

೧೨. ಚಿದಾನಂದಮೂರ್ತಿ.ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೨೦೦.

೧೩. ಚನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪುಟ-೫೫.

೧೪. ಅದೇ, ೫೬-೬೭.

೧೫. ಅದೇ, ೫೮-೫೯.

೧೬. ಶೈಲಜಾ ಹಿರೇಮಠ: ಪಾತರದವರು, ಪುಟ - ೧೯

೧೭. ಚನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪುಟ-೬೦-೬೧.

೧೮. ಚಿದಾನಂದಮೂರ್ತಿ.ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೨೦೪.

೧೯. ಎ.ಇ.XV-6-ಸೂಡಿ (ತಾ) ರೋಣ - ೧೦೫೪.

೨೦. ಎ.ಇ.XV-6-ಸೂಡಿ (ತಾ) ರೋಣ - ೧೦೫೮.

೨೧. ಎಸ್.ಆಯ್.ಆಯ್.-XIi-ಕೊರಲಹಳ್ಳಿ, ತಾ: ಮುಂಡರಗಿ - ೧೦೫೦

೨೨. ದೇವರಕೊಂಡರೆಡ್ಡಿ : ಬಾಗಲಕೋಟೆ ಶಾಸನ, ಸಂ-೯, ಪುಟ-೧೬.

೨೩. ಎ.ಇ.XVI-II ಹೊಟ್ಟೂರು (ತಾ) ಹಾನಗಲ್ಲು - ೧೦೬೪.

೨೪. ದೇವರಕೊಂಡರೆಡ್ಡಿ : ಬಾಗಲಕೋಟೆ ಶಾಸನ, ಸಂ-೯, ಪುಟ-೧೧೦.

೨೫. ಎ.ಇ.XVII-10-ಅರಸಿಬೀದಿ (ತಾ) ಹುನುಗುಂದ - ೧೦೪೭.

ಅಧ್ಯಾಯ : ನಾಲ್ಕು

ಸಾಂಸ್ಕೃತಿಕ ಕೊಡುಗೆಗಳು

ಅಧ್ಯಾಯ : ನಾಲ್ಕು

ಸಾಂಸ್ಕೃತಿಕ ಕೊಡುಗೆಗಳು

ಕಲ್ಯಾಣ ಚಾಲುಕ್ಯರು ಸಾಂಸ್ಕೃತಿಕ ಕ್ಷೇತ್ರಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ಅವರು ಕೆರೆ, ಕಟ್ಟೆ, ದೇವಾಲಯ, ಹಾಗೂ ಬಸದಿಗಳನ್ನು ನಿರ್ಮಾಣ ಮಾಡಿದರು. ಒಂದು ಊರು ನಿರ್ಮಾಣ ಮಾಡಿದರು. ಒಂದು ಊರು ನಿರ್ಮಾಣ ಮಾಡಲು ಕಾಡನ್ನು ಕಡಿದು ಊರನ್ನು ಕಟ್ಟುವುದು. ಊರಿನಲ್ಲಿ ದೇವಾಲಯ ಮತ್ತು ಕೆರೆಗಳ ನಿರ್ಮಾಣ ಮಾಡುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ಕೆ ದೇವಾಲಯ ನಿರ್ಮಿಸುವುದು. ಈ ದೇವಾಲಯವು ಒಬ್ಬ ವ್ಯಕ್ತಿಗೆ ಸಂಬಂಧಿಸಿರುವುದಿಲ್ಲ ಎಲ್ಲ ಜನ ಸಮುದಾಯಕ್ಕೆ ಸಂಬಂಧಿಸಿರುತ್ತದೆ.[೧]

ಕಲ್ಯಾಣದ ಚಾಲುಕ್ಯರು ವಿಶಿಷ್ಟವಾದ ಕಲಾ ಪ್ರಯೋಗಗಳನ್ನು ನೆಡೆಸಿದರು. ಆ ಕಾಲದ ದೇವಾಲಯಗಳನ್ನು ಬಿಟ್ಟರೆ ಅವರ ಲೌಕಿಕ ಅರಮನೆಗಳ ವಾಸ್ತುಕೃತಿ ಉಳಿದುಬಂದಿಲ್ಲ. ಇವರ ವಾಸ್ತು ಪರಂಪರೆ ಬದಾಮಿ ಚಾಲುಕ್ಯರಿಂದ ಆರಂಭವಾದರೂ ದೀರ್ಘಕಾಲದ ವಿಕಾಸದ ಹಂತದಲ್ಲಿ ಸಾಕಷ್ಟು ಬದಲಾವಣೆಗಳಾಗಿ ತನ್ನತನವನ್ನು ಉಳಿಸಿಕೊಂಡಿದೆ. ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಸಮಕೋನಗಳ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ. ಡಂಬಳದ ದೊಡ್ಡಬಸಪ್ಪ ದೇವಾಲಯದ ನಕ್ಷತ್ರಾಕೃತಿಯ ತಲವಿನ್ಯಾಸವಿರುವುದು ವಿಶೇಷವಾಗಿದೆ. ಚಾಲುಕ್ಯರ ದೇವಾಲಯಗಳ ಗರ್ಭಗೃಹ, ಅಂತರಾಳ, ನವರಂಗ, ಭಿತ್ತಿರಹಿತವಾದ ತೆರೆದ ಮುಖಮಂಟಪವಿದೆ.[೨]

ಇವರ ಕಾಲದ ವಿಶಿಷ್ಟ ತಲವಿನ್ಯಾಸವನ್ನು ಹೊಂದದ್ದು ಗುಲ್ಬರ್ಗಾ ಜಿಲ್ಲೆಯ ಶಿರವಾಳದಲ್ಲಿ ಪಂಚಕೂಟ ಶಿವಾಲಯದ ತಲವಿನ್ಯಾಸ ಆಕಾರವು ಸುಂದರವಾದ ವಾಸ್ತು ಕೃತಿಯನ್ನು ಹೊಂದಿದೆ. ಇವರ ಕಾಲದ ಆರಂಭದ ಕಟ್ಟಡವೆಂದರೆ ಗದುಗಿನ ಹತ್ತಿರವಿರುವ ಕುಕನೂರಿನ ಕಲ್ಮೇಶ್ವರ ದೇವಾಲಯ, ಇದನ್ನು ಮರಳುಗಲ್ಲಿನಿಂದ ಕಟ್ಟಲಾಗಿದ. ಗರ್ಭಗೃಹ, ಅಂತರಾಳ, ನಾಲ್ಕು ಕಂಬಗಳ ನವರಂಗ ಮುಂದಿರುವ ನಂದಿಮಂಟಪ ಇವುಗಳನ್ನು ಸರಳರೇಖೆಯಲ್ಲಿ ಓರಣವಾಗಿ ಜೋಡಿಸಿದಂತೆ ರಚಿಸಲಾಗಿದೆ.[೩]

ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದು ಅವರು ನಿರ್ಮಿಸಿದ ಹಲವಾರು ದೇವಾಲಯಗಳಿವೆ. ಅವುಗಳಲ್ಲಿ ವಿಶೇಷವಾಗಿ ಕುಕನೂರಿನ, ಕಲ್ಲೇಶ್ವರ ರೋಣದ ಕಲ್ಲುಗುಡಿ, ವಿರುಪಾಕ್ಷ, ಸೂಡಿಯ ಮಲ್ಲಿಕಾರ್ಜುನ ಹಾಗೂ ಜೋಡಿಕಳಸದಗುಡಿ, ಬದಾಮಿ ಯಲ್ಲಮ್ಮ, ಲಕ್ಕುಂಡಿಯ ವಿರೂಪಾಕ್ಷ ಸೋಮೇಶ್ವರ ಮತ್ತು ಕಾಶಿ ವಿಶ್ವೇಶ್ವರ, ಗದುಗಿನ ತ್ರಿಕೂಟೇಶ್ವರ ಇನ್ನೂ ಹಲವಾರು ದೇವಾಲಯಗಳು ಕಂಡುಬರುತ್ತದೆ. ಅಂದಿನ ಜೈನ ಬಸದಿಗಳಲ್ಲಿ

ಲಕ್ಷ್ಮೇಶ್ವರದ ಅನಂತನಾಥ ಬಸದಿ, ಲಕ್ಕುಂಡಿಯ ಬ್ರಹ್ಮ ಜಿನಾಲಯ ಅಣ್ಣಿಗೇರಿಯ ಬಸದಿಗಳು ಕಂಡುಬರುತ್ತದೆ.[೪]

ಇವರ ಕಾಲದಲ್ಲಿ ಶೈವ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದರು. ಅಂದಿನ ಶೈವ ದೇವಾಲಯಗಳೆಂದರೆ ಹಾವೇರಿಯ ಸಿದ್ದೇಶ್ವರ, ಡಂಬಳದ ದೊಡ್ಡಬಸಪ್ಪ, ಬಳ್ಳಿಗಾವೆಯ ತ್ರಿಪುಲಾಂತಕೇಶ್ವರ ಹಾಗೂ ಕೇದಾಶ್ವರ, ಹೂವಿನ ಹಡಗಲಿಯ ಕಲ್ಮೇಶ್ವರ, ಗದುಗಿನ ಸೋಮೇಶ್ವರ ಮತ್ತು ಸರಸ್ವತಿ ಬಂಕಾಪುರದಲ್ಲಿಯ ಅರವತ್ತು ಕಂಬದ ದೇವಾಲಯ, ಇಟಗಿಯ ಮಹಾದೇವ ದೇವಾಲಯ ಇನ್ನೂ ಅನೇಕ ಶೈವ ದೇವಾಲಯಗಳು ನಿರ್ಮಾಣವಾಗಿವೆ.[೫]

ಇವರ ದೇವಾಲಯಗಳು ಏಕಕೂಟ, ದ್ವಿಕೂಟ, ತ್ರಿಕೂಟ ದೇವಾಲಯಗಳು ಕಂಡುಬರುತ್ತವೆ. ದೇವಾಲಯದ ಗೋಡೆಗಳ ವಿನ್ಯಾಸವು ಅತ್ಯಂತ ವೈಶಿಷ್ಟ್ಯಪೂರ್ಣವಾಗಿರುವುದು. ಜಾಲಾಂದರಗಳ ಸಾಲು ಕಂಬಗಳು ವಿಶೇಷತೆಯಿಂದ ಕೂಡಿದೆ.[೬] ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯ ಇದು ಪೂರ್ವಕ್ಕೆ ದ್ವಾರವನ್ನು ಹೊಂದಿದೆ. ಆ ದ್ವಾರಕ್ಕೆ ಏಳು ದ್ವಾರಶಾಖೆಗಳಿಂದ ಅಲಂಕರಿಸಲಾಗಿದೆ. ಅವುಗಳಲ್ಲಿ ವಜ್ರದ ಅಲಂಕಾರ, ಸಂಗೀತಗಾರರು, ನಾಗದೇವತೆ, ಸಿಂಹಗಳು, ನರ್ತಿಕಿಯರು, ಹೂಬಳ್ಳಿ ಎಸಳುಗಳನ್ನು ಕೊರೆಯಲಾಗಿದೆ.[೭]

ಬೇವೂರಿನ ಸೋಮೇಶ್ವರ ದೇವಾಲಯವು ತ್ರಿಕೂಟ ದೇವಾಲಯವಾಗಿದ್ದು, ಇದು ಮೂರು ಗರ್ಭಗುಡಿಗಳನ್ನು ಹೊಂದಿವೆ. ಮುಖ್ಯ ಗರ್ಭಗೃಹದಲ್ಲಿ ಒಂದು ಶಿವಲಿಂಗವಿದೆ. ಎರಡನೆಯ ಗರ್ಭಗೃಹದಲ್ಲಿ ಸೂರ್ಯ ಮೂರ್ತಿಯಿದೆ. ಮೂರನೆಯದು ಖಾಲಿಯಿದೆ. ಒಂದು ಅರ್ಧಮಂಟಪ, ಒಂದು ಸಮಾನ ನವರಂಗ ಹೊಂದಿದೆ. ಗರ್ಭಗೃಹ ದ್ವಾರದಲ್ಲಿ ದಳಗಳು, ದ್ವಾರಪಾಲಕರು ಇರುವುದು ಕಾಣುತ್ತೇವೆ.[೮]

ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯಕ್ಕೆ ನಾಲ್ಕು ಪ್ರವೇಶ ದ್ವಾರಗಳನ್ನು ಹೊಂದಿದೆ. ಈ ದೇವಾಲಯಕ್ಕೆ ಸುಂದರವಾಗಿ ಜಾಲಂದರಗಳನ್ನು ಕೆತ್ತಲಾಗಿದೆ. ಆ ಜಾಲಾಂದರಕ್ಕೆ ಸುರಳಿಗಳಿವೆ. ಅದರಲ್ಲಿ ಮೃದಂಗ ತಾಳ, ಕೊಳಲು ಮುಂತಾದ ವಾದ್ಯಗಳು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಕಂಡುಬರುವ ಜಾಲಾಂದರಗಳು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಈ ದೇವಾಲಯಗಳಲ್ಲಿ ಜಾಲಂದ್ರಗಳನ್ನು ಸಾಮಾನ್ಯವಾಗಿ ದ್ವಾರಗಳ ಎರಡೂ ಬದಿಗೆ ಅಳವಡಿಸಿರುತ್ತಾರೆ. ಪ್ರವೇಶದ್ವಾರ, ಸುಕನಾಸಿದ್ವಾರ ಮತ್ತು ಗರ್ಭಗೃಹ ದ್ವಾರಶಾಖೆ ಮತ್ತು ಅರ್ಧಗಂಬಗಳ ನಡುವೆ ಇರುತ್ತವೆ. ಜಾಲಾಂದ್ರಗಳನ್ನು ಬಳಪದ ಕಲ್ಲಿನಲ್ಲಿ ಕೊರೆದಿರುವುದರಿಂದ ಇವು ಸೂಕ್ಷ್ಮ ಕೆತ್ತನೆ ಕೆಲಸಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಹೆಚ್ಚಾಗಿ ಆಯತಾಕಾರದಲ್ಲಿ ಜಾಲಾಂದ್ರಗಳು ಕಂಡುಬರುತ್ತವೆ. ಬಳ್ಳಿಗಾವೆಯ ತ್ರಿಪುರಾಂತಕೇಶ್ವರದ ಗರ್ಭಗೃಹ ದ್ವಾರದಲ್ಲಿ

ಇಕ್ಕೆಲುಗಳಲ್ಲಿ ಜಾಲಂದ್ರಗಳಿದ್ದು, ಅದರಲ್ಲಿ ಜೋಡು ನಾಗ–ನಾಗಣಿಯರ ಶಿಲ್ಪಗಳಿದ್ದು, ಅವು ಒಂದನ್ನೊಂದು ಗಂಟುಹಾಕಿಕೊಂಡಿವೆ.[೯]

ಡಂಬಳದ ದೊಡ್ಡಬಸಪ್ಪ ದೇವಾಲಯವು ಕರ್ನಾಟಕದ ವಾಸ್ತುಶಿಲ್ಪಗಳಲ್ಲಿ ಒಂದು ವಿಶಿಷ್ಟತೆಯನ್ನು ಹೊಂದಿದೆ. ಈ ದೇವಾಲಯದ ತಲವಿನ್ಯಾಸ ನಕ್ಷತ್ರಾಕಾರವಾಗಿದೆ. ಗರ್ಭಗೃಹ ಅಧಿಷ್ಠಾನ ಮತ್ತು ಗೋಡೆ, ಶಿಖರ ಇಪ್ಪತ್ನಾಲ್ಕು ಮೊನೆಗಳುಳ್ಳ ನಕ್ಷತ್ರಾಕಾರಗಳಿವೆ. ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಮಕರ ತೋರಣದಲ್ಲಿ ಸುಂದರವಾಗಿ ಬ್ರಹ್ಮ ಶಿವ ಹಾಗೂ ವಿಷ್ಣುವಿನ ಮೂರ್ತಿಶಿಲ್ಪಗಳಿವೆ.[೧೦]

ಹೀಗೆ ಕಲ್ಯಾಣ ಚಾಲುಕ್ಯರ ಬೇರೆ ಬೇರೆ ಶೈಲಿಯ ದೇವಾಲಯಗಳನ್ನು ನಿರ್ಮಿಸುವುದರಲ್ಲಿ ಪ್ರಾವಿಣ್ಯರಾಗಿದ್ದರು. ಅವರು ನಿರ್ಮಿಸಿರುವ ಇಂತಹ ದೇವಾಲಯಗಳ ರಚನೆ, ಶೈಲಿ, ವಾಸ್ತು ವೈವಿಧ್ಯ, ಸುಂದರತೆ ಅವರ ಕಲಾಭಿರುಚಿಯ ದ್ಯೋತಕವಾಗಿದೆ.

ಮಲ್ಲಿಕಾರ್ಜುನ ದೇವಾಲಯ

ಗದಗ ಜಿಲ್ಲಾ ರೋಣ ತಾಲ್ಲೂಕಿನಿಂದ ೨೦ ಕಿ.ಮೀ. ಸೂಡಿ ಗ್ರಾಮವಿದೆ. ಅಲ್ಲಿರುವ ಮಲ್ಲಿಕಾರ್ಜುನ ದೇವಾಲಯದ ಬಲಗಡೆ ಭಾಗದಲ್ಲಿ ಶಾಸನವಿದ್ದು, ಕ್ರಿ.ಶ. ೧೦ನೇಳರ ಕಾಲದ್ದು. ಈ ಶಾಸನದಲ್ಲಿ ಅಕ್ಕೇಶ್ವರ ದೇವಾಲಯ ಎಂದು ಕರೆಯಲಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ಅಕ್ಕೇಶ್ವರ ದೇವಾಲಯ ಕಾಲಾನಂತರ ಮಲ್ಲಿಕಾರ್ಜುನ ಎಂಬ ಹೆಸರನ್ನು ಪಡೆಯಿತು.

ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ನವರಂಗ ಮುಖಮಂಟಪ ಹೊಂದಿದೆ. ದೇವಾಲಯದ ಗರ್ಭಗೃಹದ ಚೌಕಾಕಾರದ ಚಿಕ್ಕ ಕೋಣೆ ಹೊಂದಿದೆ. ಗರ್ಭಗೃಹದಲ್ಲಿ ಚಿಕ್ಕ ಲಿಂಗ ಪ್ರತಿಷ್ಠಾಪಿಸಿ ನಿತ್ಯ ಪೂಜಿಸಲಾಗಿದೆ. ಗರ್ಭಗೃಹದ ಗೋಡೆಯಲ್ಲಿ ಅರ್ಧಕಂಬ ಹೊಂದಿದ್ದು ಈ ಕಂಬಗಳ ಮೇಲೆ ಕಡಿದಾದ ತ್ರಿಕೋಣ ಪಟ್ಟಿಕೆ ಕೆತ್ತಲಾಗಿದೆ. ಇಂತಹ ಪಟ್ಟಿಕೆ ಬದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಂಬಗಳ ವಿಶೇಷತೆ ಹೊಂದಿದೆ. ಈ ಹಿನ್ನೆಲೆಯಲ್ಲಿ ಸೂಡಿಯ ಮಲ್ಲಿಕಾರ್ಜುನ ದೇವಾಲಯ ಬದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಲಾಶೈಲಿಯ ಪ್ರಭಾವ ಹೊಂದಿ ರಚನೆಯಾಗಿರುವ ದೇವಾಲಯ ಎಂದು ಅಭಿಪ್ರಾಯಿಸಲಾಗಿದೆ.

ದೇವಾಲಯದ ಗರ್ಭಗೃಹದ ಬಾಗಿಲವಾಡ ಪಂಚಪಟ್ಟಿಕೆ ಮೇಲ್ಛಾವಣಿವರೆಗೆ ವಿಸ್ತರಿಸಲಾಗಿದೆ. ಪಟ್ಟಿಕೆಯಲ್ಲಿ ಬಳ್ಳಿ ರಚನೆ ಕೆತ್ತಲಾಗಿ ಮೇಲೆ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವನ್ನು ಹೊಂದಿದ್ದು ಬಾಗಿಲವಾಡ ಮೇಲೆ ಮುಂಚಾಚಿದ ಶಿಲೆಯು ಸರಳ ರಚನೆ ಮಾಡಲಾಗಿದೆ. ಗರ್ಭಗೃಹ ಮುಂಭಾಗದಲ್ಲಿ ತೆರೆದ ಅರ್ಧ ಮಂಟಪದಲ್ಲಿ ಚಿಕ್ಕ ನಂದಿಶಿಲ್ಪ ಇಡಲಾಗಿದೆ. ಈ ಅರ್ಧ ಮಂಟಪದ ಎರಡು ದುಂಡಾಕೃತಿಯ ಕಂಬಗಳಿವೆ. ಈ ಕಂಬಗಳು ಅಧಿಷ್ಠಾನ

ಗೋಡೆಗೆ ಹೊಂದಿಕೊಂಡು ವೃತ್ತಾಕಾರ ಕಂಬದ ಭಾಗಗಳ ಮಧ್ಯದಲ್ಲಿ ಕಂಬದ ರಚನೆ ಅದರ ಮೇಲೆ ವೃತ್ತಾಕಾರ ಮತ್ತು ತಟ್ಟೆಯಾಕಾರವಾಗಿ ರಚಿಸಲಾಗಿದೆ. ಈ ಎರಡು ಕಂಬಗಳ ಮೇಲ್ಭಾಗದಲ್ಲಿ (ಶಿವ)ಗಜೆಯಾಳಿಯಿಂದ ಅಲಂಕೃತವಾಗಿದೆ. ಈ ನಟರಾಜ ಶಿಲ್ಪದ ಎಡ ಮತ್ತು ಬಲ ಭಾಗದಲ್ಲಿ ಬ್ರಹ್ಮ ಹಾಗೂ ವಿಷ್ಣು ಶಿಲ್ಪವನ್ನು ಕೆತ್ತಲಾಗಿದೆ. ಅಂತರಾಳದ ಈ ಅರ್ಧಮಂಟಪದ ಎರಡು ಕಂಬಗಳ ಪಕ್ಕದಲ್ಲಿ ಇನ್ನೆರಡು ಅರ್ಧಕಂಬಗಳಿಗೆ ಅಷ್ಟ ಪಟ್ಟಿಕೆಯ ರಚನೆ ಹೊಂದಿದೆ. ಅಲಂಕೃತವಾದ ಈ ಕಂಬಗಳು ವೃತ್ತಾಕಾರ ಫಲಕಗಳು ಹಾಗೂ ಚೌಕಾಕಾರದ ಬೋಧಿಗೆ ಹೊಂದಿದೆ.

ತೆರೆದ ಮಂಟಪಕ್ಕೆ ಹೊಂದಿಕೊಂಡ ನವರಂಗವು ದೊಡ್ಡಗಾತ್ರದಲ್ಲಿ ಅಲಂಕೃತವಾದ ನಾಲ್ಕು ಕಂಬಗಳಿಂದ ಹೊಂದಿಕೊಂಡಿದೆ. ನವರಂಗ ಕಂಬಗಳ ಎಡ ಮತ್ತು ಬಲಭಾಗಗಳ ಎರಡು ಅರ್ಧಮಂಟಪಗಳಿದ್ದು ಅವುಗಳಲ್ಲಿ ಸುಂದರವಾದ ಎರಡು ಬಿಡಿ ಶಿಲ್ಪ ಇಡಲಾಗಿದೆ. ಎಡಭಾಗದ ಅರ್ಧಮಂಟಪದಲ್ಲಿ ಶಿವಪಾರ್ವತಿ ಸಮಭಂಗಿಯಲ್ಲಿ ನಿಂತಿರುವುದು. ಬಲಭಾಗದ ಅರ್ಧಮಂಟಪದಲ್ಲಿ ಅನಂತಶಯನ ಶಿಲ್ಪವಿದೆ. ಈ ಅನಂತಶಯನ ಪ್ರಭಾವಳಿಯಲ್ಲಿ ಅನೇಕ ಬಿಡಿ ಉಬ್ಬುಶಿಲ್ಪಗಳಿವೆ. ಅನಂತಶಯನದ ನಾಭಿಯಿಂದ ಬಂದ ಪದ್ಮದಲ್ಲಿ ಬ್ರಹ್ಮಣ ಉಬ್ಬು ಶಿಲ್ಪವಿದೆ. ಅನಂತಶಯನ ಶಿರಭಾಗದಲ್ಲಿ ಶ್ರೀದೇವಿ ಹಾಗೂ ಪಾದದಡಿಯಲ್ಲಿ ಭೂದೇವಿಯ ಶಿಲ್ಪವಿದೆ.

ಈ ಎರಡು ಅರ್ಧಮಂಟಪಗಳಲ್ಲಿ ಎರಡೆರಡು ಕಂಬಗಳಿದ್ದು ಅವು ಕೂಡ ಸಾದಾ ರಚನೆಯಿಂದ ಕೂಡಿದೆ. ನವರಂಗದ ಎರಡು ಬೃಹದಾಕಾರ ಕಂಬಗಳು ಕಲ್ಯಾಣ ಚಾಲುಕ್ಯ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಸುಂದರ ರಚನೆಯ ಕಂಬಗಳನ್ನು ಪ್ರತನಿಧಿಸುತ್ತವೆ. ಈ ಕಂಬಗಳು ಅಧಿಷ್ಠಾನಗೋಡೆ ವೃತ್ತಕಾರ ಬೃಹತ್ ಫಲಕ ಚೌಕಕಾರದ ಬೋಧಿಗೆ ಹೊಂದಿದೆ. ಈ ಕಂಬಗಳು ಗಂಟೆಯಾಕಾರ ರಚನೆ ಹೊಂದಿದ್ದು, ಇದರಲ್ಲಿ ಪುಷ್ಪಾಕೃತಿ ಕಟ್ಟೆಯ ವೃತ್ತಾಕಾರದ ಹಲ್ಲಿನ ಪಟ್ಟಿಯ ರಚನೆ ಹೊಂದಿದ್ದು ಅವುಗಳ ಮೇಲೆ ಗಂಟೆಯ ತಿರುವು ಮುರುವಾಗಿ ಇಟ್ಟ ರೀತಿಯಲ್ಲಿ ಇಟ್ಟಿದೆ. ಗಂಟೆಯಾಕಾರ ಕಂಬ ಮತ್ತು ವೃತ್ತಕಾರದ ಉಬ್ಬುರಚನೆಯಿದ್ದು, ಅಲ್ಲದೆ ಈ ಕಂಬಗಳ ಮೇಲೆ ಮಣೀಸರ ಹಾಗೂ ವರ್ಜಪಟ್ಟಿಕೆಯ ಅಲಂಕಾರ ಹೊಂದಿದೆ. ಈ ಕಂಬಗಳಲ್ಲಿ ವೃತ್ತಕಾರದ ಶಿಲಾಫಲಕ ಅದರ ಮೇಲೆ ಚೌಕಕಾರದ ಬೋಧಿಗೆಗಳನ್ನು ಮೇಲ್ಬಾವಣಿಯ ತೊಲೆಗಳ ಮಧ್ಯ ಭಾಗದಲ್ಲಿ ಜೋಡಿಸಲಾಗಿದೆ. ಮೇಲ್ಬಾವಣೀಯ ಒಳಭಾಗ ಸರಳ ರಚನೆಯಿದೆ. ಭೂವನೇಶ್ವರಿಯ ಕೆತ್ತನೆ ಹಾಳಾಗಿದೆ.

ನಾಲ್ಕು ಕಂಬಗಳ ನಡುವೆ ಎತ್ತರದ ಕಟ್ಟೆಯನ್ನು ಇತ್ತೀಚಿಗೆ ಕಟ್ಟಲಾಗಿದೆ. ನವರಂಗ ಬಾಗಿಲವಾಡವು ಪಂಚಶಾಖೆಯನ್ನು ಹೊಂದಿದ್ದು ಬಾಗಿಲವಾಡ ಭಾಗದಲ್ಲಲಿ ಸ್ತ್ರೀ ಉಬ್ಬು ಶಿಲ್ಪ ಕೆತ್ತಲಾಗಿದೆ. ನವರಂಗದ ಬಾಗಿಲವಾಡವು ಅರ್ಧಕಂಬ ಹೊಂದಿದ್ದು ಅಲಂಕಾರದಿಂದ ಕೂಡಿದೆ.

ಬಾಗಿಲವು ಎತ್ತರವಾದ ಹೊಸ್ತಿಲವನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮೀಯಿಂದ ಅಲಂಕೃತಗೊಂಡಿದೆ. ನವರಂಗದ ಮುಂಭಾಗದಲ್ಲಿ ಮುಖ ಮಂಟಪವು ಹತ್ತು ಕಂಬಗಳನ್ನು ಹೊಂದಿದೆ. ಈ ಕಂಬಗಳು ಚೌಕಕಾರದ ರಚನೆ ಹೊಂದಿದ್ದು, ಹದಿನಾರು ಪಟ್ಟಿಕೆಯಿಂದ ಕೂಡಿದು ವೃತ್ತಫಲಕ ತಟ್ಟೆಯಾಕಾರದಿಂದ ಕೂಡಿದೆ. ಮುಖ ಮಂಟಪದಲಿ ಭುವನೇಶ್ವರಿ ಭಾಗದಲ್ಲಿ ಪುಷ್ಪಾಲಂಕಾರ ಹೊಂದಿದೆ.

ದೇವಾಲಯದ ಅಧಿಷ್ಠಾಣವು ಎತ್ತರವಾಗಿದ್ದು ಈ ಭಾಗದಲ್ಲಿ ಉಪಾಸ, ಜಗತಿ, ತ್ರಿಪಟ್ಟ ಕುಮುದ, ಗಳ ಹಾಗೂ ಕಪೋತ ಭಾಗ ಹೊಂದಿದೆ. ತ್ರಿಪಟ್ಟ ಕುಮುದ ಮತ್ತು ಕಪೋತ ಭಾಗ ದೇವಾಲಯ ಸುತ್ತಲು ವಿಸ್ತರಿಸಿದೆ. ದೇವಾಲಯದ ಅಧಿಷ್ಠಾನ ಸುತ್ತಲು ರಚನೆಯಾಗಿದೆ. ಹಲ್ಲಿನಾಕಾರದ ಕಪೋತ ಪಟ್ಟಿಕೆಯ ದೇವಾಲಯ ಸುತ್ತಲು ವಿಸ್ತರಗೊಂಡಿದೆ. ದೇವಾಲಯದ ಹೊರಗೋಡೆಯ ಅಲಂಕಾರದಿಂದ ಕೂಡಿದ್ದು ಇದರಲ್ಲಿ ಶಿಖರ ಉಳ್ಳ ಅರ್ಧಮಂಟಪಗಳು, ಶಿಖರ ಕುಂಬ ಪಂಜರಗಳು ಮತ್ತು ದ್ರಾವಿಡ ಶೈಲಿ ಅರ್ಧಮಂಟಪ ಶಿಖರ ಸಹಿತ ಅರ್ಧಮಂಟಪಗಳನ್ನು ಹೊರಭಾಗಗಳಲ್ಲಿ ಹೊಂದಿದೆ. ಹೊರ ಗೋಡೆ ಕುಂಬ ಪಂಜರಗಳು ಅಷ್ಠ ಪಟ್ಟಿಕೆ ಕಂಬ ರಚನೆ ಅವುಗಳ ಮೇಲೆ ವೃತ್ತಾಕಾರದ ಅರ್ಧಫಲಕ ಅದರ ಮೇಲ್ಭಾಗವು ತಟ್ಟೆಯಾಕಾರ ಅದರ ಮೇಲ್ಭಾಗದಲ್ಲಿ ಚೌಕಾಕಾರ ಬೋಧಿಗೆ ಹೊಂದಿದೆ. ಈ ಅಲಂಕೃತ ಕಂಬದ ಮೇಲೆ ನಾಗರ ಶೈಲಿ ಶಿಖರವಿದ್ದ ಅಮಲಕ ಮತ್ತು ಕಳಸ ಹೊಂದಿದೆ.

ಶಿಖರ ಮೇಲ್ಭಾಗದಲ್ಲಿ ವೃತ್ತಕಾರ ಅಲಂಕಾರಣೆಯಿದ್ದು ಅದರ ಮೇಲೆ ಸಿಂಹ ಫಲಕ ಕೆತ್ತಲಾಗಿದೆ. ಗೋಡೆ ಹೊರಭಾಗದಲ್ಲಿರುವ ಅರ್ಧಮಂಟದ ರಚನೆಗಳು ವೃತ್ತಕಾರ, ಚೌಕಾಕಾರ ಗಿಡ್ಡನೆಯ ಕಂಬ ಹೊಂದಿದ್ದು, ಅವುಗಳ ಫಲಕ, ತಟ್ಟೆ ಬೋಧನೆ ರಚನೆ, ಹೊಂದಿದೆ. ಈ ಅರ್ಧ ಮಂಟಪ ಕಂಬಗಳ ಮೇಲೆ ದ್ರಾವಿಡ ಮಾದರಿ ಶಿಖರ ಹೊಂದಿದೆ. ಇದೆ ಹೊರಗೋಡೆ ಭಾಗದಲ್ಲಿ ಪಂಚಪಟ್ಟಿಕೆವುಳ್ಳ ಅರ್ಧಕಂಬಗಳ ಮೇಲೆ ಅಷ್ಠಪಟ್ಟಿಕೆ ಬೋದಿಗೆ, ಕಪೋತ, ತ್ರಿಪಟ್ಟ ಕುಮುದ, ಗಂಟೆಯಾಕಾರದ ರಚನೆಗಳು ಈ ಕಂಬದ ಮೇಲೆ ಕೆತ್ತಲಾಗಿದೆ. ಗೋಡೆ ಮೇಲ್ಭಾಗದ ಶಿಖರದ ಮಧ್ಯ ಭಾಗದಲ್ಲಿ ಕಪೋತ, ಗಳ ತ್ರಿಪಟ್ಟಕುಮುದ ರಚನೆ ಹೊಂದಿದೆ. ನಾಲ್ಕು ಕಡೆಯು ಬದಾಮಾಕೃತಿಯ ರಚನೆ ಹೊಂದಿದ ಶಿಖರವು ಐದು ತಲವನ್ನು ಹೊಂದಿದು ಪ್ರತಿ ತಲದಲ್ಲಿ ಕಪೋತ, ಫಲಕ ಭಾಗದಲ್ಲಿ ಅಳವಡಿಸಿ ಮೇಲ್ಭಾಗದಲ್ಲಿ ಕಳಸ ಭಾಗವಿದೆ.

ಈ ಮಲ್ಲಿಕಾರ್ಜುನ ದೇವಾಲಯದ ಎಡಭಾಗದಲ್ಲಿ ಸಣ್ಣ ಏಕಕೂಟ ದೇವಾಲಯವಿದೆ. ಒಂದೇ ಗರ್ಭಗೃಹವನ್ನು ಹೊಂದಿದೆ. ಮುಂದೆ ಎರಡು ವೃತ್ತಕಾರದ ಕಂಬಗಳನ್ನು ಹೊಂದಿದೆ. ಯಾವುದೇ ಮೂರ್ತಿಶಿಲ್ಪಗಳಿಲ್ಲ. ಅದರ ಗೋಡೆಯ ಕೋಷ್ಟಕಗಳಿಂದ ಕೂಡಿದೆ. ದೇವಾಲಯ ಅಧಿಷ್ಠಾನ, ಉಪಾನಗಳ ತ್ರಿಪಟ್ಟಕುಮುದ ಹೊಂದಿದೆ. ಗೋಡೆಯ ಉಬ್ಬು ಶಿಲ್ಪ ಹೊಂದಿದೆ. ಇಲ್ಲಿಯ ಜನರು ಈ ದೇವಾಲಯವನ್ನು ಕಥೆ ಗುಡಿಯೆಂದು ಕರೆಯುವರು.



ಮಲ್ಲಿಕಾರ್ಜುನ ದೇವಾಲಯದ ವಿಹಂಗಮ ನೋಟ



ಮಲ್ಲಿಕಾರ್ಜುನ ದೇವಾಲಯದ ಮುಂಭಾಗ



ಮಲ್ಲಿಕಾರ್ಜುನ ದೇವಾಲಯದ ಶಿಖರ



ಮಲ್ಲಿಕಾರ್ಜುನ ದೇವಾಲಯದ ಗೋಡೆಯ ಭಾಗ



ಮಲ್ಲಿಕಾರ್ಜುನ ದೇವಾಲಯದ ಹೊರಗೋಡೆಯಲ್ಲಿರುವ ಅಲಂಕರಣೆ



ಮಲ್ಲಿಕಾರ್ಜುನ ದೇವಾಲಯದ ಹೊರಗೋಡೆಯಲ್ಲಿರುವ ಅರ್ಧಮಂಟಪ



ಮಲ್ಲಿಕಾರ್ಜುನ ದೇವಾಲಯದ ಅಧಿಷ್ಠಾನ



ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಕಥೆಗುಡಿ



ಮಲ್ಲಿಕಾರ್ಜುನ ದೇವಾಲಯದ ಅರ್ಧಮಂಟಪ ತೋರಣ



ಮಲ್ಲಿಕಾರ್ಜುನ ದೇವಾಲಯದ ಅನಂತಶಯನ ಶಿಲ್ಪ







ಮಲ್ಲಿಕಾರ್ಜುನ ದೇವಾಲಯದ ನವರಂಗದ ಕಂಬ



ಮಲ್ಲಿಕಾರ್ಜುನ ದೇವಾಲಯದ ಮುಖಮಂಟಪದ ಕಂಬ



ಮಲ್ಲಿಕಾರ್ಜುನ ದೇವಾಲಯದ ಶಿಲ್ಪ



ಮಲ್ಲಿಕಾರ್ಜುನ ದೇವಾಲಯದ ತಿರುಗಣಿ ಕಂಬ






ನಗರೇಶ್ವರ ದೇವಾಲಯ

ಗ್ರಾಮದ ಕೋಟೆಯ ಮಧ್ಯದಲ್ಲಿ ಪೂರ್ವಭಿಮುಖವಾಗಿರುವ ನಗರೇಶ್ವರ ದೇವಾಲಯವಿದೆ. ಈ ದೇವಾಲಯ ಪೂರ್ಣ ನವೀಕರಣಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ, ವೃತ್ತಕಾರ ಲಿಂಗ ರುದ್ರಭಾಗವನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮೀ ಬಾಗಿಲ ಮೇಲ್ಭಾಗ ಶಿಖರ ಪಟ್ಟಿಗೆ ಹೊಂದಿದೆ. ಅದರಲ್ಲಿ ಉಬ್ಬು ಶಿಲ್ಪ ಹೊಂದಿದೆ. ಭುವನೇಶ್ವರಿಯ ಸಾದಾ ರಚನೆ ಹೊಂದಿದೆ.

ದೇವಾಲಯ ಗರ್ಭಗೃಹ, ಅಂತರಾಳ, ಒಳಭಾಗಗಳು ಗಾರೆ ಹಾಗೂ ಸಿಮೆಂಟಿನಿಂದ ಮರು ರೂಪಿಸಲಾಗಿದೆ. ನವರಂಗ ಕಂಬಗಳು ಅತ್ಯಂತ ಅಲಂಕಾರ ಹೊಂದಿದೆ. ಕಂಬದ ಕೆಳಭಾಗದಲ್ಲಿ ನಾಲ್ಕು ಕಡೆ ಮೂಲೆಗಳಲ್ಲಿ ಅರ್ಧಗಂಬದ ಶಿಖರ ರಚನೆ ವಿವಿಧ ಭಂಗಿಯ ಸ್ತ್ರೀ ಶಿಲ್ಪವನ್ನು ಈ ಕಂಬದಲ್ಲಿ ಕಂಡರಿಸಲಾಗಿದೆ. ಗಂಟೆಯಾಕಾರ ಕಂಬದ ಮೇಲೆ ತಪಾಲಿಯಾಕಾರದಲ್ಲಿದೆ. ದೇವಾಲಯದ ಎಡಗಡೆ ಕಂಬಗಳಲ್ಲಿ ಲಿಪಿಯನ್ನು ಕಾಣುತ್ತೇವೆ. ಪ್ರಾಚೀನ ಕಂಬಗಳ ಮೇಲೆ ಹೊಸ ಕಂಬಗಳನ್ನು ಮರುಜೋಡಿಸಿ ದೇವಾಲಯ ಮೇಲ್ಚಾವಣಿ ಹೊಸದಾಗಿ ನಿರ್ಮಿಸಿದ್ದಾರೆ. ಹೊರ ಗೋಡೆಗಳು ಅಧಿಷ್ಠಾನ ಭಾಗಗಳು ಗಾರೆ ಮತ್ತು ಸಿಮೆಂಟಿನಿಂದ ಮರುನಿರ್ಮಿಸಿದ್ದಾರೆ.



ನಗರೇಶ್ವರ ದೇವಾಲಯ



ನಗರೇಶ್ವರ ದೇವಾಲಯದ ಕಂಬ

ಕಲ್ಮೇಶ್ವರ ದೇವಾಲಯ

ಸೂಡಿ ಗ್ರಾಮದ ಹುಡೆದ ಹತ್ತಿರವಿರುವ ಕಲ್ಮೇಶ್ವರ ದೇವಾಲಯ ಎಂದು ಕರೆಯುವರು. ಇದನ್ನು ಧಾರವಾಡ ಜಿಲ್ಲಾ ಶಾಸನ ಸೂಚಿ ಸಂ.ಕೊ–101, ಪು–19, sll,xl, pl.11 No.153 ರಲ್ಲಿ ಪ್ರಕಟವಾಗಿದೆ. ಈ ದೇವಾಲಯವೆಂದು ಕರೆಯುವರು. ದೇವಾಲಯ ಪ್ರವೇಶ ದ್ವಾರ (ಪೂರ್ವಾಭಿಮುಖ) ಉತ್ತರಾಭಿಮುಖವಾಗಿದ್ದು ಗರ್ಭಗೃಹ, ಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪ ಕಂಡು ಬರುವದಿಲ್ಲ. ಮುಂದೆ ಮಂಟಪದಲ್ಲಿ ಸಾಲು ಕಂಬಗಳಿದ್ದು ಅದು ಸಾದಾ ರಚನೆಯಿಂದ ಕೂಡಿದ್ದು ಕಂಡುಬರುತ್ತದೆ. ಮಂಟಪದ ದ್ವಾರವು ಪಂಚಪಟ್ಟಿಕೆಯಿಂದ ಕೂಡಿದ್ದು ಮೇಲೆ ಲಲಾಟದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವಿದೆ. ಪಂಚಪಟ್ಟಿಕೆಯ ಕೆಳಗೆ ದ್ವಾರಪಾಲಕರನ್ನು ಕಂಡರಿಸಿದ್ದಾರೆ. ಈ ದೇವಾಲಯವು ಟಂಕಶಾಲೆಯಾಗಿತ್ತು ಎಂದು ತಿಯುತ್ತದೆ. ಮೇಲ್ಛಾವಣೀ ಮಣ್ಣಿನಿಂದ ಆವರಿಸಿಕೊಂಡಿದೆ. ಈ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಅದು ಸೂಡಿ ಗ್ರಾಮದ ಆಡಳಿತ ಉಪವಿಭಾಗವಾಗಿತ್ತು. ಆದ್ದರಿಂದ ನಾಣ್ಯಗಳನ್ನು ಟಂಕಿಸುವ ಸಾಧ್ಯತೆಗಳಿವೆ. ದೇವಾಲಯ ಇಂದು ದನದ ಕೊಟ್ಟಿಗೆಯಾಗಿದೆ.

ಜೋಡಿ ಕಳಸದ ದೇವಾಲಯ

ಸೂಡಿ ಗ್ರಾಮದ ಉತ್ತರ ಭಾಗದಲ್ಲಿ ದ್ವಿಕೂಟ ದೇವಾಲಯವಿದೆ. ಈ ದೇವಾಲಯ 'ಮರಳು ಶಿಲೆ'ಯಿಂದ ನಿರ್ಮಿಸಲಾಗಿದೆ. ಕ್ರಿ.ಶ.೧೦೧೦ ಶಾಸನದಲ್ಲಿ ಜೋಡ ಕಳಸ ದೇವಾಲಯ ಎಂದು ಉಲ್ಲೇಖಿಸಲಾಗಿದೆ.

ಈ ದೇವಾಲಯದ ಪೂರ್ವ ಗರ್ಭಗೃಹದ ಗೋಡೆ ಭಾಗದಲ್ಲಿ ಮೂರು ಕೋಷ್ಠಕಗಳಿದ್ದು, ಅವು ಯಾಳಿಗಳಿಂದ ಅಲಂಕೃತವಾಗಿದೆ. ಯಾಳಿ ಅಲಂಕಾರ ಮಾಧ್ಯ ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಉಬ್ಬು ಶಿಲ್ಪವಿದೆ. ಈ ಗರ್ಭಗೃಹದ ಲಿಂಗವು ನಕ್ಷತ್ರಕಾರವಾಗಿದ್ದು, ಅದ್ಭುತ ಕೆತ್ತನೆಯಿಂದ ಕೂಡಿದೆ. ಚಕ್ರದ ಅಂಚಿನಂತೆ ಕಾಣುವ ಲಿಂಗಪೀಠ ಪ್ರತ್ಯೇಕವಾಗಿ ಅದರ ಭಾಗಗಳನ್ನು ಜೋಡಿಸಲಾಗಿದೆ. ಕಲ್ಯಾಣ ಚಾಲುಕ್ಯ ರಚನೆಯಿಂದಾದ ಈ ವಿಶಿಷ್ಟ ಲಿಂಗವು ನಯವಾದ ರುದ್ರಪೀಠ, ಪಾಣಿ ಬಟ್ಟಲು ಕೆತ್ತನೆ ಹೊಂದಿದೆ. ಹಾಗೂ ಮೇಲೆ ಭುವನೇಶ್ವರಿಯು ಆಳವಾದ ಪುಷ್ಪ ಕೆತ್ತನೆಯಿಂದ ಕೂಡಿದೆ. ಬಾಗಿಲವಾಡವು ಪಂಚಶಾಖೆಯಿಂದ ಕೂಡಿದು ಲಲಾಟದಲ್ಲಿ ಗಜಲಕ್ಷ್ಮೀಯಿದೆ. ಮುಂಭಾಗದಲ್ಲಿ ತೆರೆದ ಅಂತರಾಳವಿದ್ದು, ಇದಕ್ಕೆ ಎರಡು ಬಿಡಿ ಕಂಬ ಜೋಡಿಸಲಾಗಿದೆ. ಅಷ್ಟ ಪಟ್ಟಿಕೆ ಕಂಬಗಳು ಬದಾಮಾಕೃತಿದಲ್ಲಿದ್ದು ಬೋಧಿಗೆಯನ್ನು ಹೊಂದಿದೆ. ಮೇಲ್ಭಾಗದಲ್ಲಿ ಯಾಳಿಯಾಕೃತಿ ಮಧ್ಯ ಭಾಗದಲ್ಲಿ ಶಿವನ ಉಬ್ಬು ಶಿಲ್ಪ ಕೆತ್ತಲಾಗಿದೆ. ನಾಲ್ಕು ಕೈಗಳನ್ನು ಹೊಂದಿದೆ. ತ್ರಿಶೂಲ, ಡಮರು ಹೊಂದಿದೆ. ಈ ಉಬ್ಬು ಶಿಲ್ಪ ಎಡ–ಬಲ ಭಾಗದಲ್ಲಿ ಗಣೇಶ, ಷಣ್ಮುಕ ಶಿಲ್ಪಗಳಿವೆ. ಷಣ್ಮುಕನು ಮಯೂರರುಡನಾಗಿರುವ ಹಾಗೆ ಕಂಡರಿಸಲಾಗಿದೆ. ಅಲಂಕೃತ ಆನೆಯ ಯಾಳಿಯನ್ನು ಹೊಂದಿದ್ದು, ಎರಡು ಕುಬ್ಬ ಶಿಲ್ಪವನ್ನು ಕೆತ್ತಲಾಗಿದೆ.

ಪಶ್ಚಿಮಾಭಿಮುಖ ಗರ್ಭಗೃಹದಲ್ಲಿ ಬರಿದಾಗಿದ್ದು, ಯಾವುದೇ ಶಿಲ್ಪಗಳಿಲ್ಲ ಒಳಭಾಗದಲ್ಲಿ ಗೋಡೆಯಲ್ಲಿ ಮೂರು ಕಡೆ ಕೋಷ್ಠಕಗಳನ್ನು ರಚಿಸಲಾಗಿದೆ. ಕೋಷ್ಟಕದ ಮೇಲ್ಬಾಗ ವ್ಯಾಳಿಯಿಂದ ಅಲಂಕೃತವಾಗಿ ಕೆತ್ತಲಾಗಿದೆ. ಅಲ್ಲದೆ ಇದೇ ಯಾಳಿ ಮಾಧ್ಯದಲ್ಲಿ ವಿಷ್ಣು ಶಿಲ್ಪಗಳನ್ನು ಉಬ್ಬು ಶಿಲ್ಪ ಕೆತ್ತಲಾಗಿದೆ. ಮೇಲೆ ಭುವನೇಶ್ವರಿಯ ಪುಷ್ಪಗಳಿಂದ ಅಲಂಕೃತವಾಗಿದೆ. ಬಾಗಿಲವಾಡವು ಪಂಚಪಟ್ಟಿಕೆಯಿಂದ ಕೂಡಿದೆ ಮೇಲೆ ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಮುಂಭಾಗದಲ್ಲಿ ತೆರೆದ ಅಂತರಾಳ ಭಾಗವಿದ್ದು ಇದಕ್ಕೆ ಎರಡು ಬಿಡಿ ಕಂಬ ಜೋಡಿಸಲಾಗಿದೆ. ಅಷ್ಟ ಪಟ್ಟಿಕೆ ಕಂಬಗಳು ಬಾದಾಮಾಕೃತ ಹೊಂದಿದೆ. ಬೋದಿಗೆಯನ್ನು ಹೊಂದಿದ್ದು ಎರಡು ಕಂಬ ಹೊಂದಿದ ಮೇಲ್ಭಾಗದಲ್ಲಿ ಸುಂದರ ಯಾಳಿ ಅಲಂಕಾರ ಬಿಡಿಸಲಾಗಿದ್ದು ಮಧ್ಯಭಾಗ ಸೂರ್ಯನ ಶಿಲ್ಪವನ್ನು ಕಂಡರಿಸಲಾಗಿದೆ. ಈ ಶಿಲ್ಪದ ಎಡ ಮತ್ತು ಬಲಭಾಗದ ಚಾಮರದಾರಣಿಯರ ಎರಡು ಉಬ್ಬು ಶಿಲ್ಪಗಳಿವೆ.

ಪಶ್ಚಿಮ ಗರ್ಭಗೃಹದ ಮುಂಭಾಗದಲ್ಲಿ ಪೂರ್ವಭಿಮುಖದ ಲಿಂಗಕ್ಕೆ ಮುಖಮಾಡಿ ಕುಳಿತಿರುವ ಸುಂದರವಾದ ನಂದಿ ಶಿಲ್ಪವಿದೆ. ಈ ನಂದಿ ಶಿಲ್ಪವು ಎತ್ತರವಾಗಿದ್ದು, ಅದರ ಕೊರಳಿಗೆ ಗಂಟೆಯಹಾರದಿಂದ ಶೃಂಗರಿಸಲಾಗಿದೆ.

ಎರಡು ಗರ್ಭಗೃಹಕ್ಕೆ ಹೊಂದಿಕೊಂಡ ವಿಶಾಲವಾದ ನವರಂಗವಿದ್ದು ಸುಮಾರ ಇಪ್ಪತ್ತು ಕಂಬಗಳನ್ನು ಹೊಂದಿದೆ, ಗಂಟೆಯಾಕಾರದ ಕಂಬಗಳು ಚಿಕ್ಕದಾಗಿದ್ದು ಬೋಧಿಗೆಗಳ ವೃತ್ತಕಾರ ಫಲಕಗಳು ಹಾಗೂ ಇತರ ಅಲಂಕಕಾರಣ ಪಟ್ಟಿಕೆ ಹೊಂದಿದೆ. ಎಲ್ಲಾ ಕಂಬಗಳು ಒಂದೆ

ರಚನಾ ಮಾದರಿ ಹೊಂದಿದ್ದು, ಕಂಬದ ಮೇಲೆ ವೃತ್ತಕಾರ ಎಲೆಯ ಚಿತ್ರ ಕಂಡರಿಸಲಾಗಿದೆ. ನವರಂಗ ಸುತ್ತಲು ಕಕ್ಷಾಸನ ಕಟ್ಟೆಯನ್ನು ಕಟ್ಟಲಾಗಿದೆ. ಈ ಕಕ್ಷಾಸನ ಕಟ್ಟೆಗೆ ಚೌಕಾಕಾರ ದುಂಡಾಕೃತಿ ಕೆತ್ತನೆಗಳಿವೆ. ಒಳ ಕಡಸನ ಕಟ್ಟೆಯು ಮಂಜೂರ ಅಳವಡಿಕೆ ಮಾಡಲಾಗಿದೆ. ಕಕ್ಷಾಸನ ಕಟ್ಟೆಯ ಹೊರ ಭಾಗ ಕುಂಭಪಂಜರ ಕಂಡರಿಸಲಾಗಿದೆ.

ದೇವಾಲಯವು ಎತ್ತರವಾದ ಕಟ್ಟೆ ಮೇಲೆ ಕಟ್ಟಲಾಗಿದೆ. ದೇವಾಲಯವು ಉಪಾನ, ಜಗತಿ, ತ್ರಿಪಟ್ಟಕುಮುದ,ಗಳ ಕಪೋತ, ಭಾಗ ಹೊಂದಿದ್ದು. ಅಧಿಷ್ಠಾನ ಹೊಂದಿದೆ. ದೇವಾಲಯ ಹೊರಗೋಡೆ ಸಾಂದರ ಮಾದರಿಯಾಗಿದ್ದು ಹೊರ ಗೋಡೆಯ ಶಿಖರ ಪಟ್ಟಿಕೆ ಅರ್ಧಮಂಟಪ ರಚನೆ ಮಾಡಲಾಗಿ ವೇಸರ ಶೈಲಿಯ ಐದು ತಲಗಳನ್ನು ಹೊಂದಿದೆ. ಮೇಲ್ಭಾಗದ ಸ್ತೂಪಿ ಮತ್ತು ಕಳಸದ ಭಾಗಗಳು ಹೊಂದಿದೆ.

ಈ ದೇವಾಲಯಕ್ಕೆ ಉತ್ತರ ಮತ್ತು ದಕ್ಷಿಣ ಭಾಗಕ್ಕೆ ಪ್ರವೇಶ ದ್ವಾರವನ್ನು ಹೊಂದಿದೆ. ಈ ದೇವಾಲಯದ ವಿವಿಧ ಭಾಗಗಳನ್ನು ಈ ಕೆಳಗೆ ಅಳವಡಿಸಿದ ಛಾಯಾಚಿತ್ರಗಳಲ್ಲಿ ಕಾಣಬಹುದಾಗಿದೆ.



ಜೋಡಿಕಳಶ ದೇವಾಲಯದ ವಿಹಂಗಮ ನೋಟ



ಜೋಡಿಕಳಶ ದೇವಾಲಯದ ಹೊರಗೋಡೆ ಮತ್ತು ಅಧಿಷ್ಠಾನ

ಬಿಡಿಶಿಲ್ಪಗಳು

ಕುಬೇರನ ಶಿಲ್ಪ:

ಈ ಇಂದ್ರನ ಶಿಲ್ಪವು ಊರಿನ ಒಳಗೆ ಮಹಾಗಣಪತಿ ದೇವಾಲಯದ ಹೊರಗಡೆ ಇಡಲಾಗಿದೆ. ಇದು ಸಹಜವಾಗಿ ಕುಳಿತಿರುವ ಇಂದ್ರನ ಶಿಲ್ಪ ಚತುರ್ಭುಜ ಹೊಂದಿದು ಬಗ್ನವಾಗಿದೆ. ನೀಳವಾದ ಕೀರಿಟ ಹೊಂದಿದ್ದು ಕಿವಿಯಲ್ಲಿ ಓಲೆ, ಕೈಯಲ್ಲಿ ಕಮಲ–ಜಪಮಾಲೆಯನ್ನು ಕಂಡರಿಸಲಾಗಿದೆ. ಕೆಳಗೆ ಆನೆ ಲಾಂಚನ ಹೊಂದಿದು ನೀಲಿ ಬಳಪ ಕಪ್ಪಚಾಯೆಯ ಶಿಲೆಯಿಂದ ಕೂಡಿದೆ.

ಲಿಂಗಗಳು:

ಊರ ಹೊರಗೆ ರಸದ ಬಾವಿ ಹತ್ತಿರ ಕೆಲವು ಶಿಲ್ಪಗಳಿವೆ ಅದರಲ್ಲಿ ಎರಡು ಲಿಂಗಗಳಿವೆ. ಒಂದು ಲಿಂಗವು ಎತ್ತರವಾದ ಜಗಲಿಯ ಮೇಲೆ ಸ್ಥಾಪಿಸಲಾಗಿದೆ. ಲಿಂಗವು ನೀಳವಾಗಿ ಉದ್ದವಾಗಿದೆ.

ಇನ್ನೊಂದು ಲಿಂಗವು ಎತ್ತರವಾದ ಕಟ್ಟೆಯ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅದಕ್ಕೆ ಮಂಟಪದಿಂದ ಅಲಂಕರಿಸಲಾಗಿದೆ.

ದ್ವಾರಪಾಲಕ ಶಿಲ್ಪ:

ಗಣೇಶ ದೇವಾಲಯದ ಎದುರುಗಡೆ ಎರಡು ಶಿಲ್ಪಗಳಿದ್ದು ಅದರಲ್ಲಿ ಒಂದು ದ್ವಾರಪಾಲಕ ಮತ್ತು ಶಿವನ ಶಿಲ್ಪವಿದೆ. ದ್ವಾರಪಾಲಕನ ಶಿಲ್ಪವು ನೀಳವಾದ ಕಿರೀಟವನ್ನು ಹೊಂದಿದ್ದು, ಕಿವಿಯಲ್ಲಿ ಓಲೆ, ಹಾರ ಧರಿಸಿರುವದು ಕಂಡು ಬರುತ್ತದೆ. ಈ ದ್ವಾರಪಾಲಕನಿಗೆ ಕೋರೆ ಹಲ್ಲಿದ್ದು ಕೈಯಲ್ಲಿ ದಂಡ, ಡಮರು ಹಿಡಿದು ಸಮಭಂಗಿಯಲ್ಲಿ ನಿಂತಿದೆ.

ಶಿವನ ಶಿಲ್ಪ:

ಗಣೇಶ ದೇವಾಲಯದ ಎದುರು ಇರುವ ಇನ್ನೊಂದು ಶಿಲ್ಪ ಶಿವನ ಶಿಲ್ಪವಾಗಿದ್ದು ಅದು ತ್ರಿಭಂಗಿಯಲ್ಲಿ ನಿಂತಿರುವುದು ಕಂಡುಬರುತ್ತದೆ. ನೀಳವಾದ ಜಟಾಯುವನ್ನು ಹೊಂದಿದ್ದು ಕಿವಿಯಲ್ಲಿ ಓಲೆ, ಕೊರಳಲ್ಲಿ ಹಾರ, ಕೈಯಲ್ಲಿ ತ್ರಿಶೂಲ, ಡಮರು ಹೊಂದಿದೆ.

ಬಾವಿ:

ಊರಿನ ಮಧ್ಯದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಬಾವಿಯಿದೆ. ಈ ಬಾವಿಯ ಹಾಳಾಗಿದೆ. ಆ ಬಾವಿಯ ಮೆಟ್ಟಿಲಿನ ಗೋಡೆಯಲ್ಲಿ ಗಣೇಶನ ಶಿಲ್ಪವಿದೆ.

ಗಣೇಶ ಶಿಲ್ಪ:

ರಸದ ಬಾವಿಯ ಎಡಭಾಗದಲ್ಲಿ ಗಣೇಶನ ದೇವಾಲಯವಿದೆ. ಈ ಗಣೇಶನ ವಿಗ್ರಹವು ಮರಳು ಶಿಲೆಯಿಂದ ಇದನ್ನು ನಿರ್ಮಿಸಿದ್ದಾರೆ. ಏಕ ಶಿಲೆಯ ಬೃಹದಾಕಾರ ವಿಗ್ರಹವು ಹಂಪೆಯ ಕಡ್ಲೆಕಾಳು ಗಣೇಶನ ವಿಗ್ರಹವನ್ನು ಹೋಲುತ್ತದೆ. ವಿಗ್ರಹದ ಸುತ್ತಲೂ ಆರು ಕಂಬಗಳಿದ್ದು ಅದರಲ್ಲಿ ಕುಂಭಾಕೃತಿಯನ್ನು ಕೆತ್ತಲಾಗಿದೆ. ಗರ್ಭಗೃಹವನ್ನು ಹೊಂದಿದ್ದು ಎತ್ತರವಾದ ಕಟ್ಟೆಯ ಮೇಲೆ ಕಟ್ಟಲಾಗಿದೆ.

ರಸದ ಬಾವಿ

ಇದು ಸೂಡಿ ಗ್ರಾಮದ ಬಸ್ ನಿಲ್ದಾಣದ ಹತ್ತಿರವಿರುವ ರಸದ ಬಾವಿ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಇದರ ವಾಸ್ತುಶಿಲ್ಪ ಮಹತ್ವಪೂರ್ಣವಾಗಿದೆ. ಇದರ ಪ್ರವೇಶಕ್ಕೆ ಪಶ್ಚಿಮಾಭಿಮುಖವಾಗಿ ಮಹಾದ್ವಾರವಿದೆ. ಗೋಡೆಯಲ್ಲಿ ಸುಂದರವಾಗಿ ಕೋಷ್ಟಕಗಳನ್ನು ಕಂಡರಿಸಿದ್ದಾರೆ. ಅದರ ಕೆಳಗೆ ಅಧಿಷ್ಠಾನ, ಉಪಾನ, ಜಗತಿ, ಗಳ ತ್ರಿಪಟ್ಟಕುಮುದ, ಕಪೋತ ಭಾಗಗಳನ್ನು ಕಾಣುತ್ತೇವೆ.

ಈ ಬಾವಿಯು ಆಳವಾಗಿದ್ದು ಸುತ್ತಲೂ ಮೆಟ್ಟಿಲುಗಳಿವೆ. ಇಲ್ಲಿ ನೀರಿನ ಸೆಲೆಯಿರುವುದರಿಂದ ಇನ್ನೂವರೆಗೆ ನೀರು ಇದೆ. ಮೊದಲು ಇಲ್ಲಿಯ ನೀರನ್ನು ಮಲ್ಲಿಕಾರ್ಜುನ, ಜೋಡ ಕಳಸ ಮುಂತಾದ ದೇವಾಲಯಗಳ ಪೂಜೆಗೆ ಈ ನೀರನ್ನು ಬಳಸುತ್ತಿದ್ದರು.



ರಸದಬಾವಿ ಆವರಣದಲ್ಲಿರುವ ಲಿಂಗ



ರಸದಬಾವಿ ಆವರಣದಲ್ಲಿರುವ ನಂದಿಮಂಟಪ



ರಸದಬಾವಿ ಆವರಣದಲ್ಲಿರುವ ಶಾಸನ ಫಲಕ ಮತ್ತು ಶಿಲ್ಪ



ಗ್ರಾಮದಲ್ಲಿರುವ ಕುಬೇರನ ಶಿಲ್ಪ



ವಿಕ್ರಮಪುರ (ಅರಸಿಬೀದಿ)ದ ನೆಲೆ

ಏಕಕೂಟ ಜೈನ ಬಸದಿ

ಅರಸೀಬೀದಿ ಇದು ಪುರಾತನ ರಾಜಧಾನಿ ವಿಕ್ರಮಪುರ ಅದು ಇಂದು ಬಾಗಲಕೋಟೆ ಜಿಲ್ಲೆ ಹುನುಗುಂದ ತಾಲ್ಲೂಕಿನಲ್ಲಿದೆ. ಬದಾಮಿಯಿಂದ ೩೫ ಕಿ.ಮೀ.ದೂರದಲ್ಲಿದೆ. ಕ್ರಿ.ಶ. ೧೦೪೭ರ ಶಾಸನದಲ್ಲಿ ಅಕ್ಕಾದೇವಿ ರಾಜಧಾನಿ ವಿಕ್ರಮಪುರದ ಗುಣದ ಬೆಡಂಗಿ ಜಿ ನಾಲಯಕ್ಕೆ ಜೀರ್ಣೋದ್ಧಾರಕ್ಕೆ ದಾನ ಕೊಟ್ಟಿರುವಳು. ಕ್ರಿ.ಶ.೧೦೫೩ರ ಶಾಸನದಲ್ಲಿ ಅಕ್ಕಾದೇವಿಯು ವಿಕ್ರಮಪುರಿಯ ನಂದಿಯಣ್ಣ ಷಡಂಗಿ ಭಟ್ಟೋಪಾಧ್ಯಾಯ ಹಾಗೂ ಬ್ರಾಹ್ಮಣರಿಗೆ ದಾನ ಕೊಟ್ಟಿರುವುದು ಶಾಸನದಿಂದ ತಿಳಿಯುತ್ತದೆ.

ವಿಕ್ರಮಪುರ ಅಕ್ಕಾದೇವಿಯ ರಾಜಧಾನಿ 'ಅರಸಿಬೀದಿ' ಎಂದು ಕರೆಯುತ್ತಿದ್ದರು. ಈ ಸ್ಥಳದಲ್ಲಿ ಜನರು ವಾಸವಾಗಿರುತ್ತಿದ್ದರು ಎನ್ನುವುದಕ್ಕೆ ಈ ದಿಬ್ಬ ಅಥವಾ ದಿನ್ನೆಯಲ್ಲಿ ವಾಸಸ್ಥಳ ಇರುವುದರ ಕುರುಹು ಕಂಡುಬರುತ್ತದೆ. ಈ ದೇವಾಲಯ ಎತ್ತರವಾದ ದಿಬ್ಬದ ಮೇಲೆ ನಿರ್ಮಾಣವಾಗಿದೆ. ಈ ಏಕಕೂಟ ದೇವಾಲಯದ ಅಧಿಷ್ಠಾನ, ಉಪಾನ, ಜಗತಿ, ಗಳ, ತ್ರಿಪಟ್ಟ ಕುಮುದ ಕಪೋತ ಭಾಗಗಳನ್ನು ಅಧಿಷ್ಠಾನ ಹೆಚ್ಚಿನ ಭಾಗ ಮಣ್ಣಿನಲ್ಲಿ ಹೂತುಹೋಗಿದೆ.

ಗರ್ಭಗೃಹದ ಅಂತರಾಳ ವಿಶಾಲವಾಗಿದ್ದು ಒಲಗೋಡೆಗೆ ಮೂರು ಕೋಷ್ಠಕಗಳಿವೆ. ಯಾಳಿಯಿಂದ ಅಲಂಕೃತವಾದ ಎಲ್ಲ ಕೋಷ್ಠಕಗಳ ಮಧ್ಯದಲ್ಲಿ ಜೈನ ತೀರ್ಥಂಕರ ಉಬ್ಬು ಶಿಲ್ಪ ಕೆತ್ತಲಾಗಿದೆ. ಮೂಲ ಶಿಲ್ಪದ ಅವಶೇಷ ಕಂಡುಬರುವುದಿಲ್ಲ.



ಬಾಗಿಲವಾಡವು ಪಂಚಪಟ್ಟಿಕೆಯಿಂದ ಕೂಡಿದೆ. ಮುಂಭಾಗದ ಅಂತರಾಳ ಬರಿದಾಗಿದೆ. ಅದರ ಬಾಗಿಲವಾಡವು ಜಾಲಾಂದ್ರವನ್ನು ಹೊಂದಿದೆ. ಮೇಲೆ ಲಲಾಟದಲ್ಲಿ ಜಿನಬಿಂಬವಿದೆ. ಮೇಲೆ ಯಾಳಿಯ ಮಧ್ಯದಲ್ಲಿ ಕುಳಿತ ಜಿನಬಿಂಬ ಸುತ್ತಲೂ ಮೂರ್ತಿ ಶಿಲ್ಪವಿದೆ. ಒಂದು ಕುಳಿತ ಮೂರ್ತಿ ಎರಡು ನಿಂತ ಮೂರ್ತಿ ಜಿನಬಿಂಬಗಳಿವೆ. ಮತ್ತು ಎಡ-ಬಲಕ್ಕೆ ನಿಂತ ಜೈನ ಶಿಲ್ಪವಿದೆ.

ಮುಂದೆ ನವರಂಗದಲ್ಲಿ ನಾಲ್ಕು ಕಂಬಗಳು ಗಂಟೆಯಾಕಾರವಾಗಿದ್ದು, ಎಡಗಡೆ ಕಂಬದ ಮೇಲೆ ಶಾಸನ ಲಿಪಿ ಕಂಡುಬರುತ್ತದೆ. ಮೇಲೆ ಭುವನೇಶ್ವರಿ ಪುಷ್ಪಾಲಂಕೃತವಾಗಿದೆ. ಹೊರಭಾಗದ ಗೋಡೆ ಅಲಂಕಾರದಿಂದ ಕೂಡಿದ್ದು ಗೋಡೆ ಭಾಗದ ಶಿಖರ ಸಹಿತವಾಗಿದೆ. ಹೊರಗೋಡೆಯಲ್ಲಿ ಎರಡು ಪಟ್ಟಿಕೆ ಮಧ್ಯಭಾಗವು ಆಳವಾಗಿ ಅದರಲ್ಲಿ ಶಿಖರ ಸಹಿತ ಅರ್ಧಮಂಟಪ ರಚನೆ ಕಾಣುತ್ತೇವೆ. ಇಲ್ಲಿ ಗಮನಿಸುವ ಅಂಶ ಹೊರಗೋಡೆ ರಚನೆಯು ಪ್ರಾರಂಭದ ಕಲ್ಯಾಣ ಚಾಲುಕ್ಯರ ರಚನಾ ವಾಸ್ತು ಶೈಲಿಯನ್ನು ಹೊಂದಿದೆ.




ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿ






ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿಯ ಹೊರಗೋಡೆ ಭಾಗ



ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿಯ ಲಲಾಟ







ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿಯ ಭುವನೇಶ್ವರಿ



ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿಯ ಕಂಬ



ಅರಸಿಬೀದಿಯ (ವಿಕ್ರಮಪುರ) ಏಕಕೂಟ ಬಸದಿಯ ಮುಂಭಾಗದಲ್ಲಿ ಬಿದ್ದಿರುವ ಶಾಸನ

ತ್ರಿಕೂಟ ಜೈನ ಬಸದಿ

ತ್ರಿಕೂಟ ಬಸದಿಯು ಅಧಿಷ್ಠಾನ, ಉಪಾನ, ಜಗತಿ, ಗಳ, ತ್ರಿಪಟ್ಟ ಕುಮುದ, ಕಪೋತ ಭಾಗಗಳನ್ನು ಹೊಂದಿದೆ. ಅಧಿಷ್ಠಾನದ ಭಾಗ ಮಣ್ಣಿನಲ್ಲಿ ಹೂತು ಹೋಗಿದ್ದು ಅಲ್ಲದೇ ದೇವಾಲಯದ ಸುತ್ತಮುತ್ತಲೂ ಮುಳ್ಳು ಕಂಟಿಗಳಿಂದ ಹಬ್ಬಿರುವುದರಿಂದ ಯಾವುದೇ ವಾಸ್ತುಶಿಲ್ಪ ಲಕ್ಷಣಗಳು ಕಂಡುಬರುವುದಿಲ್ಲ.

ಮೂರು ಗರ್ಭಗೃಹಗಳು ಶಿಥಿಲವಾಗಿದ್ದು, ಒಳಭಾಗದಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಗರ್ಭಗೃಹದ ಬಾಗಿಲವಾಡದಲ್ಲಿ ಪಂಚಪಟ್ಟಿಕೆ ಒಳಗೊಂಡಿದೆ. ಅವುಗಳಿಗೆ ಹೊಂದಿಕೊಂಡು ನವರಂಗವಿದೆ. ನವರಂಗದ ಕಂಬಗಳು ಚೌಕಕಾರವಾಗಿದ್ದು ಕಂಬಗಳ ಮಧ್ಯ ವೃತ್ತಾಕಾರದ ಪಟ್ಟಿಕೆ, ಫಲಕ, ಬೋಧಿಗೆಗಳನ್ನು ಹೊಂದಿದೆ. ಅಂತರಾಳದ ಇಕ್ಕೆಲುಗಳಲ್ಲಿ ಜಾಲಾಂಧ್ರ ಅಳವಡಿಸಲಾಗಿದೆ. ನವರಂಗದ ಬಾಗಿಲವಾಡವು ಪಂಚಪಟ್ಟಿಕೆಯಿಂದ ಹೊಂದಿದ್ದು ಅವುಗಳಿಗೆ ಪುಷ್ಪ, ಬಳ್ಳಿಗಳಿಂದ ಅಲಂಕೃತಗೊಂಡಿದೆ.

ದೇವಾಲಯದ ಮುಖ ಮಂಟಪದ ಕಂಬಗಳು ವೃತ್ತಾಕಾರ ಗಂಟಿಲಿಯಾಕಾರದ ಮಾದರಿಯಲ್ಲಿದೆ. ಬುಡದಲ್ಲಿ ಚೌಕಾಕಾರ, ತಟ್ಟೆಯಾಕಾರ ಮತ್ತು ಚೌಕಾಕಾರದ ಬೋಧಿಗೆ ಹೊಂದಿದೆ.



ಈ ಮಂಟಪದಲ್ಲಿ ಕಕ್ಷಾಸನವಿದ್ದು ಮೇಲ್ಛಾವಣಿ ನಿರ್ಮಿಸಲಾಗಿದೆ. ಭುವನೇಶ್ವರಿಯು ಪುಷ್ಪಾಲಂಕಾರದಿಂದ ಕೂಡಿದೆ. ದೇವಾಲಯದ ಕಂಬಗಳು ಕಲ್ಯಾಣ ಚಾಲುಕ್ಯರ ಪ್ರಾರಂಭದ ವಾಸ್ತುಶಿಲ್ಪದ ಅಧ್ಯಯನದ ಮಾದರಿಯ ಕಂಬಗಳಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾದ ಹೆಚ್ಚಿನ ದೇವಾಲಯದ ಕಂಬ ಗಿಡ್ಡನೇ ಮಾದರಿಯ ಕಂಬಗಳು ತ್ರಿಕೋಣಾಕೃತಿ, ವೃತ್ತಾಕೃತಿಗಳು ಈ ದೇವಾಲಯಗಳಲ್ಲಿ ಮುಂದುವರಿದಿರುವುದು ವಿಶೇಷವಾಗಿದೆ.

ಈ ದೇವಾಲಯವನ್ನು ಬಹುಶಃ ಎತ್ತರದ ಸ್ಥಳದಲ್ಲಿ ನಿರ್ಮಿಸಿದ್ದರು. ನೈಸರ್ಗಿಕ ಕಾರಣದಿಂದ ದೇವಾಲಯ ಅಧಿಷ್ಠಾನ ಭಾಗ ಮಣ್ಣಿನಲ್ಲಿ ಹೂತುಹೋಗಿದೆ. ಅತ್ಯಂತ ಸರಳವಾದ ಹೊರಗೋಡೆ ಕಾಣುತ್ತವೆ. ಆದರೆ ಸುತ್ತಲೂ ಗಿಡಗಂಟಿ ಬೆಳೆದಿರುವುದರಿಂದ ಹೊರಗೋಡೆ ಭಾಗ ತಿಳಿಯುವುದು ಕಷ್ಟಸಾಧ್ಯ. ತ್ರಿಕೂಟ ರಚನೆಯ ಈ ದೇವಾಲಯಕ್ಕೆ ಮೂರು ಶಿಖರಗಳಿದ್ದು ಅವು ಸಹ ಶಿಥಿಲವಾಗಿವೆ. ಕಲ್ಯಾಣ ಚಾಲುಕ್ಯರ ಶಿಖರ ಮಾದರಿ ಈ ದೇವಾಲಯಕ್ಕೆ ಇದ್ದಿರದೆಂದು ಅಭಿಪ್ರಾಯಿಸಬಹುದು. ದೇವಾಲಯದ ಬಾಗಿಲವಾಡದ ಲಲಾಟದಲ್ಲಿ ಪದ್ಮಾಸನದ ಭಂಗಿ ಕುಳಿತ ಜೈನ ತೀರ್ಥಂಕರ ಉಬ್ಬು ಶಿಲ್ಪವಿದೆ. ಇದು ಬಹುಶಃ ಮಹಾವೀರನದ್ದಾಗಿರಬಹುದು.



ಅರಸಿಬೀದಿಯ (ವಿಕ್ರಮಪುರ) ತ್ರಿಕೂಟ ಬಸದಿಯ ಬಾಗಿಲವಾಡ



ಅರಸಿಬೀದಿಯ (ವಿಕ್ರಮಪುರ) ತ್ರಿಕೂಟ ಬಸದಿಯ ನವರಂಗದಲ್ಲಿರುವ ಕಂಬ



ಅರಸಿಬೀದಿಯ (ವಿಕ್ರಮಪುರ) ತ್ರಿಕೂಟ ಬಸದಿಯ ಹೊರಮಂಟಪದಲ್ಲಿರುವ ಕಂಬಗಳು







ಅರಸಿಬೀದಿಯ (ವಿಕ್ರಮಪುರ) ತ್ರಿಕೂಟ ಬಸದಿಯ ಹೊರಮಂಟಪದಲ್ಲಿರುವ ಕಂಬಗಳು

ಕೊರ್ಲಹಳ್ಳಿ ಈಶ್ವರ ದೇವಾಲಯ

ಈಶ್ವರ ದೇವಾಲಯ ಹೆಚ್ಚು ದುರಸ್ತಿಯಲ್ಲಿದ್ದು ಹಿಂಭಾಗದ ಗೋಡೆಯು ಅಲ್ಲಲ್ಲಿ ಬಿದ್ದುಹೋಗಿದೆ. ದೇವಾಲಯವನ್ನು ಗಮನಿಸಿದರೆ ಅದೊಂದು ತ್ರಿಕೂಟ ಹಾಗೂ ಅದರಲ್ಲೂ ತ್ರೈಪುರುಷ ದೇವಾಲಯ ಇದ್ದರಬಹುದೆಂದು ಭಾಸವಾಗುತ್ತದೆ. ಆದರೆ ಮುಖ್ಯ ಗರ್ಭಗೃಹ ಹಾಗೂ ಅದರ ಬಲಭಾಗ ಅಂದರೆ ದಕ್ಷಿಣಭಾಗ ಮುಖವಾದ ಇನ್ನೊಂದು ಗರ್ಭಗೃಹ ಮಾತ್ರ ಉಳಿದಿದೆ. ಉತ್ತರಾಭಿಮುಖವಾಗಿದ್ದು ಮತ್ತೊಂದು ಗರ್ಭಗೃಹ ಸಂಪೂರ್ಣವಾಗಿ ನಶಿಸಿಹೋಗಿದೆ. ಈಶ್ವರ ದೇವಾಲಯ ಬಿದ್ದುಹೋಗಿರಲು ಬಹುಮುಖ್ಯ ಕಾರಣವೆಂದರೆ ಪಕ್ಕದಲ್ಲಿಯೇ ವೇಗವಾಗಿ ಹರಿಯುತ್ತಿರುವ ತುಂಗಭದ್ರಾ ನದಿ, ದೇವಾಲಯದ ಹಿಂಭಾಗದ ಗೋಡೆಗೆಡ ನೀರು ಬಡಿದುಕೊಂಡು ಸಾಗುತ್ತದೆ. (ದಕ್ಷಿಣಾಭಿಮುಖ) ಬಲಭಾಗದಲ್ಲಿರುವ ಗರ್ಭಗೃಹದಲ್ಲಿ ಸೂರ್ಯನ ಶಿಲ್ಪವನ್ನು ಇಡಲಾಗಿದೆ. ಗರ್ಭಗೃಹವು ಕೂಡ ಹೆಚ್ಚಿನ ದುಸ್ತಿಕಾರ್ಯಗಳಿಗೆ ಒಳಗಾಗಿದೆ. ಶಿಖರಭಾಗವು ಬಿದ್ದುಹೋಗಿದ್ದು ಮೇಲ್ಛಾವಣೆಯನ್ನು ಮಣ್ಣಿನಿಂದ ಬಳಿದಿದ್ದಾರೆ. ಅಲ್ಲದೇ ಈ ಗರ್ಭಗೃಹಕ್ಕೆ ಸಂಬಂಧಿಸಿದ ಅವಶೇಷಗಳು ಮಣ್ಣಿನಲ್ಲಿ ಹೂತುಹೋಗಿವೆ. ತ್ರೈಪುರುಷ ದೇವಾಲಯದ ಅಂಶವೆಂದು ಪರಿಗಣಿಸಲ್ಪಡುವ ಸೂರ್ಯನ ಶಿಲ್ಪವಿದೆ. ಆದ್ದರಿಂದ ಈ ದೇವಾಲಯ ತ್ರಿಕೂಟ ರಚನೆರಯಾಗಿರುವುದರ ಜೊತೆಗೆ ತ್ರೈಪುರುಷ ದೇವಾಲಯ ಲಕ್ಷಣಗಳನ್ನು



ಹೊಂದಿತ್ತೆಂದು ಅಭಿಪ್ರಾಯಪಡಬಹುದು. ಎಡಭಾಗದಲ್ಲಿದ್ದ (ಉತ್ತರಾಭಿಮುಖ) ಇನ್ನೊಂದು ಗರ್ಭಗೃಹವು ಸಂಪೂರ್ಣವಾಗಿ ಬಿದ್ದುಹೋಗಿದ್ದು ಗರ್ಭಗೃಹ, ಅಂತರಾಳ ಹಾಗೂ ನಂದಿಶಿಲ್ಪವಿದೆ. ಗರ್ಭಗೃಹದ ಬಾಗಿಲವಾಡವು ಸರಳ ರಚನೆಯಾಗಿದ್ದು ಬಾಗಿಲುವಾಡದ ಮೇಲ್ಭಾಗವು ಮುಂಚಾಚಿದ್ದು ಅದರಲ್ಲಿ ಅಲಂಕರಿಸಲಾಗಿದೆ. ಲಲಾಟದಲ್ಲಿ ಪುಷ್ಪಾಲಂಕಾರ ಮಾಡಿದ್ದಾರೆ. ಲಲಾಟದ ಮೇಲ್ಭಾಗದಲ್ಲಿ ಕೀರ್ತಿಮುಖ ಉಬ್ಬುಶಿಲ್ಪಗಳನ್ನು ಕಂಡರಿಸಲಾಗಿದ್ದು, ಅಲ್ಲದೇ ಔತಕೀಯ ದ್ರಾವಿಡ ಮಾದರಿಯ ಶಿಖರ ಪಟ್ಟಿಕೆಗಳನ್ನು ನಿರ್ಮಿಸಲಾಗಿದೆ.

ವಿಶಾಲವಾಗಿದ್ದು ನವರಂಗದ ಅರ್ಧಭಾಗವು ಬಿದ್ದಿರುವುದರಿಂದ ಅದನ್ನು ಚಿಕ್ಕಮಂಟಪವನ್ನಾಗಿ ಮಾರ್ಪಡಿಸಿ ಅದಕ್ಕೆ ಕಬ್ಬಿಣದ ಗೇಟನ್ನು ಅಳವಡಿಸಲಾಗಿದೆ. ನವರಂಗದಲ್ಲಿ ಈಗ ಉಳಿದಿರುವ ಕಂಬಗಳು ಚೌಕಾಕಾರವು ಕಂಬದ ದಂಡೆ ಭಾಗದಲ್ಲಿ ವೃತ್ತಾಕಾರದ ಬಳ್ಳಿ ಹಾಗೂ ಮಣಿಸರದ ಅಲಂಕಾರ ಮಾಡಲಾಗಿದೆ. ತಟ್ಟೆಯಾಕಾರದ ಫಲಕ ಹಾಗೂ ಬೋಧಿಗೆಯನ್ನು ಕಂಬಗಳು ಒಳಗೊಂಡಿವೆ. ಇನ್ನೆರಡು ದುಂಡಾಕಾರದ ಕಂಬಗಳು ಈಶ್ವರ ದೇವಾಲಯದ ಸಮೀಪದಲ್ಲಿರುವ ದುರುಗಮ್ಮನ ಗುಡಿಯ ಮುಂಭಾಗದಲ್ಲಿದೆ. ಮುರಿದುಹೋದ ಈ ಕಂಬಗಳು ಬಹುಶಃ ಈಶ್ವರ ದೇವಾಲಯಕ್ಕೆ ಸಂಬಂಧಿಸಿದವು ಎಂದು ಅಭಿಪ್ರಾಯಪಡಬಹುದು. ಅಲ್ಲದೇ ಇಲ್ಲಿ ಕೆಲವು ಭಗ್ನಾವಶೇಷಗಳನ್ನು ಸಹ ಇಡಲಾಗಿದೆ.

ದೇವಾಲಯದ ರಚನೆಯು ಬೃಹದಾಕಾರದ ಶಿಲಾಬಂಡೆಗಳಿಂದ ನಿರ್ಮಾಣವಾಗಿರುವಂಥದ್ದು. ಉಸುಕು ಕಲ್ಲಿನಲ್ಲಿ ಕಟ್ಟಲಾಗಿರುವ ದೇವಾಲಯಕ್ಕೆ ನಿರಾಲಂಕರಣೆಯ ಅಧಿಷ್ಠಾನವಿದೆ. ಹೊರಗೋಡೆ ಹೆಚ್ಚಿನಾಂಶ ಬಿದ್ದುಹೋಗಿದ್ದು ಅವಶೇಷಗಳು ಮಣ್ಣಿನಲ್ಲಿ ಹೂತುಹೋಗಿವೆ. ದೇವಾಲಯದ ಶಿಖರ ಭಾಗವು ಬಿದ್ದುಹೋಗಿವೆ.

ಈ ದೇವಾಲಯದ ಸಮೀಪದಲ್ಲಿ ನಿರ್ಮಾಣವಾಗಿರುವ ಸೇತುವೆ ಬಳ್ಳಾರಿ ಹಾಗೂ ಗದಗ ಜಿಲ್ಲೆಗೆ ಸಂಪರ್ಕವನ್ನು ಕಲ್ಪಿಸುತ್ತದೆ. ಆಚೆ ದಂಡೆಯ ಮೇಲೆ ಮದಲಗಟ್ಟಿ ಆಂಜನೇಯನ ದೇವಾಲಯವಿದೆ. ಈ ಸ್ಥಳವು ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿತ್ತು.

ಕ್ರಿ.ಶ. ೧೦೫೦ರ ತೇದಿವುಳ್ಳ ಶಾಸನವೊಂದು ನದಿಯ ದಂಡೆಯಲ್ಲಿ ಕಂಡುಬಂದಿದ್ದು, ಅದು ಪ್ರಕಟಗೊಂಡಿದೆ. (ಧಾ.ಜಿ.ಕಾ.ಪೂ.ಸಂ.ರೋ.೧೦, ಪುಟ, ೪೦, SII, XI, PKI NO.86) ಕಲ್ಯಾಣ ಚಾಲುಕ್ಯ ಒಂದನೆಯ ಸೋಮೇಶ್ವರನ ಕಾಲಕ್ಕೆ ಸಂಬಂಧಿಸಿದ ಈ ಶಾಸನದಲ್ಲಿ ಅರಸೀಬೀದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಅರಸಿ ಅಕ್ಕಾದೇವಿಯು ದಾನವನ್ನು ನೀಡಿರುವ ಉಲ್ಲೇಕವಿದೆ. ಮುಂಡರಗಿ (ಮಾಸವಾಡಿ-೧೪೦, ಆಡಳಿತ ವಿಭಾಗ) ಪ್ರದೇಶವು ಅರಸಿ ಅಕ್ಕಾದೇವಿಯ

ಆಳ್ವಿಕೆಗೆ ಒಳಪಟ್ಟಿತ್ತು. ಈಕೆಯ ಸಾಮಂತ ಅಜ್ಜರಸನು ಕಾಳಮುಖ ಮಠದ ಸನ್ಯಾಸಿನಿ ಗಂಗಿಕಬ್ಬೆಗೆ ದಾನ ಕೊಟ್ಟಿರುವ ಮಾಹಿತಿ ಇದೆ. ಶಾಸನದಲ್ಲಿ ಕೊರಲಹಳ್ಳಿಯನ್ನು ಕೋರ್ಲಹಳ್ಳಿಯೆಂದು ಕರೆಯಲಾಗಿದೆ.

ಕ್ರಿ.ಶ. ೧೩೭೯ರ ತಾಮ್ರಪಟದ ಶಾಸನ ಸಹ ಕೋರ್ಲಲಹಳ್ಳಿಯ ಬಗ್ಗೆ ವಿವರ ನೀಡುತ್ತದೆ. ಡಂಬಳವನ್ನೊಳಗೊಂಡು ಸುತ್ತಲಿನ ಸುಮಾರು ೬೦ ಗ್ರಾಮಗಳು ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದವು. ಅಲ್ಲದೇ ಅದೇ ಕಾಲಕ್ಕೆ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿ ಸಂಪರ್ಕ ಕಲ್ಪಿಸಲಾಗಿತ್ತು ಎಂಬ ಪ್ರಮುಖ ಸಂಗತಿ ತಿಳಿದುಬರುತ್ತದೆ. ವಿಜಯನಗರ ಆಡಳಿತದ ಮುಖ್ಯ ಪ್ರದೇಶದ ಆಚೆಗೆ ರಾಜ್ಯ ಸಂಪರ್ಕ ಸಾಧಿಸುವ ಮೊದಲ ಕಟ್ಟೆ ಅಥವಾ ಮದಗಟ್ಟೆ ಈ ಸ್ಥಳವಾಗಿತ್ತೆಂಬುದು ಬಹಳ ಮುಖ್ಯವಾದ ವಿಚಾರವಾಗಿದೆ.

ಅಡಿಟಿಪ್ಪಣಿಗಳು

೧. ಎಚ್.ಎಸ್. ಗೋಪಾಲರಾವ್ : ಪ್ರಾಚ್ಯವಸ್ತು ಮತ್ತು ಸಂಗ್ರಾಹಲಯಗಳು, ಪುಟ-೪೦.

೨. ಎಸ್.ಎನ್.ಶಿವರುದ್ರಸ್ವಾಮಿ : ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪುಟ-೧೬೦.

೩. ಅದೇ, ಪುಟ-೧೬೧.

೪. ಬಿ. ಸುರೇಂದ್ರರಾವ್ : ಕರ್ನಾಟಕ ಚರಿತ್ರೆ, ಸಂಪುಟ-೨, ಪುಟ-೨೫೨.

೫. ಅದೇ, ಪುಟ-೨೫೩.

೬. ಅದೇ, ಪುಟ-೨೫೪.

೭. ಎಂ.ಎನ್.ಪ್ರಭಾಕರ್ : ದೇವಾಲಯ ವಾಸ್ತುಚಂದ್ರಿಕೆ.

೮. ಬಿ. ಸುರೇಂದ್ರರಾವ್ : ಕರ್ನಾಟಕ ಚರಿತ್ರೆ ಸಂಪುಟ-೨, ಪುಟ-೨೫೫.

೯. ರಾಜಶೇಖರ್.ಎಸ್.: ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪುಟ-೧೦೫.

೧೦. ಬಿ.ಸುರೇಂದ್ರರಾವ್ : ಕರ್ನಾಟಕ ಚರಿತ್ರೆ, ಸಂಪುಟ-೨, ಪುಟ-೨೫೭.

ಅಧ್ಯಾಯ : ಐದು

ಉಪಸಂಹಾರ

ಅಧ್ಯಾಯ : ಐದು

ಉಪಸಂಹಾರ

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ ।
ಜ್ಜೆರೆಯೊಳ್ವಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ ।
ರ್ಗ್ಗೆರೆವೆಚ್ಚಾಗಿರು ಶಿಷ್ಟರಂ ಪೊರೆಯೆನುತ್ತಿಯೆಂತೆಲ್ಲವಂ ಪಿಂದೆ ತಾ ।
ಯೆರೆದಳ್ವಾಲೆರೆವಂದು ತೊಟ್ಟು ಕಿವಿಯೊಳಂ ಲಕ್ಷ್ಮೀಧಾರಮಾತ್ಯನಾ ।

ಈ ಪದ್ಯವನ್ನು ವಿಜಯನಗರದ ಅರಸ ಪ್ರೌಢ ಪ್ರತಾಪದೇವರಾಯನ (ಕ್ರಿ.ಶ.೧೪೦೬-೨೨) ಮಂತ್ರಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಕ್ರಿ.ಶ. ೧೪೧೧ರ ಹಂಪಿ ಶಾಸನವು ತಿಳಿಸುತ್ತದೆ.[೧] (ಎಸ್.ಐ.ಐ.೪ನಂ.೨೬)

ತಾಯಿ ಮೊದಲ ಪಾಠಶಾಲೆ ಎನ್ನುವ ರೀತಿಯಲ್ಲಿ ತಾಯಿಯು ಮಗುವಿಗೆ ವಿದ್ಯೆ ಮತ್ತು ತಿಳುವಳಿಕೆಯನ್ನು ನೀಡುವಳು. ಈ ಸ್ತ್ರೀಯಿಂದ ಒಂದು ಕುಟುಂಬ, ಸಮಾಜ, ದೇಶವನ್ನು ಪ್ರಬಲವಾಗಿ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.

ಅತ್ಯಂತ ಪ್ರಾಚೀನ ಕಾಲದಿಂದಲೂ ಬೆಳದು ಬಂದಿರುವ ರೂಢಿ, ಸಂಪ್ರದಾಯ, ಆಚರಣೆ ಇವೆಲ್ಲವುಗಳು ಮಹಿಳೆಯರ ಬದುಕಿನ ಮೇಲೆ ಅತ್ಯಂತ ಗಾಢವಾದ ಪರಿಣಾಮಗಳನ್ನು ಬೀರಿವೆ. ಸಂಪ್ರದಾಯ, ನಂಬಿಕೆಗಳೆಲ್ಲವು ಮಹಿಳೆಯರನ್ನು ದ್ವಿತೀಯ ದರ್ಜೆಯಲ್ಲಿಟ್ಟು ಅವಳ ಅಸ್ತಿತ್ವದ ಹುಡುಕಾಟಕ್ಕೆ ದಾರಿ ಮಾಡಿಕೊಡುವಂತೆ, ಪ್ರತಿಯೊಂದು ಸಂದರ್ಭದಲ್ಲಿಯೂ ಕಡಿವಾಣವನ್ನು ಹಾಕುತ್ತಾ ಬರಲಾಗಿದೆ. ಸ್ತ್ರೀಯನ್ನು ಯಾವಾಗಲೂ ಅಧಿಕಾರವಿಲ್ಲದ, ಅಧೀನವಾದ, ಪರಾವಲಂಬಿಯಾಗಿ, ರಕ್ಷಣೆಯನ್ನು ಪಡೆಯುವವಳಾಗಿಯೇ ಕಾಣುತ್ತಾ ಬರಲಾಗಿದೆ. ಸ್ತ್ರೀಗೆ ಅವಳದೇ ಆದ ವ್ಯಕ್ತಿತ್ವವಿಲ್ಲದೇ ಸದಾ ಪುರುಷನಿಂದ ತನ್ನ ವ್ಯಕ್ತಿತ್ವ ಮತ್ತು ಅಸ್ತಿತ್ವವನ್ನು ಗುರುತಿಸಲಾಗಿದೆ. ಪುರುಷ ಪ್ರಾಬಲ್ಯವಿರುವ ಸಮಾಜವು ಸ್ತ್ರೀಗೆ ಯಾವುದೇ ರೀತಿಯ ಮಹತ್ವ ನೀಡಿಲ್ಲ. ಬದಲಿಗೆ ಸಂಪ್ರದಾಯಗಳ ಹೆಸರಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಅವಳ ಮೇಲೆ ಬಂಧನವನ್ನು ಹೇರುತ್ತಾ ಬರುತ್ತಿದ್ದಾರೆ.

ಚರಿತ್ರೆಯಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಅವರಿಗೆ ಉದ್ಭವಿಸಿರುವ ಪ್ರಶ್ನೆಗಳು ಅವುಗಳ ಕುರಿತು ನಡೆಯುವ ಸಂಸ್ಕೃತಿ ಚಿಂತನೆಗಳು ಇವೆಲ್ಲವುಗಳು ಇಡಿ ಸಮಾಜದ ಚರಿತ್ರೆಯುದ್ದಕ್ಕೂ

ನಡೆದು ಬಂದ ವಿಧಾನ ತಿಳಿಯುವುದು ನಮ್ಮ ಇಂದಿನ ಸ್ತ್ರೀಯು ಎದುರುಸುತ್ತಿರುವ ಹಲವು ಸಮಸ್ಯೆಗಳ ಮಾಹಿತಿಯಾಗಿದೆ. ಇಲ್ಲಿ ಒಂದು ಸಮಸ್ಯೆ ಏನೆಂದರೆ ನಮಗೆ ಅಗತ್ಯವಾದ ಎಲ್ಲ ಮಾಹಿತಿಗಳಿಗೂ ಮೂಲ ಆಕರಗಳೆಂದರೆ ಧರ್ಮಶಾಸ್ತ್ರಗಳೇ ಆಗಿವೆ. ಪ್ರಧಾನವಾಗಿ ಧರ್ಮಜಿಜ್ಞಾಸೆಗಳಿಗೆ ಮೀಸಲಾದವು. ನಮಗೆ ತೀರ ಅಗತ್ಯವೆಂದರೆ ಸ್ತ್ರೀಯರ ಸಾಧನೆಗಳನ್ನು ತಿಳಿಯಲು ಸಾಧ್ಯ[೨]

ಪ್ರಸ್ತುತ ದಿನಗಳಿಂದ ಹಿಡಿದು ಇತಿಹಾಸ ಕಾಲದಿಂದಲೂ ರಾಜ್ಯಾಡಳಿತದಲ್ಲಿ ಸ್ತ್ರೀಯರ ಸಾಧನೆ ಇಲ್ಲಿ ಉಲ್ಲೇಖಿಸಲಾಗಿದೆ. ಕಾಕತೀಯ ರುದ್ರಾಂಬೆಯು ಓರಂಗಲ್ಲಿನ ಸಿಂಹಾಸನದಲ್ಲಿ ವೀರಾಜಮಾನಳಾಗಿದ್ದಳು. ಮಾರ್ಕೋಪೋಲೋವಿನ ಅಭಿಪ್ರಾಯದಂತೆ ಈಕೆ ವಿವೇಚನಾಶೀಲೆಯಾದ ಅರಸಿ, ರಾಜ್ಯಭಾರದಲ್ಲಿ ಅತ್ಯಂತ ಸಮರ್ಥೆ. ನ್ಯಾಯ ಶಾಂತಿ, ಸಮಾನತೆಗಳನ್ನು ತನ್ನ ನಾಡಿನಲ್ಲಿ ಸ್ಥಾಪಿಸಿದಳು. ಗುಜರಾತದ ಚಾಲುಕ್ಯ ಜಯಸಿಂಹ ಸಿದ್ಧರಾಜನಿಗೆ ರಾಜಪ್ರತಿನಿಧಿಯಾಗಿ ಆತನ ತಾಯಿ ಮಯಣಲ್ಲಾದೇವಿಯು ರಾಜ್ಯಭಾರ ಮಾಡುತ್ತಿದ್ದಳು. ಅಜ್ಮೀರದ ಚ್ಹಾಮಾನ ಸೋಮೇಶ್ವರನ ಪತ್ನಿ ಕರ್ಪೂರದೇವಿಯು ತನ್ನ ಪುತ್ರನಾದ ಮೂರನೇ ಪೃಥ್ವೀರಾಜನಿಗೆ ಪ್ರತಿನಿಧಿಯಾಗಿ ಆಳುತ್ತಿದ್ದಳು.[೩]

ಕಲ್ಯಾಣ ಚಾಲುಕ್ಯ ರಾಣಿಯರ ಕೆಲವು ಸಾಧನೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕೇತಲದೇವಿ ಇವಳು ೧ನೇ ಸೋಮೇಶ್ವರ ಮಡಿದಿಯಾಗಿದ್ದಳು. ಇವಳು ಕ್ರಿ.ಶ. ೧೦೫೪ರಲ್ಲಿ ಅಗ್ರಹಾರವಾಗಿದ್ದ ಪೊನ್ನವಾಡವನ್ನು ಆಳುತ್ತಿದ್ದಳು. ಇವಳು ಶೈವ ದೇವಾಲಯಗಳಿಗೆ ಮತ್ತು ಚೈತ್ಯಾಲಯಗಳಿಗೆ ಭೂದಾನವನ್ನು ಹಾಗೂ ಎಣ್ಣೆ ಗಾಣವನ್ನು ದತ್ತಿ ನೀಡಿರುವಳೆಂದು ತಿಳಿದುಬರುತ್ತದೆ. ೧ನೇ ಸೋಮೇಶ್ವರನ ರಾಣಿಯಾದ ಲಚ್ಚಲ ಮಹಾದೇವಿಯ ಕ್ರಿ.ಶ. ೧೦೫೪ರ ಬೆಲವಂಟಿ ಶಾಸನವು ಇವಳು 'ಉರಂ' ಗ್ರಾಮದ ಮೇಲೆ ಅಧಿಕಾರವನ್ನು ಹೊಂದಿದ್ದಳೆಂದು ತಿಳಿಸುತ್ತದೆ. ೧ನೇ ಸೋಮೇಶ್ವರನ ಪುತ್ರಿಯಾದ ಸುಗ್ಗಲಾದೇವಿಯು ನಿಡಗುಂದಿಯ ಅಗ್ರಹಾರವನ್ನು ನೋಡಿಕೊಳ್ಳುತ್ತಿದ್ದಳು. ಇದನ್ನು ಅವಳಿಗೆ ಪರಮೇಶ್ವರ ದತ್ತಿಯ ರೂಪದಲ್ಲಿ ನೀಡಲಾಗುತ್ತದೆ.[೪]

ಕಲ್ಯಾಣ ಚಾಲುಕ್ಯರ ರಾಣಿ ಅಕ್ಕಾದೇವಿಯ ಸಾಧನೆ ಅದ್ವಿತೀಯವಾಗಿದ್ದು ಅವಳ ಚರಿತ್ರೆಯನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಉದ್ದೇಶದಲ್ಲಿ ಅಕ್ಕಾದೇವಿಯ ಚರಿತ್ರೆ ಬಗೆಗೆ ಮಾಹಿತಿಗಳು ವಿರಳವಾಗಿವೆ. ಆದ್ದರಿಂದ ಸಮಗ್ರವಾದ ಅಧ್ಯಯನ ಪೂರ್ಣಗೊಳ್ಳುವುದು ಕಷ್ಟವೇ ಆಗಿದೆ. ಆದರೂ ಸಿಕ್ಕಿರುವ ಮಾಹಿತಿಗಳನ್ನು ಹಾಗೂ ಕ್ಷೇತ್ರಕಾರ್ಯಾಧರಿತ ವಿಷಯಗಳನ್ನು ಇಟ್ಟುಕೊಂಡು ಅಧ್ಯಯನದ ಸಮಗ್ರತೆಗೆ ಪ್ರಯತ್ನಿಸಲಾಗಿದೆ.

ಅಧ್ಯಯನದ ವ್ಯಾಪ್ತಿಯಲ್ಲಿ ಅಕ್ಕಾದೇವಿಯ ಆಡಳಿತ ಪದ್ಧತಿ ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಒಳಗೊಂಡಿದೆ. ವಿಧಾನದಲ್ಲಿ ಶಾಸನಗಳನ್ನು ಆಧಾರವಾಗಿ ಬಳಸಿಕೊಂಡಿದ್ದೇವೆ. ದೇವಾಲಯದ ಶಿಲ್ಪ ಹಾಗೂ ಆ ಕಾಲದಲ್ಲಿ ನಿರ್ಮಾಣವಾದ ಕೆರೆ ಕಟ್ಟೆಗಳನ್ನು ಗಮನಿಸಲಾಗಿದೆ. ಪ್ರಕಟಿತ ಶಾಸನಗಳು ಗ್ರಂಥಗಳನ್ನು ಪ್ರಾಥಮಿಕ ಆಧಾರವಾಗಿ ಬಳಸಲಾಗಿದೆ. ದೇವಾಲಯ ಶಿಲ್ಪಗಳ ಬಗೆಗೆ ಕ್ಷೇತ್ರ ಕಾರ್ಯ ಆಧಾರವಾಗಿ ತಿಳಿಸಲಾಗಿದೆ.

ಅಕ್ಕಾದೇವಿಯ ಜೀವನ-ಸಾಧನೆ ಅಧ್ಯಯನದಲ್ಲಿ ಅಕ್ಕಾದೇವಿಯು ಕಲ್ಯಾಣ ಚಾಲುಕ್ಯ ದಶವರ್ಮ ಭಾಗಲಾದೇವಿಯರ ಮಗಳು ಹಾಗೂ ಐದನೇ ವಿಕ್ರಮಾದಿತ್ಯನ ಸಹೋದರಿ ಇವಳು ಕ್ರಿ.ಶ. ೧೦೧೦ರಲ್ಲಿ ತನ್ನ ಆಡಳಿತ ಜೀವನವನ್ನು ಪ್ರಾರಂಭಿಸಿದಳು. ಅಕ್ಕಾದೇವಿಯು ಕಿಸುಕಾಡು-೭೦, ತೊರಗೆರೆ-೬೦, ಬಾಗಡಗೆ-೭೦, ಮಾಸವಾಡಿ-೧೪೦ ಮುಂತಾದ ಪ್ರಾಂತ್ಯಗಳವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದ್ದಳು. ಕ್ರಿ.ಶ. ೧೦೩೭ರ ಹೊಟ್ಟೂರು ಶಾಸನದ ಪ್ರಕಾರ ಇವಳು ಕದಂಬ ಮಯೂರ ವರ್ಮನೊಂದಿಗೆ ವಿವಾಹವಾಗಿದ್ದಳು. ನಂತರ ಪತಿಯೊಂದಿಗೆ ಬನವಾಸಿ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದಳು. ಕಾರಣಾಂತರಗಳಿಂದ ಅವಳು ತನ್ನ ಪ್ರಾಂತ್ಯಗಳಲ್ಲಿ ಆಡಳಿತವನ್ನು ಮುಂದುವರೆಸಿದಳು. ವಿಕ್ರಮಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದಳು ಹಾಗೂ ಇವರಳ ಸೂಡಿ ಪ್ರಾಂತ್ಯವು ಆಡಳಿತದ ಮತ್ತೊಂದು ಕೇಂದ್ರವಾಗಿತ್ತು. ರಾಜಧಾನಿ ವಿಕ್ರಮಪುರದಲ್ಲಿ ಆಡಳಿತದ ನಿರ್ವಹಣೆಗೆ ಅಧಿಕಾರಿಗಳನ್ನು ನೇಮಕ ಮಾಡಿದಂತೆ ಸೂಡಿ ಪ್ರಾಂತ್ಯಕ್ಕೂ ಅಧಿಕಾರಿಗಳನ್ನು ನೇಮಿಸಿದ್ದಳು. ಇವಳು ಗೋಕಾಕದ ಕೋತ್ವಾಲನ ಮೇಲೆ ದಂಡೆತ್ತಿ ಹೋಗಿ ಅವನನ್ನು ಅಧೀನ ಮಾಡಿಕೊಂಡಿದ್ದಳು. ಆದ್ದರಿಂದ 'ರಣಭೈರವಿ' ಎಂದು ಬಿರುದನ್ನು ಹೊಂದಿದ್ದಳು.

ಸಮಾಜೋ-ಧಾರ್ಮಿಕ ಕಾರ್ಯಗಳ ಅಧ್ಯಯನದಲ್ಲಿ ಅಕ್ಕಾದೇವಿಯ ಸರ್ವಧರ್ಮ ಸಹಿಷ್ಣುಳಾಗಿದ್ದು ತನ್ನ ಸಾಮ್ರಾಜ್ಯದಲ್ಲಿ ಎಲ್ಲ ಧರ್ಮದವರಿಗೂ ಆಶ್ರಯ ನೀಡಿದ್ದಳು. ಗುಣದ ಬೆಡಂಗಿ ಜಿನಾಲಯ ಜೀರ್ಣೋದ್ಧಾರಕ್ಕೆ ಅಲ್ಲಿಯ ಪಂಡಿತರಿಗೆ, ರಿಷಿಯರಿಗೆ, ಅಬ್ಬೆಯರಿಗೆ ಕುಲ್ಲುಟಕರಿಗೆ, ಹೊಲ, ತೋಟ, ದಾನ ನೀಡಿದ್ದಳು. ಸೂಡಿ ಪ್ರದೇಶದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ ಆ ದೇವಾಲಯದಲ್ಲಿ ಪಂಡಿತರು ಮತ್ತು ಪರಿಚಾರಕರಾಗಿ ಸೂಳೆಯರನ್ನು ನೇಮಕ ಮಾಡಿದ್ದಳು. ಸೂಳೆಯರಿಗೆ ದೇವಾಲಯದಲ್ಲಿ ಸ್ಥಾನಗಳನ್ನು ಗುರುತಿಸಿದ್ದರು. ಅವರಿಗೂ ಸಹ ದಾನದತ್ತಿಗಳನ್ನು ನೀಡಿದ್ದಳು. ಅಕ್ಕಾದೇವಿಯು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದು ಅಗ್ರಹಾರಗಳು, ಘಟಿಕಾಸ್ಥಾನಗಳನ್ನು ನಿರ್ಮಿಸಿದ್ದಳು. ಅಲ್ಲಿಯ ವಿದ್ಯಾರ್ಥಿಗಳಿಗೆ ವಸತಿ, ಊಟಕ್ಕಾಗಿ ತೋಟ, ಮನೆ, ಬಾವಿಗಳನ್ನು ದಾನವಾಗಿ ನೀಡಿದ್ದಳು. ಬೇಲೂರು

ಶಾಸನವು ಇವಳನ್ನು ವಾಗ್ದೇವಿ, ಸೀತಾ, ಮಹಾದೇವಿ, ಭೂದೇವಿ, ಸಮಾನಳೆಂದು ಗುಣದ ಬೆಡಂಗಿ, ಏಕವಾಕ್ಯ, ವಿವೇಕ ಚುಡಾಮಣಿ, ದೀನಾನಾಥ ಚಿಂತಾಮಣಿ, ಪರಿಜನ ಕಲ್ಪವೃಕ್ಷ ಎಂದು ವರ್ಣಿಸಿದ್ದಾರೆ.

ಸಾಂಸ್ಕೃತಿಕ ಕೊಡುಗೆಗಳ ಅಧ್ಯಯನದಲ್ಲಿ ಅಕ್ಕಾದೇವಿಯ ಕಾಲದಲ್ಲಿ ನಿರ್ಮಾಣದ ದೇವಾಲಯಗಳು, ಕೆರೆ, ಕಟ್ಟೆಗಳು, ಮೂರ್ತಿ ಶಿಲ್ಪಗಳು, ವಾಸ್ತುಶಿಲ್ಪ ಶ್ರೀಮಂತಿಕೆಯಿಂದ ಕೂಡಿತ್ತು. ಇವರು ರಾಷ್ಟ್ರಕೂಟರ ಕಲಾಸಂಸ್ಕೃತಿಯಿಂದ ಪ್ರಭಾವಿತರಾಗಿ ಮುಂದೆ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದ್ದಾರೆ. ದೇವಾಲಯದ ಅಧಿಷ್ಠಾನ, ಭಿತ್ತಿ, ಗಳ, ಗರ್ಭಗೃಹ, ಮುಖಮಂಟಪ, ನವರಂಗ ಮುಂತಾದವುಗಳನ್ನು ಒಳಗೊಂಡ ಬಾಗಿಲವಾಡವು ಶಿಲ್ಪಗಳಿಂದ, ಬಳ್ಳಿಗಳಿಂದ ಅಲಂಕೃತಗೊಂಡಿದ್ದವು. ಗೋಡೆಯ ಭಾಗದಲ್ಲಿ ಶಿಲ್ಪಗಳು ಕೋಷ್ಟಕಗಳಿಂದ ಅಲಂಕರಿಸಲಾಗಿದೆ. ಬಾವಿ, ಕೆರೆಗಳ ಗೋಡೆ ಭಾಗಗಳು ಸಹ ಅಲಂಕರಿಸಲಾಗಿದೆ. ಇವರ ಕಾಲದ ಕಾಲದ ದೇವಾಲಯಗಳು ಏಕಕೂಟ, ದ್ವಿಕೂಟ, ತ್ರಿಕೂಟ, ಪಂಚಕೂಟ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಅಧ್ಯಯನದ ಕ್ಷೇತ್ರಕಾರ್ಯಗಳಲ್ಲಿ ಒಂದು ನೆಲೆ ಕಂಡುಬಂದಿದ್ದು ಅದು ವಿಕ್ರಮಪುರವಾಗಿರಬಹುದೆಂದು ಗುರುತಿಸಲಾಗಿದೆ. ಈ ನೆಲೆಯು ಸಂಪೂರ್ಣವಾಗಿ ನಾಶವಾಗಿದ್ದು ಅದರ ಅವಶೇಷಗಳು ಮಣ್ಣಿನಲ್ಲಿ ಹೂತುಹೋಗಿವೆ. ಹೀಗೆ ಕಲ್ಯಾಣ ಚಾಲುಕ್ಯರ ರಾಣಿಯರಲ್ಲಿ ಅಕ್ಕಾದೇವಿಯು ಸಾಮಾಜಿಕ ಕಾರ್ಯ ಕ್ಷೇತ್ರಗಳಲ್ಲಿ ಮಾತ್ರವಲ್ಲದೇ ಸ್ವತಂತ್ರ ಸಾಮ್ರಾಜ್ಯ ವಿಸ್ತರಣಾ ಕ್ಷೇತ್ರಗಳಲ್ಲಿಯೂ ಅದ್ವಿತೀಯ ಸ್ಥಾನವನ್ನು ಪಡೆದಿದ್ದಾಳೆ.

ಕಲ್ಯಾಣ ಚಾಲುಕ್ಯ ಸೌರ್ವಭೌಮರ ಬಗೆಗೆ ಸಾಕಷ್ಟು ಅಧ್ಯಯನಗಳು ಇತಿಹಾಸ ಮತ್ತು ಸಾಹಿತ್ಯ ಅಧ್ಯಯನಕಾರರಿಂದ ನೆರವೇರಿಸಲ್ಪಟ್ಟಿವೆ. ಆದರೆ ಅದೇ ಸೌರ್ವಭೌಮ ಅರಸರ ಕಾಲಾವಧಿಯಲ್ಲಿ ಆಳ್ವಿಕೆ ಮಾಡಿದ ರಾಣಿ ಅಕ್ಕಾದೇವಿಯ ಬಗೆಗೆ ಬೆರಳಣಿಕೆಯ ಲೇಖನಗಳನ್ನು ಬಿಟ್ಟರೆ ವಿವರವಾದ ಅಧ್ಯಯನವಾಗಿಲ್ಲ. ಈ ನಿಟ್ಟಿನಲ್ಲಿ ಈ ಒಂದು ಪ್ರಯತ್ನ ಮಾಡಲಾಗಿದೆ.

ಕೆಲವು ಕಾರಣಗಳಿಂದ ತನ್ನ ಪತಿಯಿಂದ ದೂರವಾದ ಅಕ್ಕಾದೇವಿ ಕೈಚೆಲ್ಲಿ ಕುಳಿತುಕೊಳ್ಳದೇ ಸ್ವತಂತ್ರವಾಗಿ ರಾಜ್ಯಭಾರ ನಿರ್ವಹಿಸಿದಳು. ಇಂದಿನ ಬಾಗಲಕೋಟೆ ಹಾಗೂ ಗದಗ ಜಿಲ್ಲೆಯ ವಿಸ್ತಾರವಾದ ಪ್ರದೇಶವನ್ನು ಆಳಿದ ಅಕ್ಕಾದೇವಿ ಕೇವಲ ನಾಮಮಾತ್ರ ಅಧಿಕಾರಿಣಿಯಾಗಿ ಬಿಂಬಿತವಾಗಲಿಲ್ಲ. ಪುರುಷರಷ್ಟೇ ಸಮರ್ಥವಾಗಿ ಯುದ್ಧವನ್ನು ಮಾಡಿದಳು. ತನ್ನ ರಾಜ್ಯಕ್ಕೆ ಗಂಡಾಂತರ ಬಂದಾಗ ದೂರದ ಗೋಕಾಕ ಪ್ರದೇಶದವರೆಗೂ ತನ್ನ ಸೈನ್ಯ ಮಣಿಸಿ ಕೊತ್ವಾಲವನ್ನು ಬುಡಸಹಿತ ಕಿತ್ತೊಗೆದಳು. ೧೨ನೇ ಶತಮಾನದಲ್ಲಿ ಉನ್ನತ ಸ್ಥಾನದಲ್ಲಿದ್ದ ದೇವಾಲಯ,

ಸಂಸ್ಕೃತಿಗೆ ವಿಶೇಷ ಪ್ರೋತ್ಸಾಹ ನೀಡಿದಳು. ಸಮಾಜದ ಉನ್ನತ ಸ್ಥಾನದಲ್ಲಿದ್ದ ಕಾಳಾಮುಖ ಆಚಾರ್ಯರಿಗೆ ಶಿಕ್ಷಣ ಅಭಿವೃದ್ಧಿಗಾಗಿ ಹೇರಳ ದಾನದತ್ತಿ ನೀಡಿ ಇತಿಹಾಸದಲ್ಲಿ ತನ್ನನ್ನು ಸ್ಥಾಪಿಸಿಕೊಂಡಳು. ಇಂದಿಗೂ ಬೆರಗಾಗಿ ನೋಡುವಂತ ದೇವಾಲಯಗಳನ್ನು ಸೂಡಿ ಕೋರ್ಲಹಳ್ಳಿ ಹಾಗೂ ಅರಸಿಬೀದಿಯಲ್ಲಿ ಕಟ್ಟಿದಳು. ಇಂಥ ಮಹತ್ವ ಕಾರ್ಯಗಳನ್ನು ಮಾಡಿದ ಅಕ್ಕಾದೇವಿಯ ಬಗೆಗೆ ಸಮಗ್ರ ಹಾಗೂ ವಿವರ ಅಧ್ಯಯನದ ಅವಶ್ಯಕತೆ ಮನಗಂಡು ಈ ಪ್ರಯತ್ನವನ್ನು ಮಾಡಲಾಗಿದೆ.

ಅಡಿಟಿಪ್ಪಣಿಗಳು

೧. ಎಸ್.ಆಯ್.ಆಯ್., ೫೧. ನಂ-೨೬೭.

೨. ಎಚ್.ಎಸ್. ಶ್ರೀಮತಿ, ಹೆಣ್ಣು-ಹೆಂಗಸು, ಪುಟ-೩.

೩. ಸಿ.ಪಿ.ರಾಮಸ್ವಾಮಿ ಅಯ್ಯರ್, ಯುಗಯಾತ್ರೀ ಭಾರತೀಯ ಸಂಸ್ಕೃತಿ, ಪುಟ-೪೫೫.

೪. ಎಮ್.ಎಸ್.ನಾಗರಾಜರಾವ್, ದಿ ಚಾಲುಕ್ಯಾಸ್ ಆಫ್ ಕಲ್ಯಾಣ, ಪುಟ-೧೬೫.

ಗ್ರಂಥಋಣ

ಗ್ರಂಥಋಣ

೧. ಅಪರ್ಣಾ.ಕೂ.ಸ: ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೧೯೯೯.

೨. ಅರವಿಂದ ಮಾಲಗತ್ತಿ : ಕನ್ನಡ ವಿಷಯ ವಿಶ್ವಕೋಶ ಸಂ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ-೨೦೦೫.

೩. ಉಷಾ.ಎಂ.: ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪.

೪. ಕರವೀರ ಪ್ರಭು ಕ್ಯಾಲಕೊಂಡ್ : ಚಾಲುಕ್ಯ ವಾಸ್ತುಶಿಲ್ಪ ವೈಭವ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೭.

೫. ಕಲಬುರ್ಗಿ.ಎಂ.ಎಂ. : ಶಾಸನ ವ್ಯಾಸಂಗ ಸಂ-೧-೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೭೪-೭೫

೬. ಕಲಬುರ್ಗಿ.ಎಂ.ಎಂ.(ಸಂ) : ಧಾರವಾಡ ಜಿಲ್ಲಾ ಶಾಸನ ಸೂಚಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೭೬.

೭. ಕಲಬುರ್ಗಿ.ಎಂ.ಎಂ. (ಸಂ) : ವಿಜಾಪುರ ಜಿಲ್ಲಾ ಶಾಸನ ಸೂಚಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೭೬.

೮. ಕಲಬುರ್ಗಿ.ಎಂ.ಎಂ.(ಸಂ) : ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೯೯.

೯. ಕೃಷ್ಣಮೂರ್ತಿ. ಪಿ. ಮತ್ತು ಎ.ಕೆ. ವಸಂತಲಕ್ಷ್ಮೀ(ಸಂ) : ಸೂರ್ಯಕೀರ್ತಿ, ಸೂರ್ಯನಾಥ ಕಾಮತ್ ಅಭಿನಂದನ ಸಮಿತಿ, ಬೆಂಗಳೂರು - ೨೦೦೦.

೧೦. ಕೇಶವಶರ್ಮ : ಸ್ತ್ರೀ ಮತ್ತು ರಾಜಕಾರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦.

೧೧. ಗೋಪಾಲ ಬಿ.ಆರ್.: ಕಾರ್ಪಸ್ ಆಫ್ ಕದಂಬ ಇನ್ಸ್‌ಸ್ಕ್ರಿಪ್ಸ್‌ನ್ಸ್ Vol-i, ಕದಂಬ ಇನ್‌ಸ್ಕ್ರಿಪ್ಟ್ ಆಫ್ ಕಲ್ಚರಲ್ ಸ್ಟಡಿಸ್ ಸಿರಸ್ - ೧೯೮೫.

೧೨. ಗೋಪಾಲ.ಬಿ.ಆರ್. : ದಿ ಚಾಲುಕ್ಯಸ್ ಆಫ್ ಕಲ್ಯಾಣ ಆಂಡ್ ದಿ ಕಲಚುರಿಸ್, ಕರ್ನಾಟಕ ಯುನಿರ್ವಸಿಟಿ, ಧಾರವಾಡ, ೧೯೮೧.

೧೩. ಗೋಪಾಲ.ಆರ್.(ಸಂ) : ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು-೨೦೦೬

೧೪. ಗೋಪಾಲ.ಆರ್.(ಸಂ): ಎಚ್.ಎಸ್. ಶಾಸನ ಹಿನ್ನೆಲೆ ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ನಿರ್ದೇಶನಾಲಯ, ಮೈಸೂರು-೨೦೦೬

೧೫. ಚೆನ್ನಕ್ಕ ಎಲಿಗಾರ : ಬಂಕಾಪುರ ಶೋಧನೆ, ಚನ್ನಗಂಗಾ ಪ್ರಕಾಶನ ಧಾರವಾಡ-೧೯೯೦.

೧೬. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೦.

೧೭. ಚೆನ್ನಕ್ಕ ಎಲಿಗಾರ : ಪ್ರಾಚೀನ ಕರ್ನಾಟಕದ ರಾಣಿಯರು, ಚನ್ನಗಂಗಾ ಪ್ರಕಾಶನ, ಧಾರವಾಡ-೧೯೮೭.

೧೮. ಚೆನ್ನಕ್ಕ ಪಾವಟೆ : ಅನುಗ್ರಹ, ಚನ್ನಗಂಗಾ ಪ್ರಕಾಶನ, ಧಾರವಾಡ-೧೯೯೯.

೧೯. ಚೆನ್ನಕ್ಕ ಪಾವಟೆ : ಸಂಸ್ಕೃತಿ ಸಂಶೋಧನೆ, ಚನ್ನಗಂಗಾ ಪ್ರಕಾಶನ, ಧಾರವಾಡ.

೨೦. ಚೆನ್ನಕ್ಕ ಪಾವಟೆ : ಹಾನಗಲ್ಲು ಕಾದಂಬರಿ, ಚನ್ನಗಂಗಾ ಪ್ರಕಾಶನ, ಧಾರವಾಡ-೧೯೯೮.

೨೧. ಚಿದಾನಂದಮೂರ್ತಿ.ಎಂ. : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೯.

೨೨. ಜಗದೀಶ : ಮೆಜರ್‌ಮೆಂಟ್ ಸಿಸ್ಟಂ ಇನ್ ಕರ್ನಾಟಕ, ಡೈರೆಕ್ಟರೇಟ್ ಆಫ್ ಅರ್ಕಿಯಾಲಜಿ ಆಯಂಡ್ ಮ್ಯೂಸಿಯಸ್, ಹೊಸಪೇಟೆ-೨೦೦೫.

೨೩. ಜಾರ್ಜ್ ಎಮ್.ಮೊರೆಸ್ : ದಿ ಕದಂಬ ಕುಲ, ಎ.ಹಿಸ್ಟ್ರಿ ಆಫ್ ಎನ್ಸಿಯಂಟ್ ಆಂಡ್ ಮಿಡಿವಲ್ ಕರ್ನಾಟಕ, ಎಷಿಯನ್ ಎಜ್ಯುಕೇಶನಲ್ ಸರ್ವಿಸ್ ನಿವ್ ದೆಹಲಿ ಮದ್ರಾಸ್-೧೯೯೦.

೨೪. ದೇಸಾಯಿ.ಪಿ.ಬಿ. : ಜೈನಿಸಮ್ ಇನ್ ಸಾಥ್ ಇಂಡಿಯಾ ಆಂಡ್ ಸಂ. ಜೈನ್ ಎಫಿಗ್ರಾಫ್ ಜೈನಾ ಸಂಸ್ಕೃತಿ, ಸಮರಾಕ್ಷಕ ಸಂಘ ಸೊಲ್ಲಾಪುರ-೨೦೦೧.

೨೫. ದೇಸಾಯಿ.ಪಿ.ಬಿ. : ಹಿಸ್ಟ್ರಿ ಆಫ್. ಕರ್ನಾಟಕ, ಕನ್ನಡ ರಿಸರ್ಚ ಇನ್‌ಸ್ಟಿಟ್ಯುಟ್ ಕರ್ನಾಟಕ ಯುನಿರ್ವಸಿಟಿ, ಧಾರವಾಡ-೧೯೭೦.

೨೬. ದೇವರಕೊಂಡಾರೆಡ್ಡಿ : ಬಾಗಲಕೋಟೆ ಜಿಲ್ಲೆ ಶಾಸನ ಸಂ-೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೭. ನರಸಿಂಹಮೂರ್ತಿ.ಎ.ವಿ. : ಚಾಲುಕ್ಯ ವಾಸ್ತುಶಿಲ್ಪ ಪರಿಚಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೧೯೮೪.

೨೮. ನಾಗರಾಜ.ಕೆ.ಜಿ. : ಕಲ್ಯಾಣ ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಶಿಲ್ಪ ಕಲಾಪ್ರಪಂಚ ಬೆಂಗಳೂರು-೧೯೯೪.

೨೯. ನಾಗರಾಜರಾವ್.ಎಮ್.ಎಸ್. : ದಿ ಚಾಲುಕ್ಯಸ್ ಆಫ್ ಕಲ್ಯಾಣ, ಬೆಂಗಳೂರು ದಿ ಮಿಥಿಕ್ ಸೊಸೈಟಿ-೧೯೮೩.

೩೦. ನಾಗಯ್ಯ.ಜೆ.ಎಂ.: ಆರನೆಯ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ-೧೯೯೨.

೩೧. ಪ್ರಭಾಕರ.ಎಂ.ಎಸ್.: ದೇವಾಲಯ ವಾಸ್ತು ಚಂದ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦.

೩೨. ಫ್ಲಿಟ್.ಜೆ.ಎಫ್.: ಡೈನಾಸ್ಟಿ ಆಫ್ ದಿ ಕೆನ್‌ರಾಸ್, ಡಿಸ್ಟ್ರಿಕ್ಟ್ ಬಾಂಬೆ-೧೮೮೦.

೩೩. ಘೊಕೆಮ ಜೆರಾರಡ : ಚಾಲುಕ್ಯ ಆರ್ಕಿಟಕ್ಚರ್ ಮಿಡಿವಲ್ ಟೆಂಪಲ್ ಆಫ್ ನಾರ್ದನ್ ಕರ್ನಾಟಕ, ಬಿಲ್ಪ ದುರಿಂಗ್ ದಿ ರುಲ್ ಚಾಲುಕ್ಯ ಆಫ್ ಕಲ್ಯಾಣ ಆಂಡ್ ದೇರ್ ಆಫ್ಟರ್ A.D.೧೦೦೦-೧೩೦೦೦, Vol-1-3 ಮುನ್‌ಶಿರಾಮ್ ಮನೋಹರಲಾಲ ಪಬ್ಲಿಷರ್ಸ್ Pvt.Ltd., ನಿವ್ ದೆಹಲಿ-೨೦೦೩.

೩೪. ಬಸವರಾಜ ಸಬರದ : ಶಾಸನಗಳ ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯.

೩೫. ಬಾಲಸುಬ್ರಹ್ಮಣ್ಯ, ವಾಸುದೇವನ್, ಸಿ.ಎಸ್.ರಮೇಶ ನಾಯಕ : ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭.

೩೬. ಬಿರಾದರ.ಎಸ್.ಜಿ.: ಪಾನಂಗಲ್ಲು ಐನೂರು, ಎಂ.ಫಿಲ್. ಸಂಶೋಧನಾ ಅಪ್ರಕಟಿತ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೬.

೩೭. ಭಗವತ್ ಶರಣ ಉಪಾಧ್ಯಾಯ : ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವಿಟ್ ಲಿಮಿಟೆಡ್ ಬೆಂಗಳೂರು-೨೦೦೪.

೩೮. ನರಸಿಂಹಮೂರ್ತಿ ಎ.ವ್ಹಿ. : ದಿ ಸೇವ ನಾಸ್ ಆಫ್ ದೇವಗಿರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩.

೩೯. ಮೂರ್ತಿ ಕೆ.ಎಸ್.ಎನ್: ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ರಂಜಿತಾ ಪ್ರಕಾಶನ ನಂ.೪೯, ಸಮೃದ್ಧಿ ಗುರುಲೇಔಟ್ ತುಮಕೂರು-೧೯೯೮.

೪೦. ರಾಮಸ್ವಾಮಿ ಅಯ್ಯರ್.ಸಿ.ಪಿ: ಯಾಗಯಾತ್ರೀ ಭಾರತೀಯ ಸಂಸ್ಕೃತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೧.

೪೧. ರಾಜಶೇಖರ.ಎಸ್.: ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್ಸ, ಧಾರವಾಡ-೧೯೮೮.

೪೨. ವಸುಂಧರಾ ಫಿಲಿಯೋಜಾ : ಕಾಲಮುಖ ಆಂಡ್ ಪಾಶುಪತಾ ಟೆಂಪಲ್ಸ್ ಇನ್ ಧಾರವಾಡ, ದಿ ಕುಪ್ಪೆಸ್ವಾಮಿ ಶಾಸ್ತ್ರಿ ರಿಸರ್ಚ ಇನ್‌ಸ್ಟಿಟುಟ್ ಚೆನ್ನೈ-೨೦೦೧.

೪೩. ವಾಸುದೇವ ಬಡಿಗೇರ : ಹಾನಗಲ್ಲು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭.

೪೪. ಶಿವರಾಮ ಕಾರಂತ : ಚಾಲುಕ್ಯ ವಾಸ್ತುಶಿಲ್ಪ, ಮೈಸೂರು ರಾಜ್ಯದ ಲಲಿತಕಲಾ ಅಕಾಡೆಮಿ, ಬೆಂಗಳೂರು-೧೯೬೪.

೪೫. ಶ್ರೀನಿವಾಸ ರಿತ್ತಿ : ದಿ ಸೇವನಾಸ್ ಡಿಪಾರ್ಟ್‌ಮೆಂಟ್ ಆಫ್ ಎನ್ಸಿಯೆಂಟ್ ಇಂಡಿಯನ್ ಹಿಸ್ಟ್ರಿ ಆಂಡ್ ಎಫಿಗ್ರಾಫಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೮೩.

೪೬. ಶ್ರೀಮತಿ.ಎಚ್.ಎಸ್ : ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು ಸಂದೇಹಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯.

೪೭. ಶ್ರೀಮತಿ.ಎಚ್.ಎಸ್ : ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧.

೪೮. ಶ್ರೀಮತಿ ಎಚ್.ಎಸ್ : ಹೆಣ್ಣು-ಹೆಂಗಸು, ಬ್ಯಾಲದಕೆರೆ ಪ್ರಕಾಶನ ಮಂಡ್ಯ ಜಿಲ್ಲೆ-೨೦೦೪.

೪೯. ಶೈಲಜಾ ಹಿರೇಮಠ : ಪಾತರದವರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಮಂಡ್ಯ ಜಿಲ್ಲೆ-೨೦೦೪.

೫೦. ಶೈಲಜಾ ಹಿರೇಮಠ : ಸ್ತ್ರೀಕಥನ, ಭುವನ ಪ್ರಕಾಶನ, ಹೊಸಪೇಟೆ-೨೦೦೩.

೫೧. ಸಹಾಬಿ ಭೂವಿಗೌಡ : ಮಲ್ಲಿಕಾ ಘಂಟಿ, ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೨೦೦೬.

೫೨. ಸುಮಿತ್ರಾಬಾಯಿ.ಬಿ.ಎನ್ : ಸ್ತ್ರೀವಾದಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ, ಬೆಂಗಳೂರು-೨೦೦೬.

೫೩. ಸುಮಿತ್ರಾಬಾಯಿ.ಬಿ.ಎನ್.: ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦.

೫೪. ಸುರೇಂದ್ರರಾವ್.ಬಿ.: ಕರ್ನಾಟಕ ಚರಿತ್ರೆ ಸಂ-೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೭.

೫೫. ಸೂರ್ಯನಾಥ.ಯು.ಕಾಮತ್ : ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ಬೆಂಗಳೂರು-೧೯೯೫.

೫೬. ಹಂಪ ನಾಗರಾಜಯ್ಯ : ಚಂದ್ರಕೊಡೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೭.

೫೭. ಹೆನ್ರಿ ಕಸಿನ್ಸ್ : ದಿ ಚಾಲುಕ್ಯ ಆರ್ಕ್‌ಟೆಕ್ಚರ್ ಆಫ್ ದಿ ಕ್ಯಾನ್‌ರೇಸ್ ಡಿಸ್ಟ್ರಿಕ್ಟ್ಸ್, ಅರ್ಕಾಲಾಜಿಕಲ್ ಸರ್ವೆ ಆಫ್ ಇಂಡಿಯಾ ನಿವ್ ಇಂಪಿರಿಯಲ್ ಸಿರಿಸ್, Vol-XLII, ಇಪಿರಿಯಲ್ ಸಿರಿಸ್ ಇಂಡಿಯಾ, ಸೆಂಟ್ರಲ್ ಪಬ್ಲಿಕೇಶನ್ ಬ್ರಾಂಚ್, ಕಲ್ಕತ್ತಾ-೧೯೨೦.

೫೮. ಜ್ಞಾನಾನಂದ.ಜಿ.ಶಿಲ್ಪಾದರ್ಶ ಸಂ-೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧.

೫೯. ಜ್ಞಾನಾನಂದ.ಜಿ.ಶಿಲ್ಪಾದಶ, ಸಂ-೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨.

ಶಾಸನ ಸಂಪುಟಗಳು

೧. ಥಾಮಸ್.ಎಫ್.ಡಬ್ಲ್ಯೂ : ಎಫಿಗ್ರಾಫಿ ಇಂಡಿಕಾ – Vol-XV, ೧೯೧೯–೨೦ ದಿ ಡೈರೆಕ್ಟರ್ ಜನರಲ್ ಅರ್ಕಾಲೆಜಿಕಲ್ ಸರ್ವೆ ಆಫ್ ಇಂಡಿಯಾ ಜನಪತ್ ನಿವ್ ದೆಹಲಿ–೧೯೮೨.

೨. ಥಾಮಸ್.ಎಸ್.ಡಬ್ಲ್ಯೂ : ರಾವ್ ಬಹೂದೂರ, ಹೆಚ್. ಕೃಷ್ಣಶಾಸ್ತ್ರೀ : ಎಫಿಗ್ರಾಫಿ ಇಂಡಿಕಾ Vol-XVi–೧೯೨೨–೨೨, ದಿ ಡೈರೆಕ್ಟರ್ ಜನರಲ್ ಅರ್ಕಾಲೆಜಿಕಲ್ ಸರ್ವೇ ಆಫ್ ಇಂಡಿಯಾ ಜನಪತ್ ನಿವ್ ದೆಹಲಿ – ೧೯೮೩.

೩. ರಾವಬಹೂದರ್. ಹೆಚ್. ಕೃಷ್ಣಾಶಾಸ್ತ್ರೀ : ಎಫಿಗ್ರಾಫಿ ಇಂಡಿಕಾ–Vol-XVii–೧೯೨೩–೨೪, ದಿ ಡೈರೆಕ್ಟರ್ ಜನರಲ್ ಅರ್ಕಾಲೆಜಿಕಲ್ ಸರ್ವೇ ಆಫ್ ಇಂಡಿಯಾ ಜನಪತ್ ನಿವ್ ದೆಹಲಿ – ೧೯೮೩.

೪. ರಾವ್‌ಬಹೂದೂರ್.ಸಿ.ಆರ್. : ಕೃಷ್ಣಮಾಚಾರಲು, ಆರ್.ಎಸ್.ಪಂಚಮುಖಿ, ಎನ್.ಲಕ್ಷ್ಮೀನಾರಾಯಣರಾವ್ : ಸೌತ್ ಇಂಡಿಯನ್ ಇನ್‌ಸ್ಕ್ರಿಫ್ಷನ್ಸ್ Vol-XV(Vol-i) ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ದಿ ಸುಪ್ರಿಟಿಂಡೆಂಟ್ ಗವರ್ನಮೆಂಟ್ ಪ್ರೆಸ್–೧೯೪೦.

ಸಂಕ್ಷೇಪಗಳು :

೧. ಎ.ಇ.: ಎಫಿಗ್ರಾಫಿ ಇಂಡಿಕಾ

೨. ಎಸ್.ಆಯ್.ಆಯ್.: ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್.


೩. ಬಾ.ಜಿ.ಶಾ.ಸಂ: ಬಾಗಲಕೋಟೆ, ಜಿಲ್ಲೆ ಶಾಸನ ಸಂಪುಟ – ೯.

೪. ಧಾ.ಜಿ.ಶಾ.ಸೂ. : ಧಾರವಾಡ ಜಿಲ್ಲಾ ಶಾಸನ ಸೂಚಿ


೫. ವಿ.ಜಿ.ಶಾ.ಸೂ : ವಿಜಾಪುರ ಜಿಲ್ಲಾ ಶಾಸನ ಸೂಚಿ

೬. ಗ.ಜಿ.ದೇ.ಕೋ : ಗದಗ ಜಿಲ್ಲೆಯ ದೇವಾಲಯ ಕೋಶ


೭. ಕ.ವಿ.ಶಾ.ಸಂ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.



ಮಲ್ಲಿಕಾರ್ಜುನ ತ್ರಿಕೂಟ ದೇವಾಲಯ



ಜೋಡಿ ಕಳಸದ ವಾಗೇಶ್ವರ ದೇವಾಲಯ



ಅರಸಿಬೀದಿಯ ಏಕಕೂಟ ದೇವಾಲಯ

ಅರಸಿಬೀದಿಯ ತ್ರಿಕೂಟ ದೇವಾಲಯ

